ಪುಸ್ತಕ ಪ್ರಪಂಚ

ಏಪ್ರಿಲ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೬ ಸಂಚಿಕೆ ೭

ಏಪ್ರಿಲ್-೧೯೯೬

ಮುಖ ಚಿತ್ರ :
ಮಹಾವೀರ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

ಅಹಿಂಸೆಯ ಪ್ರವಾದಿ ಮಹಾವೀರ

ಜಿ. ಎಸ್. ಭಟ್ಟ

ಭಾರತದ ಇತಿಹಾಸದಲ್ಲಿ ಕ್ರಿ. ಪೂ. ಆರನೆಯ ಶತಮಾನ ಧಾರ್ಮಿಕ ಪುನರುತ್ಥಾನದ ಯುಗವೆನಿಸಿದೆ. ಈ ಯುಗದಲ್ಲಿ ಜನ್ಮತಾಳಿದ ಇಬ್ಬರು ಮಹಾಪುರುಷರು—ಗೌತಮ ಬುದ್ಧ ಮತ್ತು ಮಹಾವೀರ. ಸತ್ಯ-ಅಹಿಂಸೆಯ ದಿವ್ಯ ಸಂದೇಶವನ್ನು ಇವರಿಬ್ಬರೂ ಜಗತ್ತಿಗೆ ಸಾರಿದರು. ಇಬ್ಬರು ಮಹಾಪುರುಷರೂ ಬಂದಿದ್ದು ರಾಜವಂಶದಿಂದ, ಆದರೆ ಅವರ ಹೃದಯ ಸ್ಪಂದಿಸಿದ್ದು ಜನ ಸಾಮಾನ್ಯರಿಗಾಗಿ.

ಆರನೆಯ ಶತಮಾನವನ್ನು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಅಲ್ಲೋಲ ಕಲ್ಲೋಲದ ಯುಗವೆಂದು ವರ್ಣಿಸಲಾಗಿದೆ. ಅರಸರು ನಿರಂಕುಶ ಪ್ರಭುಗಳಾಗಿದ್ದರು, ಪುರೋಹಿತ ವರ್ಗದ ಹಿಡಿತ ಸಮಾಜದ ಮೇಲೆ ಬಿಗಿಯಾಗಿತ್ತು. ಜನ ಪುರೋಹಿತ ವರ್ಗದ ಸಂಪ್ರದಾಯದ ನೊಗದಿಂದ ಕಳಚಿಕೊಳ್ಳಬೇಕೆಂದು ಒಂದು ಕಡೆ ಹೋರಾಟ ನಡೆಸಿದ್ದರೆ ಇನ್ನೊಂದೆಡೆ ಅರಸೊತ್ತಿಗೆಯ ನಿರಂಕುಶ ಪ್ರಭುತ್ವದ ನೊಗದಿಂದ ಕಳಚಿಕೊಳ್ಳಬೇಕೆಂದು ಹೋರಾಡುತ್ತಿದ್ದರು. ಹಳೆಯ ವಿಚಾರಗಳಿಗೆ ಎಲ್ಲೆಲ್ಲೂ ಪ್ರತಿಭಟನೆ ಕಂಡುಬರುತ್ತಿತ್ತು. ಗ್ರೀಸ್‌ನಲ್ಲಿ ಹೆರಾಕ್ಲಿಟಸ್ ತನ್ನ ಹೊಸ ಸಿದ್ಧಾಂತ ಮಂಡಿಸಿದ್ದ. ಇರಾನಿನಲ್ಲಿ ಝೊರೊಸ್ಟರ್ ಆ ದೇಶದಲ್ಲಿದ್ದ ಮೂಢನಂಬಿಕೆಯನ್ನು ಪ್ರತಿಭಟಿಸಿದ. ಚೀನದಲ್ಲಿ ಕಾನ್‌ಫ್ಯೂಸಿಯಸ್ ಜನರ ಕರ್ತವ್ಯಗಳ ಬಗ್ಗೆ ಬೋಧಿಸಿ ಜನಪ್ರಿಯನಾದ. ಭಾರತದಲ್ಲಿ ವೈದಿಕ ಧರ್ಮ ತನ್ನ ಮೂಲ ಪಾವಿತ್ರ್ಯವನ್ನು ಕಳೆದುಕೊಂಡಿತ್ತು. ಯಜ್ಞಯಾಗಾದಿಗಳಿಗೆ ಪ್ರಾಣಿ ಬಲಿ ನಡೆಯುತ್ತಿತ್ತು. ಕೆಲಸಂದರ್ಭಗಳಲ್ಲಿ ನರಬಲಿಯೂ ನಡೆದದ್ದುಂಟು. ಧಾರ್ಮಿಕ ಆಚರಣೆ ಮತ್ತು ವಿಧಿಗಳನ್ನು ಆಚರಿಸುವುದು ಸಿರಿವಂತರಿಗೆ ಮತ್ತು ಮೇಲ್ವರ್ಗದ ಕೆಲವೇ ಜನರಿಗೆ ಮಾತ್ರ ಸಾಧ್ಯವಿತ್ತು. ಮಂತ್ರದಿಂದ ಯುದ್ಧಗಳಲ್ಲಿ ಜಯಗಳಿಸಬಹುದು, ರೋಗರುಜಿನಗಳನ್ನು ಹೋಗಲಾಡಿಸಬಹುದು, ಸಂಪತ್ತನ್ನು ಹೆಚ್ಚಿಸಿಕೊಳ್ಳಬಹುದು ಎಂಬ ನಂಬಿಕೆಯನ್ನು ಪುರೋಹಿತ ವರ್ಗ ಹುಟ್ಟಿಸಿತ್ತು. ಧರ್ಮರಕ್ಷಣೆಯ ಸಂಪೂರ್ಣ ಹೊಣೆ ತಮ್ಮದೆಂದು ಆ ವರ್ಗ ಭಾವಿಸಿತ್ತು. ಸಮಾಜವನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿತ್ತು. ಜಾತಿ ಪದ್ಧತಿಗಳ ಕಠಿಣ ಆಚರಣೆಯಿಂದಾಗಿ ಸಾಮಾಜಿಕ ಅಂತರ ಹೆಚ್ಚಿತ್ತು. ಸ್ತ್ರೀಯರನ್ನು ಅಗೌರವದಿಂದ ಕಾಣಲಾಗುತ್ತಿತ್ತು. ಬಹುಪತ್ನಿತ್ವ ಜಾರಿಗೆ ಬಂತು. ಜೀವನ

ಮರಣ ಕುರಿತಂತೆ ಜನಸಾಮಾನ್ಯರಲ್ಲಿ ಗೊಂದಲ ಸೃಷ್ಟಿಸಲಾಯಿತು. ಮೇಲ್ವರ್ಗದವರು ಬಳಸುವ ಸಂಸ್ಕೃತ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಉತ್ತರ ಭಾರತ ಹದಿನಾರು ರಾಜ್ಯಗಳಾಗಿ ಛಿದ್ರವಾಗಿತ್ತು. ರಾಜಕೀಯ ಐಕ್ಯವಾಗಲಿ, ಸಂಘಟನೆಯಾಗಲಿ ಇರಲಿಲ್ಲ. ಅರಸರು ಒಬ್ಬರ ವಿರುದ್ಧ ಇನ್ನೊಬ್ಬರು ಕತ್ತಿ ಮಸೆಯುತ್ತಿದ್ದರು. ಒಟ್ಟಿನಲ್ಲಿ ಅಂದಿನ ಭಾರತೀಯ ಜೀವನ ಅಸ್ಥಿರವಾಗಿತ್ತು. ಅರಾಜಕತೆ ತಾಂಡವವಾಡುತ್ತಿತ್ತು. ಈ ಅಸ್ಥಿರತೆ ಹೋಗಲಾಡಿಸಿ ಜನಸಾಮಾನ್ಯರಿಗೆ ಮಾರ್ಗದರ್ಶನ ನೀಡಬಲ್ಲ ಸಮರ್ಥ ಹಾಗೂ ಪ್ರಭಾವಶಾಲಿ ವ್ಯಕ್ತಿಯೊಬ್ಬನ ಅಗತ್ಯವಿತ್ತು, ಇಂತಹ ಸಂದರ್ಭದಲ್ಲಿಯೇ ಮಹಾವೀರನು ಜನಿಸಿ. ತನ್ನ ಕಠಿಣ ಸಾಧನೆಗಳಿಂದ ಕೇವಲ ಜ್ಞಾನ ಸಂಪಾದಿಸಿ ಧರ್ಮೋಪದೇಶಗಳಿಂದ ಜನಜಾಗೃತಿಯ ಕಹಳೆಯನ್ನೂದಿದ.

ಪ್ರಾಚೀನ ಕಾಲದಲ್ಲಿ ಲಿಚ್ಛವಿ ನಾಡೆಂದೇ ಕರೆಯಲಾಗುತ್ತಿದ್ದ ಗಣರಾಜ್ಯ. ಇದರ ರಾಜಧಾನಿ ವೈಶಾಲಿ. ಇದು ಪ್ರಾಚೀನ ಭಾರತದಲ್ಲಿ ಬಹುಪ್ರಸಿದ್ಧ ನಗರ. ಈ ನಗರದ ಮಧ್ಯೆ ಗಂಡಕೀ ನದಿ ಹರಿಯುತ್ತಿತ್ತು. ಆ ನದಿಯ ಎರಡು ತೀರಗಳಲ್ಲಿ ಎರಡು ಉಪ-ನಗರಗಳಿದ್ದುವು. ಅವುಗಳಲ್ಲಿನ ಒಂದು ಉಪಗ್ರಾಮ ಕ್ಷತ್ರಿಯಕುಂಡ. ಈ ಗ್ರಾಮದ ಗಣರಾಜ ಸಿದ್ಧಾರ್ಥ. ಆತನ ಹೆಂಡತಿ ಮಹಾರಾಜ ಚೇಟಕನ ಹಿರಿಯ ಪುತ್ರಿ ತ್ರಿಶಲಾದೇವಿ. ಇವಳು ಚೇಟಕನ ಸಹೋದರಿ ಎಂದೂ ಕೆಲವರ ಅಭಿಪ್ರಾಯ. ಈ ದಂಪತಿಗಳಿಗೆ ಕ್ರಿ. ಪೂ. ೫೯೯ರಲ್ಲಿ ಜನಿಸಿದ ಜ್ಞಾನ ಭಾಸ್ಕರನೇ ಮಹಾವೀರ. ಕ್ಷತ್ರಿಯಕುಂಡ ಗ್ರಾಮವು ವೈಶಾಲಿಯದೇ ಉಪನಗರವಾದ್ದರಿಂದ ಮಹಾವೀರನಿಗೆ "ವೈಶಾಲೀಯ" ಎಂಬ ಹೆಸರೂ ಇದೆ. ಸಿದ್ಧಾರ್ಥ ಮತ್ತು ತ್ರಿಶಲಾದೇವಿ ಇವರಿಬ್ಬರೂ ಪಾರ್ಶ್ವನಾಥ ತೀರ್ಥಂಕರರ ಶ್ರಾಮಣ ಪರಂಪರೆಯ ಅನುಯಾಯಿಗಳು. ಅವರು ಜ್ಞಾತೃಕ ಕ್ಷತ್ರಿಯರೆಂದು ಹೇಳಲಾಗಿದೆ. ಸಿದ್ಧಾರ್ಥ ಶಸ್ತ್ರ ಮತ್ತು ಶಾಸ್ತ್ರ ವಿದ್ಯೆಗಳೆರಡರಲ್ಲೂ ನಿಪುಣನಾಗಿದ್ದ.

ಮಹಾವೀರನ ಜನ್ಮಕ್ಕೆ ಮುನ್ನ ಅವನ ತಾಯಿ ತ್ರಿಶಲಾದೇವಿ ಹಲವು ದಿವ್ಯ ಸ್ವಪ್ನಗಳನ್ನು ಕಂಡಳೆಂದು ಜೈನ ಪುರಾಣಗಳು ಉಲ್ಲೇಖಿಸುತ್ತವೆ. ಅವಳು ಕನಸಿನಲ್ಲಿ ಕಂಡ ಆನೆ, ತೀರ್ಥಂಕರ ಪದ ಸೂಚಿಸಿದರೆ, ಸಿಂಹ, ಲಕ್ಷ್ಮಿ, ಪುಷ್ಪಗಳು ಬಾಲಕನ ಪರಾಕ್ರಮ, ದಿವ್ಯರೂಪ, ಧನಧಾನ್ಯ, ಸಂಪತ್ತುಗಳ ಸಂಕೇತವಾಗಿದ್ದುವು. ಮಹಾವೀರನ ಜನನವಾದಾಗ ಇಡೀ ರಾಜ್ಯವೇ ಅದನ್ನು ಸಂತೋಷದಿಂದ ಆಚರಿಸಿತು. ಹತ್ತು ದಿನಗಳ ಕಾಲ ದೀಪೋತ್ಸವ ಧಾನಧರ್ಮಗಳನ್ನು ನಡೆಸಲಾಯಿತು. ಅತ್ಯಂತ ಸುಂದರನಾದ ಬಾಲಕ ಮಹಾವೀರ. ಆತ ಜನಿಸಿದ ಬಳಿಕ ರಾಜ್ಯದ ಸಂಪತ್ತು ಹೆಚ್ಚಿದ್ದಷ್ಟೇ ಅಲ್ಲ, ಧನಧಾನ್ಯಗಳಿಂದ ಕಣಜವೂ ಕನಕದಿಂದ ಬೊಕ್ಕಸವೂ ತುಂಬಿತು ಎನ್ನಲಾಗಿದೆ. ಹೀಗೆ ವೃದ್ಧಿಯಾದ್ದರಿಂದ ಸಿದ್ಧಾರ್ಥ ಮಗನಿಗೆ ವರ್ಧಮಾನ ಎಂದು ನಾಮಕರಣ ಮಾಡಿದ. ಎಂಟು ವರ್ಷದವನಾದಾಗ ವರ್ಧಮಾನನನ್ನು ಕಲಾಚಾರ್ಯ ಎಂಬ ಗುರುವಿನ ಬಳಿ ಕಳುಹಿಸಲಾಯಿತು. ಎಳೆಯ ವಯಸ್ಸಿನಲ್ಲಿಯೇ ವರ್ಧಮಾನ ವ್ಯಾಕರಣ ಮತ್ತು ಸಾಹಿತ್ಯದಲ್ಲಿ ಪಾರಂಗತನಾದ. ಮಹಾ

ವೀರನ ಬುದ್ಧಿವಂತಿಕೆಯನ್ನು ಮೆಚ್ಚಿದ ಸಂಜಯ ಮತ್ತು ವಿಜಯ ಎಂಬ ಮುನಿಗಳು ಇವನಿಗೆ ಸನ್ಮತಿ ಎಂಬ ಹೆಸರು ಇಟ್ಟರು. ಹೀಗೆ ಬಾಲ್ಯದಲ್ಲೇ ವರ್ಧಮಾನನಿಗೆ ತ್ಯಾಗಿಗಳ ಸಂಗ ಪ್ರಾಪ್ತವಾಯಿತು. ಓದಿನಂತೆ ಆಟದಲ್ಲಿಯೂ ಮಹಾವೀರನನ್ನು ಮೀರಿಸುವವರು ಇರಲಿಲ್ಲ. ಶಸ್ತ್ರಾಸ್ತ್ರ, ರಾಜನೀತಿಯಲ್ಲಿಯೂ ಆತ ಪಾರಂಗತನಾದ. ಯುವ ವಯಸ್ಸಿಗೆ ಬಂದಾಗಲೂ ಆತ ಸಂಯಮಿ, ದಯಾಶೀಲ. ಅವನಿಗೆ ಅತ್ಯಂತ ಪ್ರಿಯವಾದದ್ದು ಏಕಾಂಗಿಯಾಗಿರುವುದು. ಒಮ್ಮೊಮ್ಮೆ ಏಕಾಂಗಿಯಾಗಿ ಚಿಂತಿಸುತ್ತ ಕುಳಿತಿರುತ್ತಿದ್ದ. ವರ್ಧಮಾನ ಬಲಶಾಲಿ. ಒಮ್ಮೆ ಸೊಕ್ಕಿ ಬಂದ ಆನೆಯನ್ನು ಸ್ಥಿಮಿತಕ್ಕೆ ತಂದನೆಂದೂ ಜನ ಅವನನ್ನು ಅಂದಿನಿಂದ 'ಮಹಾವೀರ' ಎಂದು ಕರೆದರೆಂದು ಜೈನ ಆಗಮಗಳಲ್ಲಿ ಉಲ್ಲೇಖಿಸಲಾಗಿದೆ. ಧರ್ಮಶ್ರವಣ, ಶ್ರದ್ಧೆ, ಮಾನವೀಯತೆ, ಸಂಯಮ ಈ ನಾಲ್ಕೂ ಗುಣಗಳು ಶ್ರೇಷ್ಠ ಸಾಧನೆಯೆಂದು ಆತ ಭಾವಿಸಿದ. ತನ್ನ ಪ್ರಶ್ನೆಗಳಿಗೆ ತಾನೇ ಉತ್ತರ ಕಂಡುಕೊಳ್ಳಲು ಮಹಾವೀರ ಮೊದಲಾದ. ತನ್ನ ಮೂವತ್ತನೆಯ ವಯಸ್ಸಿನಲ್ಲಿ ಆರು ಉಪವಾಸಗಳ ಬಳಿಕ ಜಿನದೀಕ್ಷೆ ಸ್ವೀಕರಿಸಿದ. ಕ್ಷತ್ರಿಯಕುಂಡ ಗ್ರಾಮದ ಹೊರಗಿರುವ ಜ್ಞಾತ್ರಸಂಡ ಉದ್ಯಾನವನಕ್ಕೆ ತೆರಳಿ ಐದು ಮುಷ್ಟಿಯಿಂದ ತನ್ನ ಕೂದಲನ್ನು ಕಿತ್ತುಕೊಂಡು ಶ್ರಮಣನಾದ. ಮಹಾವೀರನ ವಿವಾಹ ಯಶೋದೆ ಎಂಬುವಳೊಂದಿಗೆ ನಡೆಯಿತೆಂದು ಕೆಲವರ ಅಭಿಪ್ರಾಯ. ಆದರೆ ವಿವಾಹದ ಬಗ್ಗೆಯಾಗಲಿ, ಸಾಂಸಾರಿಕ ಜೀವನದ ಬಗ್ಗೆಯಾಗಲಿ ಅವನಿಗೆ ಆಸಕ್ತಿ ಇರಲಿಲ್ಲ. ಯಾವ ಮನುಷ್ಯ ಕಾಮವಾಸನೆ ಹೊಂದಿರುತ್ತಾನೋ ಅವನು ಪುನಃ ಪುನಃ ಜನ್ಮತಾಳುತ್ತಾನೆಂಬುದು ಅವನ ಭಾವನೆ. ಕಾಮ, ಲೋಭ, ಮೋಹಗಳಿಂದ ಬಂಧಿತವಾದ ಸಂಸಾರದಿಂದ ಬಿಡುಗಡೆ ಹೊಂದುವುದೇ ಅವನ ಉದ್ದೇಶವಾಗಿತ್ತು. ಜಿನದೀಕ್ಷೆ ಪಡೆಯುವುದೇ ತನ್ನ ಮಾನಸಿಕ ಸಂಘರ್ಷಗಳಿಗೆ ಮಂಗಳ ಹಾಡುವ ಮಾರ್ಗವೆಂದು ಆತ ಅರಿತ. ಮಹಾವೀರ ಜಿನನಾಗಬೇಕೆಂದಾಗ ಪರಿವಾರದಲ್ಲಿ ಬಂಧುಗಳು ಹೇಳಿದರು "ನಿನ್ನ ಸಮರ್ಥ ನೇತೃತ್ವದಲ್ಲಿ ಈ ಗಣರಾಜ್ಯ ಪ್ರವರ್ಧಮಾನಕ್ಕೆ ಬರಲಿ, ನಿನ್ನದು ಭೋಗಿಸುವ ವಯಸ್ಸೇ ವಿನಹ ತ್ಯಾಗದ ವಯಸ್ಸಲ್ಲ"

ಒಬ್ಬ ರಾಜ ಪರಿವಾರದವನು ಸನ್ಯಾಸಿಯಾಗುವುದು ಅಂದಿನ ದಿನಗಳಲ್ಲಿ ಆಶ್ಚರ್ಯದ ವಿಷಯವಾಗಿತ್ತು. ಅಪಾರ ಜನಸಮೂಹ ಮಹಾವೀರನನ್ನು ಬೀಳ್ಕೊಟ್ಟಿತು. ಸನ್ಯಾಸಿಯಾದ ಬಳಿಕ ಹನ್ನೆರಡು ವರ್ಷಗಳ ಕಾಲ ಸುದೀರ್ಘ ತಪಸ್ಸು ಕಠಿಣ ವ್ರತಗಳನ್ನು ಮಹಾವೀರ ಕೈಗೊಂಡ. ಹಲವಾರು ರಾಜ್ಯಗಳಲ್ಲಿ ದೀರ್ಘಯಾತ್ರೆ ಮಾಡಿದ. ಏಕಾಂತ ಚಿಂತನೆ ಮತ್ತು ತಿರುಗಾಟದಲ್ಲಿಯೇ ಹಲವು ವರ್ಷಗಳು ಸಂದವು. ಹದಿನೈದು ದಿನಗಳ ಕಾಲ ನಿರಂತರ ಉಪವಾಸವನ್ನು ಆಚರಿಸಿದ್ದೂ ಉಂಟು. ಅವನು ಸತ್ಯದ ಅನ್ವೇಷಣೆಯಲ್ಲಿ ಕಾಡುಮೇಡುಗಳಲ್ಲಿ ಸಂಚರಿಸುತ್ತಿದ್ದಾಗ ನಾನಾ ರೀತಿಯ ದೈಹಿಕ ಹಿಂಸೆಗಳನ್ನೂ ಅನುಭವಿಸಿದ. ಲಾಡ್ ದೇಶದಲ್ಲಿನ ಜನ ಮಹಾವೀರನಿಗೆ ದೈಹಿಕ ಹಿಂಸೆ ಕೊಟ್ಟರೂ ಅದು ತನ್ನ ಸಂಯಮದ ಪರೀಕ್ಷೆ ಎಂದೂ ಆತ ಅದನ್ನು ಮೌನವಾಗಿ ಸಹಿಸಿದ. ಪ್ರಕೃತಿ ನೀಡಿದ ರೂಪವನ್ನು ಮುಚ್ಚಿಡುವ ಅಗತ್ಯವೇನಿದೆ ಎಂದು ಭಾವಿಸಿದ ಆತ ವಸ್ತ್ರತ್ಯಾಗಮಾಡಿ

ದಿಗಂಬರನಾಗಿಯೇ ಸಂಚರಿಸಿದ. ತನ್ನ ಸಾಧನೆಯ ಸಿದ್ಧಿಗಾಗಿ ಹಲವು ಕಾಲ ಮೌನಧಾರಣೆಮಾಡಿದ. ಅವನ ಹನ್ನೆರಡು ವರ್ಷಗಳ ಕಠಿಣ ತಪಸ್ಸು ಫಲಿಸಿತು. ಒಂದು ದಿನ ಮಹಾವೀರ ಜೃಂಭಿಕಾ ಗ್ರಾಮದ ಸಮೀಪ ಋಜುಕೂಲ ನದಿ ದಡದಲ್ಲಿದ್ದ ಶಾಲವೃಕ್ಷದಡಿಯಲ್ಲಿ ಧ್ಯಾನಮಗ್ನನಾಗಿದ್ದ. ಅಂದು ವೈಶಾಖ ಶುಕ್ಲ ದಶಮಿ. ಅವನಲ್ಲಿದ್ದ ಅಜ್ಞಾನ, ಮೋಹ, ಅಶ್ರದ್ಧೆಗಳು ದೂರ ಸರಿದವು. ಅವನಿಗೆ ದಿವ್ಯಜ್ಞಾನ ಪ್ರಾಪ್ತಿಯಾಯಿತು. ಆತ ಕೇವಲ ಜ್ಞಾನಿಯಾದ. ಹೀಗೆ ಪ್ರಾಪ್ತವಾದ ದಿವ್ಯಜ್ಞಾನವನ್ನು ಜನ ಕಲ್ಯಾಣಕ್ಕಾಗಿ ಧರ್ಮೋಪದೇಶದ ಮೂಲಕ ಮಾಡಬೇಕೆಂದು ಮಹಾವೀರ ನಿರ್ಧರಿಸಿದ. ಜನಸಾಮಾನ್ಯರ ಹೃದಯ ತಲಪಲು ಅವರದೇ ಭಾಷೆಯನ್ನು ಮಾಧ್ಯಮವಾಗಿ ಬಳಸಿದರೆ ಮಾತ್ರ ಸಾಧ್ಯ ಎಂದು ಭಾವಿಸಿದ ಆತ ತನ್ನ ಉಪದೇಶಗಳನ್ನು ಅರ್ಧಮಾಗಧಿಯ ಮೂಲಕ ಪ್ರಚುರಪಡಿಸಲು ನಿರ್ಧರಿಸಿದ.

ಮಹಾವೀರನಿಗೆ ಕೇವಲಜ್ಞಾನ ಪ್ರಾಪ್ತವಾದದ್ದು ಚೇಟಿಕ, ಶ್ರೇಣಿಕ, ಬಿಂಬಸಾರ ಮತ್ತಿತರ ರಾಜಮನೆತನಗಳಿಗೆ ತಲಪಿತು. ಅವನ ಉಪದೇಶ ಕೇಳಲು ಸಾವಿರಾರು ಜನ ಬರಲಾರಂಭಿಸಿದರು. ಆ ಉಪದೇಶ ಯಾವುದೇ ವರ್ಗಕ್ಕೆ ಸೇರಿದ್ದಲ್ಲ ಎಂಬ ಅರಿವಾದಾಗ ಜನರಿಗೆ ತೃಪ್ತಿಯಾಯಿತು. ಆತನ ಸಭೆಗಳಿಗೆ ಸಮವಶರಣಸಭೆ ಎಂದು ಕರೆಯಲಾಗುತ್ತಿತ್ತು. ವೇದಗಳಲ್ಲಿ ಪಾರಂಗತರಾಗಿದ್ದ ಇಂದ್ರಭೂತಿ ಗೌತಮ ಮಹಾವೀರನ ಉಪದೇಶದ ಸಂಮೋಹನಕ್ಕೆ ಒಳಗಾಗಿ ತನ್ನ ಶಿಷ್ಯರೊಂದಿಗೆ ಮಹಾವೀರನ ಶಿಷ್ಯತ್ವ ಅಂಗೀಕರಿಸಿದ. ಮಹಾವೀರನ ಪ್ರಧಾನ ಶಿಷ್ಯರನ್ನು ಗಣಧರರೆಂದು ಹೆಸರಿಸಲಾಗಿದೆ. ಅವರೆಂದರೆ ಇಂದ್ರಭೂತಿ, ಅಗ್ನಿಭೂತಿ, ವಾಯುಭೂತಿ, ಆರ್ಯವ್ಯಕ್ತ, ಸುಧರ್ಮಾ, ಮಂಡಿತ, ಮೌರ್ಯಪುತ್ರ, ಅಕಂಪಿತ, ಅಚಲಭ್ರಾತಾ, ಮೇತಾರ್ಯ ಮತ್ತು ಪ್ರಭಾಸ. ಮಹಾವೀರನ ಪ್ರಥಮ ಉಪದೇಶ ನಡೆದದ್ದು ರಾಜಗೃಹದ ವಿಪುಲಾಚಲದಲ್ಲಿ ಏರ್ಪಡಿಸಲಾದ ಸಮವಶರಣ ಸಭೆಯಲ್ಲಿ. ಪ್ರತ್ಯೇಕ ವಸ್ತುಗಳಲ್ಲಿಯೂ ಉತ್ಪಾದ, ವ್ಯಯ, ಧ್ರುವ್ಯಗಳೆಂಬ ಮೂರು ಗುಣಗಳಿರುತ್ತವೆ ಎಂಬುದನ್ನು ಆತ ತಿಳಿಸಿದ. ಸುಮಾರು ಮೂವತ್ತು ವರ್ಷಗಳಕಾಲ ಮಹಾವೀರ ಭಾರತದ ಅನೇಕ ರಾಜ್ಯಗಳಲ್ಲಿ ಉಪದೇಶ ಮಾಡುತ್ತ ವಿಹಾರ ನಡೆಸಿದ. ಅವನ ಉಪದೇಶ ಜನಸಾಮಾನ್ಯರಿಂದ ರಾಜನವರೆಗೂ ಪ್ರಭಾವ ಬೀರುತ್ತಿತ್ತು. ದಿನೇ ದಿನೇ ಮಹಾವೀರನ ಶಿಷ್ಯರ ಸಂಖ್ಯೆ ಹೆಚ್ಚಿತು. ಇದಕ್ಕಾಗಿ ಆತ ಚತುರ್ವಿಧ ಸಂಘ ವ್ಯವಸ್ಥೆ ಮಾಡಿದ. ಅವೆಂದರೆ ಸಾಧು, ಸಾಧ್ವಿ, ಶ್ರಾವಕ, ಶ್ರಾವಿಕೆ. ಅವನ ಉಪದೇಶಗಳು ಜೀವನದ ಸಮಸ್ಯೆಗಳಿಗೆ ನೇರವಾಗಿ ಪರಿಹಾರ ಒದಗಿಸುತ್ತಿದ್ದುವು. ಯಜ್ಞ ಮಾಡುವುದರಿಂದ ಪ್ರಾಣಿಹಿಂಸೆ ಒಂದೇ ಅಲ್ಲ, ಸಮಾಜದ ಅರ್ಥವ್ಯವಸ್ಥೆಯ ಮೇಲೆಯೂ ಉಂಟಾಗುವ ಪರಿಣಾಮಗಳನ್ನು ವಿವರಿಸಿದ. ಧರ್ಮ ಒಂದು ವರ್ಗದ ಸೊತ್ತಲ್ಲ, ಅದನ್ನು ಯಾರು ಬೇಕಾದರೂ ಅಚರಿಸಬಹುದೆಂದು ಬೋಧಿಸಿದ. ಮಾನವ ತನ್ನ ಕರ್ಮಗಳಿಂದ ಹಲವಾರು ಬಾರಿ ಜನಿಸುವನು. ಸಾವು ಶರೀರಕ್ಕೆ ವಿನಹ ಆತ್ಮಕ್ಕಲ್ಲ. ಮೋಕ್ಷ

ಸಾಧಿಸಲು ಗೃಹಸ್ಥನಾದವನು ಅಹಿಂಸೆ, ಸತ್ಯ, ಅಪರಿಗ್ರಹ, ಅಚಾರ್ಯಗಳನ್ನು ಆಚರಿಸಬೇಕು. ಇವೇ ಸನ್ನಡತೆ, ನಂಬಿಕೆ ಮತ್ತು ನಿಜವಾದ ಜ್ಞಾನ. ಸಾಧು ಸಂತರನ್ನು ಗೃಹಸ್ಥ ಗೌರವದಿಂದ ಕಾಣಬೇಕು, ಅವರಿಗೆ ಉಣಬಡಿಸಬೇಕು. ಸನ್ಯಾಸಿ ಹಗಲಿನಲ್ಲೇ ಸಂಚರಿಸಬೇಕು. ಆಗ ತಾನು ಜೀವಿಸಿರುವ ಯಾವ ವಸ್ತುವನ್ನೂ ತುಳಿದಿಲ್ಲ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಸನ್ಯಾಸಿಗೆ ಆತ್ಮಪ್ರಶಂಸೆ ಸಲ್ಲದು. ಆತ ಸ್ತ್ರೀಯರ ಬಗ್ಗೆ ಯೋಚಿಸಬಾರದು. ಜಗತ್ತಿನಲ್ಲಿಯ ಪ್ರತಿಯೊಂದು ಜೀವಿಗೂ ಜೀವವಿದೆ ಅದು ನೋವನ್ನು ಅನುಭವಿಸುವುದು. ಆದ್ದರಿಂದ ಅಹಿಂಸೆಗೆ ಅತ್ಯಂತ ಮಹತ್ತ್ವ ನೀಡಬೇಕು. ಹುಲ್ಲಿನ ತುದಿಯ ಮೇಲಿರುವ ನೀರಿನ ಬಿಂದುವಿನಂತೆ ಜೀವನ ಕ್ಷಣಿಕವಾದುದು. ಆತ್ಮನ ಮುಕ್ತಿ ಸಾಧಿಸುವುದೇ ನಮ್ಮ ಗುರಿಯಾಗಬೇಕು. ಸನ್ನಡತೆ, ಸರಿಯಾದ ಜ್ಞಾನ, ಸರಿಯಾದ ನಂಬಿಕೆಗಳಿಂದ ನಡೆದರೆ ಮೋಕ್ಷ ಸಾಧಿಸಬಹುದು. ರಾಜನ ಕರ್ತವ್ಯದ ಬಗ್ಗೆ ಮಹಾವೀರ ಹೀಗೆ ಹೇಳಿದ "ಜನಕಲ್ಯಾಣವೇ ರಾಜನ ಕರ್ತವ್ಯ, ಇದಕ್ಕಾಗಿ ಆತ ತೆರಿಗೆ ಪಡೆಯಬಹುದು, ಆದರೆ ದುಂಬಿ ಹೂವಿನಿಂದ ಮಕರಂದ ಸ್ವೀಕರಿಸುವಂತೆ ರಾಜ ಪ್ರಜೆಗಳಿಂದ ತೆರಿಗೆ ಪಡೆಯಬೇಕು." ಜನರು ವರ್ಗ ಬೇಧವನ್ನು ಆಚರಿಸಕೂಡದು.

ಮೋಕ್ಷಕ್ಕೆ ಸಾಧನ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ್ಯ. ಇವನ್ನು ಜೈನಧರ್ಮದಲ್ಲಿ 'ರತ್ನತ್ರಯ'ಗಳೆಂದು ಕರೆಯಲಾಗಿದೆ. ಸಾತ್ವಿಕ ಶ್ರದ್ಧೆಯೇ ಸಮ್ಯಕ್ ದರ್ಶನ. ಸಾತ್ವಿಕಜ್ಞಾನವೇ ಸಮ್ಯಕ್ ಜ್ಞಾನ. ಜೀವನದ ವಾಸ್ತವಿಕತೆ ಅರಿತುಕೊಳ್ಳಲು ಆಚರಿಸುವ ಆಚರಣೆ ಸಮ್ಯಕ್ ಚಾರಿತ್ರ್ಯ. ಮಹಾವೀರನು ನೀಡಿರುವ ಜೀವನದ ಆಚಾರ ಸಂಹಿತೆಗಳು ಹೀಗಿವೆ: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಧರ್ಮ, ಅರ್ಥ, ಕಾಮ, ಮೋಕ್ಷ ಇವನ್ನು ಪರಸ್ಪರ ವಿರೋಧವಿಲ್ಲದೆ ಅನುಸರಿಸಬೇಕು ಎಂದು ಮಹಾವೀರನು ಹೇಳಿದ. ದೇವರ ಸೃಷ್ಟಿಯ ಬಗ್ಗೆ ಆತ ಹೀಗೆ ಹೇಳಿದ್ದಾನೆ "ದೇವರು ಸೃಷ್ಟಿಕರ್ತನಾಗಿದ್ದರೆ ಸರ್ವರಿಗೂ ಸಮಾನವಾದ ಸುಖವನ್ನೇಕೆ ನೀಡಿಲ್ಲ, ಮಾನವನೇ ದೇವರು. ನಮ್ಮನ್ನು ನಾವು ಮೊದಲು ಅರಿತುಕೊಳ್ಳಬೇಕು, ನಮ್ಮಲ್ಲೀ ದೈವೀ ಗುಣಗಳಿವೆ ಅವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕು."

ಮಹಾವೀರನು ಜೀವ ಮತ್ತು ಅಜೀವ ಕುರಿತಂತೆ ಸಪ್ತ ಉಪದೇಶಗಳನ್ನು ನೀಡಿದ. ಅವೆಂದರೆ ಜೀವ, ಅಜೀವ, ಅಸ್ರವ, ಬಂಧ, ಸಂವಾದ, ನಿರ್ಜರ ಮತ್ತು ಮೋಕ್ಷ. ಇವುಗಳ ವಿವರಣೆಯೇ ಮಹಾವೀರನ ಕರ್ಮಸಿದ್ಧಾಂತವೆನಿಸಿವೆ. ತನ್ನ ಕರ್ಮಗಳ ಸೃಷ್ಟಿಕರ್ತ ಮನುಷ್ಯನೇ. ಆದ್ದರಿಂದ ಅವುಗಳ ಪರಿಣಾಮವನ್ನು ಅವನೇ ಭೋಗಿಸಬೇಕು. ಕರ್ಮಬಂಧನದಿಂದ ಮೋಕ್ಷ ಪಡೆಯಲು ಸ್ವಪ್ರಯತ್ನದ ಅಗತ್ಯವಿದೆ. ದೇವರ ಅವತಾರದ ಕಲ್ಪನೆಯನ್ನೂ ಒಪ್ಪಿಕೊಳ್ಳಲಿಲ್ಲ. ಅವನು ಅಹಿಂಸಾ ಮೂಲವಾದ ಆಚಾರವನ್ನು ಪ್ರಚುರಪಡಿಸಿದ. ಶ್ರಾವಕರ ಆಚಾರ ಸಂಹಿತೆಯನ್ನು ರೂಪಿಸಿ ಅದರಲ್ಲಿ ನಾಲ್ಕು ವಿಧವಾದ ದಾನಗಳನ್ನು ಉಲ್ಲೇಖಿಸಿದ್ದಾನೆ. ಅವುಗಳೆಂದರೆ ಔಷಧಿದಾನ, ಶಾಸ್ತ್ರದಾನ, ಅಭಯದಾನ, ಆಹಾರದಾನ. ಭಗವಾನ್ ಮಹಾವೀರ ಉಪದೇಶ ನೀಡಿದ ಬಳಿಕ ಹೀಗೆ ಹೇಳಿದ. 'ನಾನು ಹೇಳಿದ್ದ

ನ್ನೆಲ್ಲಾ ಒರೆಗಲ್ಲಿಗೆ ಹಚ್ಚಿನೋಡಿರಿ, ನಾನು ನಿಮಗಿಂತ ಜ್ಞಾನಿಯೆಂದು ಭಾವಿಸಿ ನಾನು ಹೇಳಿದ್ದನ್ನೆಲ್ಲಾ ನೀವು ಒಪ್ಪಿಕೊಳ್ಳಬೇಕಿಲ್ಲ' ಅತ್ಯಂತ ಉನ್ನತ ಸಾಧನೆ ಹೊಂದಿರುವವರು ಮಾತ್ರ ಹೀಗೆ ನುಡಿಯಬಲ್ಲರು.

ಮಹಾವೀರ ಉಪದೇಶಿಸಿದ ಕೆಲವು ಮಹತ್ತ್ವದ ಬೋಧನೆಗಳಿವು:

—ಮನುಷ್ಯ ಬಾಹ್ಯ ಶತ್ರುವಿನೊಂದಿಗೆ ಯುದ್ಧ ನಡೆಸದೆ ಆತ್ಮನೊಂದಿಗೆ ಯುದ್ಧ ಸಾರಬೇಕು, ಆತ್ಮ ಜಯಿಸಿದವನೇ ನಿಜವಾದ ಸುಖಿ.


—ದೇಹವೊಂದು ನೌಕೆ, ಆತ್ಮವೇ ಅದರ ನಾವಿಕ, ಸಂಸಾರವೇ ಸಾಗರ, ಸಮಸ್ತ ಪ್ರಾಣಿಗಳನ್ನು ಆತ್ಮದಂತೆ ಕಾಣಬೇಕು ಅದರಲ್ಲಿಯೇ ಮನುಷ್ಯನ ಬದುಕಿನ ಔನ್ನತ್ಯವಿದೆ. ಧರ್ಮದ ಅರ್ಥವೇ ಅಹಿಂಸೆ,

—ಸಂಯಮ ಮತ್ತು ತಪಸ್ಸು.

—ಶ್ರವಣನಾಗುವುದು ಸಮತೆಯಿಂದ, ಬ್ರಾಹ್ಮಣನಾಗುವುದು ಬ್ರಹ್ಮಚರ್ಯದಿಂದ, ಮುನಿಯಾಗುವುದು ಜ್ಞಾನದಿಂದ, ತಪಸ್ವಿಯಾಗುವುದು ತಪೋನಿರತನಾಗುವುದರಿಂದ. ಜಗತ್ತಿನಲ್ಲಿ ಪ್ರಿಯವಾದದ್ದು ಜೀವ. ಹಿಂಸೆಯನ್ನು ಯಾವನು ತ್ಯಜಿಸುವನೋ ಅವನೇ ನಿಜವಾದ ಜ್ಞಾನಿ. ಜಗತ್ತಿನಲ್ಲಿ ಅಹಿಂಸೆಗಿಂತ ದೊಡ್ಡ ವಸ್ತು ಇನ್ನೊಂದಿಲ್ಲ. ಸತ್ಯವೇ ದೇವರು. ಕಬ್ಬಿಣದ ಮೊಳೆ ಬಾಣಗಳು ಅಲ್ಪಕಾಲ ನೋವನ್ನುಂಟುಮಾಡಬಲ್ಲವು ಆದರೆ ಬಿರುನುಡಿಗಳು ಹೃದಯದಿಂದ ಹೊರತೆಗೆಯಲಾರವು.

ಮಹಾವೀರ ಮೂವತ್ತು ವರ್ಷಗಳ ಕಾಲ ಭಾರತದ ನಗರ, ರಾಜ್ಯ ಗ್ರಾಮಗಳಲ್ಲಿ ಸಂಚರಿಸಿದ. ಜನಜಾಗೃತಿಯನ್ನುಂಟು ಮಾಡಿದ. ರಾಜರು ಪ್ರಜೆಗಳ ಕಲ್ಯಾಣದತ್ತ ಮನಸ್ಸಿಟ್ಟು ಕೆಲಸ ಮಾಡುವಂತೆ ಪ್ರೇರೇಪಿಸಿದ. ವಿಹಾರ ಮಾಡುತ್ತ ಆತ ಇಂದಿನ ಬಿಹಾರ ರಾಜ್ಯದ ಪಾವಾಕ್ಕೆ ತಲುಪಿದ. ಕ್ರಿ.ಪೂ. ೫೨೭ ಕಾರ್ತೀಕ ಕೃಷ್ಣಪಕ್ಷದ ಅಮಾವಾಸ್ಯೆಯ ಅಂತಿಮ ಜಾವದಲ್ಲಿ ಮಹಾವೀರ ನಿರ್ವಾಣ ಹೊಂದಿದ. ಅವನು ನಿರ್ವಾಣ ಹೊಂದಿದ ಪವಿತ್ರ ಸ್ಥಳದಲ್ಲಿ ಈಗ ಮಂದಿರವೊಂದನ್ನು ನಿರ್ಮಿಸಲಾಗಿದೆ. ಅಲ್ಲಿ ಮಹಾವೀರನ ಪಾದುಕೆಗಳಿವೆ. ಮಹಾವೀರನು ಜನಿಸಿದ ಚೈತ್ರಶುದ್ಧ ತ್ರಯೋದಶಿಯನ್ನು ಮಹಾವೀರ ಜಯಂತಿ ಎಂದು ಭಾರತದಾದ್ಯಂತ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತಿದೆ.

ಮಹಾವೀರ ಭಾರತದ ಧಾರ್ಮಿಕ ಸತ್ಪುರುಷ. ವರ್ಗರಹಿತ ಸಮಾಜ ಸ್ತ್ರೀಯರಿಗೆ ಗೌರವಸ್ಥಾನ, ಅಹಿಂಸೆ ಮೊದಲಾದವನ್ನು ಬೋಧಿಸಿದ ಒಬ್ಬ ಕ್ರಾಂತಿಕಾರಿ. ಮಾನವನ ವ್ಯಕ್ತಿತ್ವದ ವಿಕಾಸಕ್ಕಾಗಿ ಜನಸಾಮಾನ್ಯರ ಏಳಿಗೆಗಾಗಿ ಸಕಲ ಐಶ್ವರ್ಯಗಳನ್ನೂ ತ್ಯಜಿಸಿ ಕೇವಲ ಜ್ಞಾನ ಸಂಪಾದಿಸಿದ ಮಹಾವೀರ ನೀಡಿದ ಸಂದೇಶ ಅತ್ಯಮೂಲ್ಯವಾದುದಾಗಿದೆ. ಅವನು ನೀಡಿದ ದಿವ್ಯ ಸಂದೇಶಗಳನ್ನು ಪಾಲಿಸುವುದೇ ಇಂದು ಮಹಾವೀರ ಜಯಂತಿ ಎಂದು ನಾವು ಅವನಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.



ಸೂರ್ಯನನ್ನು U ಆಕಾರದ ಪಥದಲ್ಲಿ ಬಳಸಿ ಬಳಸಿ ಸಾಗುವ ಧೂಮಕೇತುವಿನ ಪಥ. ಬಾಲ ಸದಾ ಸೂರ್ಯವಿಮುಖ ದಿಶೆಗೆ ಚಾಚಿಕೊಂಡಿರುವುದೆಂಬುದನ್ನು ಗಮನಿಸಬೇಕು.

ಧೂಮಕೇತು ಹ್ಯಾಕುಟೇಕ್

ಜಿ. ಟಿ. ನಾರಾಯಣರಾವ್

ಈ ಲೇಖನ ಓದುವ ವೇಳೆಗೆ—ಏಪ್ರಿಲ್ ೧೯೯೬—ನೀವು ಸದ್ಯ ವಿಶೇಷ ಪತ್ರಿಕಾ ವಾರ್ತೆ ಆಗಿರುವ ಧೂಮಕೇತು ಹ್ಯಾಕುಟೇಕ್ ಬಗ್ಗೆ ಸಾಕಷ್ಟು ವಿವರಣೆಗಳನ್ನು ವಿವಿಧ ಮಾಧ್ಯಮಗಳ ಮೂಲಕ ಕೇಳಿರುವಿರಿ, ನೋಡಿರುವಿರಿ. ಆದರೂ ಈ ಮೂಲಭೂತ ಪ್ರಶ್ನೆಗೆ ನಿಮ್ಮ ಉತ್ತರ ಮಾತ್ರ, ಬಹುತೇಕ, ಧೂಮಕೇತುವಿನಷ್ಟೇ ಅಸ್ಪಷ್ಟ! ಪ್ರಶ್ನೆ "ಧೂಮಕೇತು ಎಂದರೇನು?" ಆನುವಂಶಿಕ ಪ್ರಶ್ನೆಗಳು "ಧೂಮಕೇತು ದರ್ಶನದಿಂದ ಪ್ರಪಂಚಕ್ಕೆ ಹಾನಿ ಇದೆಯೇ?" "ಧೂಮಕೇತು ಬಂದು ಭೂಮಿಗೆ ಬಡಿದರೇನಾದೀತು!" "ಧೂಮಕೇತುವನ್ನು ಎಲ್ಲಿ ಹೇಗೆ ನೋಡುವುದು? ನೋಡಿದರೆ ಕಣ್ಣುಗಳಿಗೆ ಅಪಾಯವಿದೆಯೇ?"

ಆಕಾಶದಲ್ಲಿ ನಮ್ಮ ಕಣ್ಣುಗಳಿಗೆ ಕಾಣುವ ಬೆಳಕಿನ ವಿವಿಧ ಮೂಲಗಳಿವು: ಸೂರ್ಯ, ಚಂದ್ರ, ಗ್ರಹ, ನಕ್ಷತ್ರ, ಉಲ್ಕೆ, ಧೂಮಕೇತು ಮತ್ತು ಆಕಾಶಗಂಗೆ. ಇವುಗಳ ಪೈಕಿ ಮೊದಲಿನ ನಾಲ್ಕು ನಮಗೆ ಚಿರಪರಿಚಿತವಾಗಿರುವುದರಿಂದ ನಮ್ಮಲ್ಲಿ ಇವು ವಿಶೇಷ ಕುತೂಹಲವನ್ನಾಗಲೀ ಭಯವನ್ನಾಗಲೀ ಮೂಡಿಸುವುದಿಲ್ಲ. ಆಕಾಶಗಂಗೆಯನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ ಪ್ರತಿರಾತ್ರಿ ಗುರುತಿಸಲು ಶಕ್ತರಾದವರು ಇದನ್ನೂ 'ಚಿರಪರಿಚಿತ'ಗಳ ಆದ್ದರಿಂದ ಅನ್ವೇಷಣಾರ್ಹಗಳಲ್ಲದ ಮೊದಲ ನಾಲ್ವರ ಸಾಲಿಗೆ ಸೇರಿಸಿದರೆ ಆಶ್ಚರ್ಯವೇನೂ ಇಲ್ಲ; ಗುರುತಿಸಲು ಶಕ್ತರಾಗದವರಿಗೆ ಸಮಸ್ಯೆಯೇ ಇಲ್ಲ—ಉಷ್ಟ್ರಪಕ್ಷಿಯಂತೆ! ಉಲ್ಕೆ ಮತ್ತು ಧೂಮಕೇತು (ಅಂತೆಯೇ ಗ್ರಹಣವೆಂಬ ನಭೋನಾಟಕ) ಹೀಗಲ್ಲ. ತಮ್ಮ ಅನಿಯತ-ಕಾಲಿಕತೆಯಿಂದಲೂ ವಿಚಿತ್ರ ಮುಖಗಳಿಂದಲೂ ಇವು ವ್ಯಕ್ತಿಯಲ್ಲಿ ಬೆರಗಿಗಿಂತ ಹೆಚ್ಚಾಗಿ ಭಯವನ್ನು ಬೀರುವುವು. ನಿಜಕ್ಕೂ ಭಯ ಆಗಬೇಕಾದದ್ದು ಆ ಬಾನಬೈರಾಗಿಗಳಿಗೆ, ಈ ಭೂಮಿವಾಸಿಗಳಾದ ನಮಗಲ್ಲ. ಹೇಗೆ?

ಭೂವಾಯುಮಂಡಲದ ಹೊರಗಿನ ದೂರದ ಎತ್ತರಗಳಲ್ಲಿ ಅಲೆಯುತ್ತಿರುವ ಕಲ್ಲ ತುಂಡುಗಳು ಒಮ್ಮೊಮ್ಮೆ ಭೂಗುರುತ್ವಾಕರ್ಷಣ ಕ್ಷೇತ್ರವನ್ನು "ಅತಿಕ್ರಮ ಪ್ರವೇಶಿ"ಸುವುದುಂಟು. ಆಗ ಅವು ಭೂತಳದೆಡೆಗೆ ಸೆಳೆಯಲ್ಪಡುತ್ತವೆ. ಅಂದರೆ ಅಂಥ ನಿರ್ಭಾಗ್ಯ ಬಾನ್‌ತಿರುಕರುಗಳು, ಎತ್ತರದಲ್ಲಿ ಕೈಬಿಟ್ಟ ಕಲ್ಲಿನಂತೆ, ಅನ್ಯ ನಿರ್ಬಂಧವಿಲ್ಲದೆ ಭೂಮಿಯತ್ತ ಕೆಡೆಯತೊಡಗುತ್ತವೆ. ಹೀಗೆ ಬೀಳುವ ಕಲ್ಲು ಕ್ಷಣಕ್ಷಣಕ್ಕೆ

ಏರುವೇಗದಿಂದ ಧಾವಿಸಬೇಕಾಗುತ್ತದೆ—ಭೂಗುರುತ್ವದ ಪ್ರಭಾವವಿದು.

ಇಂಥ ಏರುವೇಗದ ಕ್ಷಿಪಣಿ ವಾಯು ಮಂಡಲವನ್ನು ಹೊಕ್ಕು ಕೆಳನುಗ್ಗುವಾಗ ವಾಯು ಅಣುಗಳಿಗೂ ಇದಕ್ಕೂ ನಡುವೆ ತೀವ್ರ ಘರ್ಷಣೆ ಏರ್ಪಡುತ್ತದೆ. ಸಾಧಾರಣ ವೇಗದ ಸ್ಕೂಟರಿನಲ್ಲಿ ಪಯಣಿಸುವಾಗಲೇ ನಿಮಗೆ ಈ ಅನುಭವವಾಗುತ್ತದೆ. ಇನ್ನು ಅಸಾಮಾನ್ಯ ಪ್ರಳಯಾಂತಕ ವೇಗದ ಆ ಪತನದಲ್ಲಿ ಪರಿಸ್ಥಿತಿ ಹೇಗಿರಬೇಡ? ತಿಕ್ಕಾಟದಿಂದ ಕಾವು, ಕಾವಿನಿಂದ ಬೆಂಕಿ, ಬೆಂಕಿಯಿಂದ ಆ ಕಲ್ಲು ಉರಿದು ಭಸ್ಮೀಭೂತವಾಗಿ ಅದರ ಅವಶೇಷಗಳು ವಾಯುಮಂಡಲದ ಬೃಹದ್ವಿಸ್ತಾರದಲ್ಲಿ ಲೀನವಾಗಿ ಹೋಗುತ್ತವೆ. ಆದ್ದರಿಂದ ಉಲ್ಕೆ—ಉರಿದು ಬಾನಿನಡ್ಡ ಬೆಂಕಿಗೆರೆ ರೇಖಿಸುವ ಕಲ್ಲು—ಆತ್ಮಾಹುತಿಗೀಡಾಗುವ ನಿರ್ಜೀವ ವಸ್ತು. ಇದು ಆಕಾಶದ ಇತರ ಪರಿಚಿತ ಕಾಯಗಳಿಗಿಂತ ಮತ್ತು ವಿದ್ಯಮಾನಗಳಿಗಿಂತ ಭಿನ್ನ ನಿಜ. ಆದರೆ ಖಾತ್ರಿ ಅನಿಷ್ಟ ಸೂಚಕವಲ್ಲ, ಅಪಾಯಕಾರಿಯಲ್ಲ. ಉಲ್ಕಾ ಪತನದಿಂದ ನಾವು ಕಲಿಯುವ ಮೌಲ್ಯವೊಂದಿದೆ: "ನಿನ್ನ ಮಿತಿ ಮೀರಿ ನೀನು ಹಾರಿದರೆ ನೀನು ನಾಶವಾಗಿ ಹೋಗುವುದು ಖರೆ." ಆದ್ದರಿಂದ ಉಲ್ಕೆಯನ್ನು ಕುರಿತು ಮೂಡಬೇಕಾದದ್ದು ಮರುಕ, ವಿಸ್ಮಯ ಮತ್ತು ವಿಸ್ಮಯದಿಂದ ಮುಂದಕ್ಕೆ ಆಕಾಶ ವಿದ್ಯಮಾನಗಳನ್ನು ವೈಜ್ಞಾನಿಕವಾಗಿ ತಿಳಿಯುವತ್ತ ಕುತೂಹಲ.

ಉಲ್ಕೆ ನಮ್ಮ ವಾಯುಮಂಡಲದ "ಸಮೀಪ" ಎತ್ತರಗಳಲ್ಲಿ ಸಂಭವಿಸುವ ಘಟನೆ. ಧೂಮಕೇತುವಾದರೋ ಅಂತರ ಗ್ರಹವಲಯದ ವಿಸ್ತಾರಗಳಲ್ಲಿ ಪ್ರಕಟವಾಗುವ ದೃಶ್ಯ. ಮೊದಲನೆಯದರಲ್ಲಿ ಕಾರಣ—ಆ ಬಾನ ತಿರುಕುಳಿಯ ಅತಿಕ್ರಮ ಪ್ರವೇಶ; ಕರ್ತೃ—ನಮ್ಮ ಭೂಮಿ. ಎರಡನೆಯದರಲ್ಲಿ ಕಾರಣ—ಬಾನ ತಿರುಕುಳಿಯ ನಿರಂತರ ಪಥಸಂಚಲನ; ಕರ್ತೃ—ನಮ್ಮ ಸೂರ್ಯ.

ಸೌರವ್ಯೂಹದ ಗಡಿಗ್ರಹ ಪ್ಲೂಟೋ. ಸೂರ್ಯನಿಂದ ಇದರ ದೂರ ಸೂರ್ಯ–ಭೂಮಿ ಅಂತರದ ೩೯.೪೪ ಮಡಿ ಇದೆ. (ಭೂಮಿ–ಸೂರ್ಯ ಸರಾಸರಿ ಅಂತರ ೧೪೯,೬೦೦,೦೦೦ ಕಿಮೀ. ಇದು ೧ ಖಗೋಳಮಾನ) ಸೂರ್ಯನಿಂದ ೫೦,೦೦೦—೧,೦೦,೦೦೦ ಖಗೋಳಮಾನ ದೂರಗಳಲ್ಲಿ, ಆದರೆ ಸೂರ್ಯನ ಗುರುತ್ವಾಕರ್ಷಣ ಕ್ಷೇತ್ರದ ಒಳಗೆ, ಧೂಮಕೇತು ನಿವಾಸವಿದೆ. ಈ ಚಿರಮೌನ, ಬಹುತೇಕ ನಿಶ್ಚಲ, ನಿರಂತರ ಕಗ್ಗತ್ತಲ ಶ್ಮಶಾನದಲ್ಲಿ ಸೌರವ್ಯೂಹದ ಕಸಕಡ್ಡಿರಾಡಿಗಳು ಹರಡಿ ಹೋಗಿವೆ—ಕೊಳಕು ಬರ್ಫದ ಗಟ್ಟಿಗಳ ಸಮುಚ್ಚಯ.

ಈ ನಿವಾಸದ ಮೇಲೆ ದೂರದ ಯಾವುದೋ ಒಂದು ನಕ್ಷತ್ರದ ಗುರುತ್ವಾಕರ್ಷಣ ಪ್ರಭಾವ ಬೀಳುವುದು ವಿರಳವಲ್ಲ. ಆಗ ಅಲ್ಲಿ ತುಸು ಕ್ಷೋಭೆ ಪ್ರಕಟವಾಗುತ್ತದೆ—ಮಡ್ಡಿ ನೀರಿಗೆ ಕಡ್ಡಿ ಎಸೆದಾಗ ಏಳುವ ಬಗ್ಗಡದಂತೆ. ಫಲವಾಗಿ ಕೆಲವಾದರೂ ಬರ್ಫಗಟ್ಟಿಗಳು ಸ್ಥಾನಭ್ರಷ್ಟವಾಗಿ ಆ ನಕ್ಷತ್ರದತ್ತ ತೆವಳಿಬಿಡಬಹುದು; ಇನ್ನು ಕೆಲವು ಸೂರ್ಯನತ್ತ ತಳ್ಳಲ್ಪಡಲೂ ಬಹುದು. ಈ ಎರಡನೆಯವು ಕ್ರಮೇಣ ಏರುವೇಗದಿಂದ ಸೂರ್ಯಾಭಿಮುಖವಾಗಿ

"ಈಸಲು" ತೊಡಗುತ್ತವೆ. ನಮ್ಮ ಭೂಮಿ ಮತ್ತು ಇತರ ಗ್ರಹಗಳು ಮಾಡುವು ದಾದರೂ ಇದನ್ನೇ—ಸೂರ್ಯನ ಸುತ್ತ ಈಸುತ್ತಲೇ ಇರುವುದು.

ಕೇವಲ ಕೆಲವೇ ಕೆಜಿ (ಒಂದು-ಅಂಕೆ) ತೂಕದ ಬರ್ಫದ ಗಟ್ಟಿ ಗುರು-ಮಂಗಳ ಗ್ರಹಗಳ ಕಕ್ಷೆಗಳನ್ನು ದಾಟಿ ಮುಂದುವರಿ ದಂತೆ ಅದರ ಕಕ್ಷಾವೇಗ ಏರುತ್ತದೆ, ಅದರ ಮೇಲೆ ಪಾತವಾಗುವ ಸೌರವಿಕಿರಣ ತೀವ್ರ ವಾಗುತ್ತದೆ — ಮಹಾಶಕ್ತಿನ ವಿದ್ಯುದಾ ಲಿಂಗನ! ಶಾಖದ ಕಾರಣವಾಗಿ ಬರ್ಫದ ಗಟ್ಟಿ ಕರಗುತ್ತದೆ, ಕರಗಿದ್ದು ಆವಿಯಾಗು ತ್ತದೆ, ಸೂರ್ಯಾಭಿಮುಖ ಪರಿಕ್ರಮಣ ಮುಂದುವರಿದಂತೆ ಈ ಆವಿಯ ಕಣಗಳು ಮತ್ತು ಜೊತೆಯಲ್ಲೇ ಬೆರೆತಿರುವ ದೂಳ ಹುಡಿಗಳು ಸೂರ್ಯ-ವಿರುದ್ಧ ದಿಶೆಯಲ್ಲಿ ಉದ್ದುದ್ದ ಚಾಚಲಾರಂಭಿಸುತ್ತವೆ. ಅದೇ ವೇಳೆ ಸೂರ್ಯನ ಬೆಳಕೂ ಈ ವಿರಳ ಪಯಣಿಗನ ಮೇಲೆ ಅತಿಶಯವಾಗಿ ಬಿದ್ದು ಇದು ಬೆಳಗಲಾರಂಭಿಸುತ್ತದೆ.

ನಮಗೆ ಕಾಣುವುದು ಈ ದೃಶ್ಯ; ಗೊಂಡೆ ಮಂಡೆ, ಮಂಡೆಯಿಂದ ಆಚೆಗೆ (ಸೂರ್ಯ-ಮಂಡೆ ರೇಖೆಯ ವಿಸ್ತರಣೆ ನೇರ, ನೆರಳಿನಂತೆ) ಚಾಚಿರುವ ಪೊರಕೆ ಬಾಲ. ಇದೇ ಧೂಮಕೇತು. ತೀರ ಲಘು ಕಾಯ. ಇದರ ಬಾಲ ನಮ್ಮ ಮೂಲಕ ಹಾದು ಹೋದರೆ ಅಥವಾ ಸಾಕ್ಷಾತ್ ಮಂಡೆಯೇ ಭೂಮಿಯ ಮೇಲೆ ಬಿದ್ದರೆ ನಮಗಾಗಲೀ ನಮ್ಮ ಸ್ಥಾವರ ಜಂಗಮ ಗಳಿಗಾಗಲೀ ಏನೂ ಆಗುವುದಿಲ್ಲ. ಧೂಮ ಕೇತು ಮಾತ್ರ ತನ್ನ ಒಡಲಿನ ಅಧಿಕಾಂಶ ವನ್ನು ಈ ಬಿಟ್ಟಿ ಬಯಲಾಟ ಪ್ರದರ್ಶನಕ್ಕೆ ಶುಲ್ಕವಾಗಿ ತೆರಲೇಬೇಕಾಗುವುದು.

ಅಂದ ಮೇಲೆ ಉಲ್ಕಾಪತನದಿಂದಾಗಲೀ ಧೂಮಕೇತುದರ್ಶನದಿಂದಾಗಲೀ ನಾವು ಕಿಂಚಿತ್ತೂ ಭಯ ಅಥವಾ ಆತಂಕ ಗ್ರಸ್ತ ರಾಗಬೇಕಾಗಿಲ್ಲ. ಅವನ್ನು ನೋಡೋಣ. ಹಿನ್ನೆಲೆ ವೈಜ್ಞಾನಿಕ ಕಾರಣಗಳನ್ನು ಅರಿಯೋಣ. ಧೂಮಕೇತುವಿನ ಅಲ್ಪ ಕಾಲಿಕ ಗಗನ ವೈಭವದ ಸಂದೇಶವೇನು ಗೊತ್ತೇ? "ಬಡವಾ! ನೀ ಮಡಗಿದಲ್ಲಿರು! ದೊಡ್ಡವರೆಂಬ ಹಮ್ಮಿನವರ ಒಡವೆಗೆ ಆಸೆ ಪಡಬೇಡ!"

ಹ್ಯಾಲೀಯಂಥ ಕೆಲವು ಧೂಮಕೇತು ಗಳು ನಿಯತಕಾಲಿಕಗಳು. ಆದ್ದರಿಂದ ಗ್ರಹಣ, ಸಂಕ್ರಮಣ ಮುಂತಾದ ಆಕಾಶ ಘಟನೆಗಳಂತೆ ಈ ಧೂಮಕೇತುಗಳ ದರ್ಶನ ಪ್ರದರ್ಶನಗಳನ್ನೂ ಮುಂದಾಗಿಯೇ ನುಡಿಯುವುದು ಸಾಧ್ಯ. ಆದರೆ ಈ ಪಟ್ಟಿಗೆ ಒಳಪಡದಂಥವು ಅಸಂಖ್ಯಾತವಿವೆ. ಬೈನಾ ಕ್ಯುಲರುಗಳನ್ನೋ ದೂರದರ್ಶಕಗಳನ್ನೋ ಬಳಸಿ ಈ ಅಜ್ಞಾತಗಳ ಶೋಧನೆಗೆ ನಿರಂತರ ನಿರತವಾಗಿರುವ ಹವ್ಯಾಸೀ ಖಗೋಳವೀಕ್ಷಕ ರಿರುವರು. ಇದೊಂದು ರಚನಾತ್ಮಕ 'ಜೂಜಾಟ.' ಕಾಲ, ಶ್ರಮ (ಧನಕೂಡ) ಹರಣವೇ ಅಧಿಕ. ಆದರೆ ಹೊಸ ಧೂಮ ಕೇತುವೆಂಬ ಎರೆ ನಿಮ್ಮ ಗಾಳ ಕಚ್ಚಿದರೆ ಆ ಕಿಂಚಿದ್ವಿಶ್ವರೂಪದರ್ಶನಾನುಭವ ಅವಿಸ್ಮರ ಣೀಯ—ಮೊದಲು ಗುರುತಿಸಿದಾತ ಜಗದ್ವಿಖ್ಯಾತನಾಗುತ್ತಾನೆ. ಆತನ ಹೆಸರಿ ನಿಂದಲೇ ಆ ಧೂಮಕೇತುವನ್ನು ಉಲ್ಲೇಖಿಸ ಲಾಗುವುದು.

ಜಪಾನಿನ ಹವ್ಯಾಸಿ ಖಗೋಳವಿಜ್ಞಾನಿ ಯೂಜಿ ಹ್ಯಾಕುಟೇಕ್ ಎಂಬವರು, ಈಗ ಆಕಾಶರಂಗಸ್ಥಳದಲ್ಲಿ ನಾಟಕ ಪ್ರದರ್ಶಿ

ಸುತ್ತಿರುವ ಧೂಮಕೇತುವನ್ನು, ಇದೇ ಜನವರಿಯಲ್ಲಿ ಮೊದಲು ಆವಿಷ್ಕರಿಸಿದರು. ಎಂದೇ ಈ ಆಕಾಶ ಅತಿಥಿಯ ಹೆಸರು "ಧೂಮಕೇತು ಹ್ಯಾಕುಟೇಕ್."

ಹ್ಯಾಕುಟೇಕ್‌ನ ಸಂಚಾರಪಥ: ಏಪ್ರಿಲ್ ೧ರಿಂದ ೨೮ರ ತನಕ ಸಪ್ತರ್ಷಿಮಂಡಲ ವಿರುವ ಉತ್ತರಾಕಾಶದಲ್ಲಿ ಪಾರ್ಥ (ಪರ್ಸಿಯಸ್) ಪುಂಜದಿಂದ ಮೇಷರಾಶಿಯೆಡೆಗೆ ಇರುವುದು. ಈ ವೇಳೆಗೆ ಇದು ತೀರ ಸೂರ್ಯಸಮೀಪವಾಗುವುದರಿಂದ ನಮಗೆ ಪ್ರತ್ಯೇಕವಾಗಿ ಗೋಚರಿಸದು. ಮುಂದೆ ಮೇ ಎರಡನೆಯ ವಾರದಲ್ಲಿ ಪುನಃ ದೃಶ್ಯಾಕಾಶಕ್ಕೆ ಮರಳುತ್ತದೆ. ಆದರೆ ಆಗ ಇದು ನಮ್ಮ ಆಕಾಶದಲ್ಲಿರುವುದಿಲ್ಲ, ದಕ್ಷಿಣ ಗೋಳಾರ್ಧನಿವಾಸಿಗಳ ಆಕಾಶದಲ್ಲಿ ಪ್ರಕಟವಾಗುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಮಧ್ಯರಾತ್ರಿ ಹೊತ್ತಿಗೆ ಆಕಾಶ ಸ್ವಚ್ಛವಾಗಿರುವಾಗ ಮೇಷ ರಾಶಿ ಪಶ್ಚಿಮಕ್ಕೆ ಹೊರಳಿರುವಾಗ ಹ್ಯಾಕುಟೇಕ್ ದರ್ಶನಕ್ಕೆ ಬೈನಾಕ್ಯುಲರ್ಸ್ ಸಹಿತ ಪ್ರಯತ್ನಿಸಿ ನೋಡಿ: ವಿಶ್ವದ ವಿರಳ ಮುಖದರ್ಶನ ಮಾಡಿ, ವಿಶ್ವವಿಜ್ಞಾನದ ಬಗ್ಗೆ ಚಿಂತನೆ ಹರಿಸಿ. (ಇದೇ ಲೇಖಕ ಬರೆದಿರುವ "ಸೂರ್ಯನ ಸಾಮ್ರಾಜ್ಯ", "ಧೂಮಕೇತು" ಮತ್ತು "ಗ್ರಹಣಗಳು" ಹೊತ್ತಗೆಗಳನ್ನು ಗಮನಿಸಬಹುದು: ಅತ್ರಿ ಬುಕ್ ಸೆಂಟರ್, ೪, ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು ೫೭೫೦೦೧).



ಒಬ್ಬನು ಸಾವಿರ ಸಲ ಸಾವಿರ ಜನರನ್ನು ಗೆಲ್ಲಬಹುದು. ಅದಕ್ಕಿಂತ ಯಾರು ತನ್ನನ್ನು ತಾನೇ ಗೆಲ್ಲುತ್ತಾನೋ ಅವನೇ ನಿಜವಾದ ವೀರನೂ, ಪರಾಕ್ರಮಿಯೂ ಆಗಿರುತ್ತಾನೆ.

—ಮಹಾವೀರ

ಚಿತ್ರಕಾರರ ಚಕ್ರವರ್ತಿ, ರಾಜಾರವಿವರ್ಮ

ಟಿ. ಎಸ್. ಲಲಿತ

ಬೇರಾವ ಭಾರತೀಯ ಕಲೆಗಾರನೂ ಕಲಾ ಪ್ರಪಂಚದಲ್ಲಿ ರಾಜಾರವಿವರ್ಮನಷ್ಟು ಜಾಜ್ವಲ್ಯಮಾನವಾದ ಪ್ರತಿಭೆಯ ಗುರುತು ಮೂಡಿಸಿ ಹೋಗಿಲ್ಲ. 'ದೃಶ್ಯ ಸಮೀಚೀನ ದೃಷ್ಟಿಯ (Perpective) ಪ್ರಭುತ್ವ ಪಡೆದವರಲ್ಲಿ ಪ್ರಥಮರೆನಿಸಿ ದೇವ ದೇವಿಯರನ್ನು ಚಿತ್ರಿಸಲು ಮಾನವ ರೂಪದರ್ಶಿಗಳನ್ನು ಪಯೋಗಿಸಿದವರಲ್ಲಿ ಮೊದಲಿಗರಾಗಿ, ಕೇವಲ ಶ್ರೀಮಂತರಿಗಷ್ಟೇ ಅಲ್ಲ, ಸಾಮಾನ್ಯ ವೃತ್ತಿಯೂ ತಮ್ಮ ಕಲೆಯ ಪ್ರಯೋಜನ ಪಡೆಯುವಂತೆ ಮಾಡಿದವರಲ್ಲಿ ಅಗ್ರ ಪಂಕ್ತಿಯಲ್ಲಿ ನಿಂತವರು ರಾಜಾರವಿವರ್ಮ. ಅತ್ಯಂತ ಜನಪ್ರಿಯವಾದ ಇವರ ಕಲಾಕೃತಿಗಳು, ಕೇರಳದ ಈ ದೈವಭಕ್ತನನ್ನು, 'ಉತ್ತಮ ಕಲಾಕಾರನೆಂದು ಹೆಸರು ಪಡೆದ ಮೊದಲ ಭಾರತೀಯ ಕಲಾವಿದನೆನಿಸಿತು. ಹಿಂದೆ ಚಿತ್ರಕಾರರು ಬಹುತೇಕ ಅನಾಮಧೇಯರಾಗಿಯೇ ಉಳಿಯುತ್ತಿದ್ದರು.

೧೮೪೮ರಲ್ಲಿ ತಿರುವನಂತಪುರದಿಂದ ೪೦ ಕಿ.ಮೀ. ದೂರದ ಕಿಲಿಮನೂರಿನ ರಾಜವಂಶದಲ್ಲಿ ಹುಟ್ಟಿದರು ರವಿವರ್ಮ. ಕಿಲಿಮನೂರಿನ ರಾಜರು ತಮ್ಮ ಕಲಾ ಸಾಧನೆಗಾಗಿ ಹೆಸರಾದವರು, ರವಿವರ್ಮನ ಕಲಾಪ್ರತಿಭೆ, ಎಳವೆಯಲ್ಲೇ ಅರಳಿತು. ಕಲಾಪ್ರಿಯರಾದ ತಿರುವಾಂಕೂರಿನ ಮಹಾರಾಜರ ಪ್ರೋತ್ಸಾಹ ಸಿಕ್ಕ ಹದಿನಾಲ್ಕರ ಬಾಲಕ, ರವಿವರ್ಮನಿಗಾಗಿ ಮಹಾರಾಜರು ಸ್ಟುಡಿಯೋ ಒಂದನ್ನು ಸ್ಥಾಪಿಸಿ, ಅನೇಕ ಐರೋಪ್ಯ ಕಲೆಯ ಪುಸ್ತಕಗಳನ್ನೊದಗಿಸಿದರು.

ಒಂದೇ ಜಾಡಿನ ಪರಂಪರಾಗತ ಭಾರತೀಯ ಶೈಲಿಗಿಂತ ಪಾಶ್ಚಾತ್ಯ ಚಿತ್ರಕಲೆಯ ಸಹಜತೆ ರವಿವರ್ಮನನ್ನು ಆಕರ್ಷಿಸಿತು. ಸಾಂಪ್ರದಾಯಿಕ ಭಾರತೀಯ 'ಲೆಪ್ಪ'ಕ್ಕಿಂತ [Tempera] ಭಾರತಕ್ಕೆನ್ನೂ ಹೊಸದೆನಿಸಿದ ತೈಲವರ್ಣವನ್ನವರು ಮೆಚ್ಚಿದರು. ತೈಲವರ್ಣದ ತಂತ್ರಗಳನ್ನು ತಮಗೆ ತಾವೇ ಅಭ್ಯಾಸ ಮಾಡಬೇಕಿದ್ದರೂ, ೧೮೭೦ರ ವೇಳೆಗೆ ಬಣ್ಣಗಳ ಮಿಶ್ರಣದಲ್ಲಿ, ರವಿವರ್ಮ ಎಷ್ಟು ಪ್ರಾವೀಣ್ಯತೆ ಪಡೆದಿದ್ದರೆಂದರೆ, ಅವರ ಚಿತ್ರಗಳು, ವ್ಯಕ್ತಿಗಳ ಚರ್ಮದ ಕಾಂತಿ ಹಾಗೂ ಉಡಿಗೆ, ತೊಡಿಗೆಗಳನ್ನು ಚಿತ್ರಿಸುವುದರಲ್ಲಿ ಅವರಿಗಿದ್ದ ಪ್ರೌಢಿಮೆಯನ್ನು ಎತ್ತಿ

೧೯೭೩ರ ಡಿಸೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಮೋಹನ್ ಶಿವಾನಂದ ಅವರ "ಪ್ರಿನ್ಸ್ ಅಮಾಂಗ್ ಪೆಯಿಂಟರ್ಸ್" ಎಂಬ ಲೇಖನದ ಅನುವಾದ.

ತೋರಿಸುತ್ತವೆ. ಐರೋಪ್ಯ ಕಲಾವಿದರು ಕೇವಲ ವ್ಯಕ್ತಿಗಳನ್ನು ಚಿತ್ರಿಸಬಲ್ಲವರಾದರೆ, ರವಿವರ್ಮ ವ್ಯಕ್ತಿಯ ವ್ಯಕ್ತಿತ್ವವನ್ನು ಚಿತ್ರಿಸಬಲ್ಲವರಾಗಿದ್ದರು. ಅವರ ಚಿತ್ರಗಳಲ್ಲಿ ನೆರಳು-ಬೆಳಕಿನ ಸಂಯೋಜನೆ ಅತ್ಯದ್ಭುತ. ಚಿತ್ರದ ವ್ಯಕ್ತಿಗಳು ಸಜೀವವಾಗಿ ಎದ್ದು ಬರುತ್ತಿದ್ದವೇನೋ ಎನಿಸುವಷ್ಟು ಸಹಜತೆ. ತರುಣ ಕಲಾವಿದನ ಕಲೆಯನ್ನು ಮೆಚ್ಚಿದ ಮಹಾರಾಜ, ತಿರುವಾಂಕೂರಿನ ಅತಿ ವಿಶಿಷ್ಟ ಗೌರವವೆನಿಸಿದ 'ವೀರ ಶ್ರಿಂಗಾಲ' [Bangle of valour] ದಿಂದವರನ್ನು ಸತ್ಕರಿಸಿದರು. ಚಿತ್ರಕಾರನೊಬ್ಬ ಆ ರೀತಿ ಗೌರವಿಸಲ್ಪಟ್ಟದ್ದು ಅದೇ ಮೊದಲ ಬಾರಿ!

ರವಿವರ್ಮರ ಜೀವನ ಗತಿಯೀಗ ಮುನ್ನಡೆ ಸಾಧಿಸಿತ್ತು. ಮುಂದಿನ ಮೂರು ದಶಕಗಳವರೆಗೂ, ಮಹಾರಾಜರಿಂದ ವ್ಯಾಪಾರಿಗಳವರೆಗೂ ರವಿವರ್ಮನ ಚಿತ್ರಗಳಿಗಾಗಿ ಸ್ಪರ್ಧಾತ್ಮಕ ಬೇಡಿಕೆ! ೧೮೮೮ರಲ್ಲಿ ಬರೋಡಾದ ಮಹಾರಾಜ ಬಯಸಿದ ೧೪ ಚಿತ್ರಗಳಿಗಾಗಿ ಆ ಕಾಲಕ್ಕೆ ಬಹು ದೊಡ್ಡ ಮೊತ್ತವೆನಿಸಿದ ೫೦,೦೦೦ ರೂ.ಗಳು ರವಿವರ್ಮನಿಗೆ ಸಂದಾಯವಾಯ್ತು. ಇವರ ಚಿತ್ರಗಳು ವಿದೇಶಗಳಲ್ಲಿ ಪ್ರದರ್ಶಿಸಲ್ಪಟ್ಟರೂ ಆ ದಿನಗಳಲ್ಲಿ ಸಾಂಪ್ರದಾಯಿಕ ಹಿಂದೂಗಳು ಸಾಗರ ದಾಟುವುದು ನಿಷಿದ್ಧವೆನಿಸಿದ್ದರಿಂದ, ತಮ್ಮ ಕಲಾಕೃತಿಗಳೊಂದಿಗೆ ವಿದೇಶ ಪ್ರಯಾಣ ಕೈಗೊಳ್ಳಲಿಲ್ಲ ರವಿವರ್ಮ, ಆದರೂ ವಿಯನ್ನಾದಲ್ಲೊಂದು, ಚಿಕಾಗೊದಲ್ಲೆಡರಂತೆ, ಅಂತರರಾಷ್ಟ್ರೀಯ ಪ್ರದರ್ಶನಗಳಲ್ಲೂ ಅನೇಕ ಪದಕ ಗಳಿಸಿದರು. ಭಾರತದಲ್ಲೂ ಅವರೆಷ್ಟು ಬಹುಮಾನ ಪಡೆಯತೊಡಗಿದರೆಂದರೆ, ಒಂದು ಘಟ್ಟದಲ್ಲಿ ರವಿವರ್ಮರೇ, ಇತರರಿಗೆಡೆ ಮಾಡಿಕೊಡಲು ತಾವಿನ್ನು ಸ್ಪರ್ಧೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಘೋಷಿಸಿದರು!

ಕಲೆಯ ಅತಿ ಸೂಕ್ಷ್ಮ ವಿವರಗಳಿಗೂ ಗಮನ ಕೊಡುತ್ತಿದ್ದ ರವಿವರ್ಮ, ತಮ್ಮ ಸೋದರ, ಸ್ವತಃ ಭೂ ದೃಶ್ಯ [Land-scape] ಚಿತ್ರಕಾರರಾದ ರಾಜವರ್ಮರೊಂದಿಗೆ ಇಡೀ ಭರತಖಂಡವನ್ನು ಸಂಚರಿಸಿದರು. ಆ ಸಂಚಾರದಲ್ಲಿ ರವಿವರ್ಮರ ಹತ್ತಾರು ಪುಸ್ತಕಗಳು ರೇಖಾಚಿತ್ರದಿಂದ ತುಂಬಿದರೆ, ರಾಜವರ್ಮರ ಪುಸ್ತಕಗಳಲ್ಲಿ ಅವುಗಳ ವಿವರಣೆ ತುಂಬಿರುತ್ತಿತ್ತು. ನಿಕಟ ಬಾಂಧವ್ಯ ಹೊಂದಿದ್ದ ಇಬ್ಬರು ಸೋದರರೂ, ಪೂರಕವಾಗಿ ಕೆಲಸ ನಿರ್ವಹಿಸುತ್ತಿದ್ದರು. ರವಿವರ್ಮ ಬರೆದ ಚಿತ್ರಕ್ಕೆ ರಾಜವರ್ಮ ಹಿನ್ನೆಲೆ ನೀಡುತ್ತಿದ್ದರು.

ಹಿಂದೂ ದೇವ, ದೇವಿಯರು, ಪುರಾಣದ ದೃಶ್ಯಗಳನ್ನು ಚಿತ್ರಿಸುವುದರಲ್ಲಿ ಅತ್ಯಂತ ಧಾರ್ಮಿಕ ಪ್ರವೃತ್ತಿಯ ರವಿವರ್ಮ ಸಿದ್ಧಹಸ್ತರು, ಭಾವಚಿತ್ರ ರಚನೆಯಲ್ಲಿ ಪ್ರಭುತ್ವ ಪಡೆದವರು. ಸಂಪ್ರದಾಯವನ್ನು ಮುರಿದು, ದೇವರನ್ನು ಚಿತ್ರಿಸಲು ಮಾನವ ರೂಪದರ್ಶಿಗಳನ್ನವರು ಬಳಸಿದರು. ಕೃಷ್ಣ, ಲಕ್ಷ್ಮಿ, ಸರಸ್ವತಿ ಮುಂತಾದ ದೇವರನ್ನು ಅತ್ಯಂತ ಸುಂದರ ಮಾನವರಂತೆ ಚಿತ್ರಿಸಿದರೂ, ಅವುಗಳಲ್ಲಿ ದೈವೀಕತೆ ಎದ್ದು ತೋರುತ್ತಿತ್ತು. ಇಂದಿಗೂ ರವಿವರ್ಮ ಚಿತ್ರಿಸಿದ ಚಿತ್ರಗಳೇ ದೇವರಾಗಿ ಜನಮನದಲ್ಲಿ ಮೂಡಿವೆ.

ರವಿವರ್ಮರ ಸ್ಟುಡಿಯೋದಲ್ಲಿ ನಡೆದ ಅನೇಕ ಆಕಸ್ಮಿಕ ಘಟನೆಗಳೇ ರಾಮಾಯಣ ಮಹಾಭಾರತದ ವ್ಯಕ್ತಿಗಳ ಕಲ್ಪನಾ ಚಿತ್ರಗಳಾಗಿ ಮೂಡಿವೆ. ಒಮ್ಮೆ ರಾಮಾಯಣದಲ್ಲಿ, ರಾವಣ ಜಟಾಯುವನ್ನೆದುರಿಸುವ 'ಸೀತಾಪಹರಣದ' ದೃಶ್ಯ ಚಿತ್ರಿಸುವಾಗ ತನ್ನಣ್ಣನ ಮಗಳು ಕುಂಜೂಟಿಯನ್ನು, ಸೀತೆಗಾಗಿ ರೂಪದರ್ಶಿಯಾಗುವಂತೆ ಕೇಳಿದರು. ನೋಡುತ್ತಿದ್ದ ಮಕ್ಕಳು ಕಿಲಿ, ಕಿಲಿ ನಕ್ಕಾಗ ನಾಚಿಕೆಯಿಂದ ಮುಖ ಮುಚ್ಚಿಕೊಂಡಳು ಕುಂಜೂಟಿ. ಈ ದೃಶ್ಯದಿಂದ ರವಿವರ್ಮ ಅದೆಷ್ಟು ಪ್ರಭಾವಿತರಾದರೆಂದರೆ ಎಡೆಬಿಡದೆ ಆ ದೃಶ್ಯವನ್ನು ಚಿತ್ರಿಸಿ ಮುಗಿಸಿದರು. ಆದ್ದರಿಂದಲೇ ಈ ಚಿತ್ರದಲ್ಲಿ ಮುಖ ಮುಚ್ಚಿಕೊಂಡ ಸೀತೆಯನ್ನು ನಾವು ನೋಡುತ್ತೇವೆ.

ತಮ್ಮ ಚಿತ್ರಗಳಲ್ಲಿ ಸ್ತ್ರೀಯರನ್ನು ಆದರ್ಶಪ್ರಾಯವಾಗಿಸಿದರು ರವಿವರ್ಮ. ಹೆಚ್ಚಿನ ಘನತೆ ಹಾಗೂ ಗಾಂಭೀರ್ಯ ಆ ಚಿತ್ರಗಳಲ್ಲಿದ್ದು ತೋರುತ್ತಿತ್ತು. ಹಿಂದೆ ಸ್ತ್ರೀಯನ್ನು ರಾಜಾರವಿವರ್ಮನ ಚಿತ್ರದಂತಿದ್ದಾಳೆಂದು ಹೇಳುವುದು, ಹೆಣ್ಣಿನ ಬಗೆಗೊಂದು ಅತ್ಯಂತ ಮೆಚ್ಚುಗೆಯ ಮಾತಾಗಿತ್ತು. ಅನೇಕ ಮತ ಪಂಥಗಳಿಗೆ ಸೇರಿದ ಸ್ತ್ರೀಯರನ್ನು ಚಿತ್ರಿಸಿದರು. ಮುಂಬಯಿಯಲ್ಲಿ ಅನೇಕ ವರ್ಷಗಳನ್ನು ಕಳೆದ ರವಿವರ್ಮನಿಗೆ, ಸೀರೆಯುಟ್ಟ ಮಹಾರಾಷ್ಟ್ರ ಮಹಿಳೆಯನ್ನು ಚಿತ್ರಿಸುವುದು ಮೆಚ್ಚಿಕೆಯ ಮಾತು. ಆ ದಿನಗಳಲ್ಲಿ ಕೇರಳ ಹಾಗೂ ಭಾರತದ ಕೆಲವೆಡೆ ಸೀರೆಯ ಬಳಕೆ ಇರಲಿಲ್ಲ. ಆಕರ್ಷಕ ಬಣ್ಣ ಗಂಭೀರ ನೆರಿಗೆಗಳಿಂದ ಮನಸೆಳೆವ ಸೀರೆಗಳು ಎಷ್ಟರ ಮಟ್ಟಿಗೆ ಜನಮನವನ್ನು ಸೂರೆಗೊಂಡವೆಂದರೆ, ಸೀರೆಯನ್ನು ಭಾರತ ನಾರಿಯರ ರಾಷ್ಟ್ರೀಯ ಉಡುಗೆ ಎಂದು ಸಾರಲಾಯ್ತು. ಇದಕ್ಕೆ ರವಿವರ್ಮರ ಚಿತ್ರಗಳೇ ಕಾರಣ.

ಸದಾ ಕಾರ್ಯತತ್ಪರರಾದ ರವಿವರ್ಮ ಬೆಳಗಿನ ನಾಲ್ಕು ಘಂಟೆಗೆದ್ದು, ದೀರ್ಘವಾದ ದೈನಂದಿನ ಧಾರ್ಮಿಕ ಕ್ರಿಯಾ ವಿಧಿಗಳನ್ನು ಮುಗಿಸಿ, ಸೂರ್ಯನ ಮೊದಲ ಕಿರಣ ಮೂಡುವ ವೇಳೆಗೆ ಚಿತ್ರಿಸಲಾರಂಭಿಸುತ್ತಿದ್ದರು. ಎಡಬಿಡದೆ ಕೆಲಸ ಮಾಡುತ್ತಿದ್ದ ರವಿವರ್ಮ ತಮ್ಮ ಕನಸನ್ನು ಚಿತ್ರಿಸಲು ಇದ್ದಕ್ಕಿದ್ದಂತೆ ಮಧ್ಯ ರಾತ್ರಿಯಲ್ಲಿ ಏಳುವುದೂ ಇತ್ತು.

ರವಿವರ್ಮನ ಖಚಿತವಾದ ಆಧುನಿಕ ದೃಷ್ಟಿಕೋಣಕ್ಕೆ, ಅವರ ಕಸುಬು ಕಾರಣವಾಗಿತ್ತು. ತಾವು ಕಿಲಿಮನೂರಿನ ವಂಶದ ಮುಖ್ಯಸ್ಥರೆನಿಸಿದಾಗ, ತಮ್ಮ ಬಂಧುಗಳನ್ನು ಜೀವನಕ್ಕಾಗಿ ಯಾವುದಾದರೊಂದು ವೃತ್ತಿಯನ್ನು ಕೈಗೊಳ್ಳುವಂತೆಯೂ, ತಮಗಿಂತ ಕೀಳುಜಾತಿಯವರೊಂದಿಗೆ ಬೆರೆಯುವುದನ್ನು ನಿಷೇಧಿಸುವ ಮೂಢಸಂಪ್ರದಾಯಗಳನ್ನು ಬಿಡುವಂತೆ ಪ್ರೋತ್ಸಾಹಿಸಿದರು.

ಶ್ರೇಷ್ಠ ರಾಜಕುಲದವರಂತೆ ಮಧ್ಯಮ ಮೈಕಟ್ಟಿನ, ಶ್ಯಾಮಲವರ್ಣದ ರಾಜಾರವಿವರ್ಮ, ರಾಜಠೀವಿಯೊಂದಿಗೆ ಬಾಳಿದರು. ಅತಿಥಿಗಳಾಗಿ ಯಥೇಚ್ಛವಾಗಿ ಖರ್ಚು ಮಾಡುತ್ತಿದ್ದ ಅವರು, ಕಿಲಿಮನೂರು ಅರಮನೆಯನ್ನು ಅಂದಗೊಳಿಸಲು ಹಾಗೂ ವಿಶಾಲವಾದ ಭೂಮಿಯನ್ನು ಕೊಳ್ಳಲು ಹೇರಳವಾಗಿ ಹಣ ಖರ್ಚು ಮಾಡುತ್ತಿದ್ದರು. ಆನೆಗಳ ಬಗ್ಗೆ ವಿಶೇಷ ಒಲವಿದ್ದ

ರವಿವರ್ಮ ಒಮ್ಮೆ ಅನೇಕ ಜನಗಳನ್ನು ತುಳಿದು ಹಾಕಿದ್ದ ಆನೆಯೊಂದನ್ನು ಗುಂಡಿಟ್ಟು ಕೊಲ್ಲಲು ತಿರುವಾಂಕೂರಿನ ಸರಕಾರ ಆಜ್ಞೆ ಮಾಡಿದ್ದನ್ನು ತಿಳಿದು, ಆ ಆನೆಯನ್ನು ಕೊಂಡು, ಕಿಲಿಮನೂರಿನ ಅರಮನೆಗೊಯ್ದರು. ಶಿವನ ಮಕ್ಕಳಲ್ಲೊಬ್ಬನಾದ ಐಯ್ಯಪ್ಪನ ಹೆಸರನ್ನು ಆನೆಗಿಟ್ಟು, ಅದರ ಪ್ರೀತಿಗಳಿಸಿದರು. ಕೆಲ ತಿಂಗಳ ನಂತರ ಇದ್ದಕ್ಕಿದ್ದಂತೆ ಹುಚ್ಚೆದ್ದ ಆನೆಯಿಂದ ಜನ ಕಂಗಾಲಾದಾಗ, ಎರಡು ಬಾಳೆಗೊನೆಗಳನ್ನು ಹಿಡಿದು, ಶಾಂತರಾಗಿ ಆನೆಯತ್ತ ನಡೆದು ಅದನ್ನು ಹತೋಟಿಗೆ ತಂದರು.

ಮಕ್ಕಳೆಂದರೆ ವಿಶೇಷ ಒಲವು ರವಿವರ್ಮನಿಗೆ, ಮಕ್ಕಳೂ ಅಷ್ಟೇ ಪ್ರೀತಿಸುತ್ತಿದ್ದವು. ಅವರನ್ನು, ಇಂದಿಗೂ ಅವರ ಅಣ್ಣನ ಮಗಳು ಕೊಚೋಮನ ತಂಪುರಾಟಿ [ರವಿವರ್ಮ ಸಾಯುವಾಗ ಅವಳಿಗೆ ೮ ವರ್ಷ] ಕಿಲಿಮನೂರಿನ ಅರಮನೆಯಲ್ಲಿ ಅತಿಥಿಗಳೊಂದಿಗೆ ಮಾತಾಡುತ್ತ ಕುಳಿತ ಅವರಿಗೆ ಬೀಸಣಿಗೆಯಿಂದ ಬೀಸಲು, ತನ್ನ ಜೊತೆಯವರೊಂದಿಗೆ ಸ್ಪರ್ಧೆ ಹೂಡುತ್ತಿದ್ದುದನ್ನು ನೆನೆಯುತ್ತಾರೆ. ರವಿವರ್ಮನ ಐದು ಮಕ್ಕಳಲ್ಲಿ, ಒಬ್ಬರಾದ ರಾಮವರ್ಮ ಕೂಡ ಹೆಸರಾಂತ ಚಿತ್ರಕಾರನೆನಿಸಿ, ೧೯೧೫ ರಲ್ಲಿ 'ಮಾವೆಲ್ಲಿಕ್ಕಾರ'ದಲ್ಲಿ 'ರವಿವರ್ಮ ಇನ್ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್' ಎಂಬ ಚಿತ್ರಶಾಲೆಯನ್ನು ಸ್ಥಾಪಿಸಿದರು. ೧೮೯೩ ರಲ್ಲಿ ರವಿವರ್ಮ ಚಿತ್ರಿಸಿದ 'there comes papa' ಎಂಬ ಚಿತ್ರಕ್ಕೆ ಅವರ ಮಗಳೇ ರೂಪದರ್ಶಿ.

ತಮ್ಮ ಕಲಾಕೃತಿಗಳು ಹೆಚ್ಚು ಹೆಚ್ಚು ಮಂದಿಗೆ ಲಭ್ಯವಾಗಬೇಕೆಂದು ರವಿವರ್ಮ ಮುಂಬಯಿಯಲ್ಲಿ, ೧೮೯೪ ರಲ್ಲಿ, ಬಣ್ಣದ ಮುದ್ರಣಾಲಯವೊಂದನ್ನು ಸ್ಥಾಪಿಸಿ, ಪ್ರತಿಗಳನ್ನು ಮುದ್ರಿಸತೊಡಗಿದರು. ಕಡಿಮೆ ಬೆಲೆಗೆ ಸಿಗುತ್ತಿದ್ದ ದೇವ-ದೇವಿಯರ ಚಿತ್ರಗಳನ್ನು ಜನ ಮೆಚ್ಚಿದರು. ಇಂದಿಗೂ ರವಿವರ್ಮನ ಹೆಸರೂ ಕೇಳದ ಭಾರತೀಯರ ಮನೆಗಳಲ್ಲಿ, ಅಂಗಡಿಗಳಲ್ಲಿ ಈ ಚಿತ್ರಗಳ ನಕಲುಗಳಿವೆ. ಇದು ಮೈಸೂರು ಶೈಲಿಯ ಚಿತ್ರಕಲೆಯ ಬೆಳವಣಿಗೆಗೆ ಆತಂಕ ತಂದಿತ್ತು ಎಂದು ಕೂಡ ಹೇಳುತ್ತಾರೆ.

ಮೊದಲಿಗೆ ರವಿವರ್ಮರ ಮುದ್ರಣಾಲಯ ಲಾಭಗಳಿಸಿದರೂ ಕಾಲಕ್ರಮದಲ್ಲಿ ಅನೇಕ ಸಮಸ್ಯೆಗಳೆದುರಾದವು. ಈ ಸಾಹಸದಲ್ಲಿ ಸಾಕಷ್ಟು ಹಣ ಕಳೆದುಕೊಂಡ ರವಿವರ್ಮ ಪಶ್ಚಾತ್ತಾಪ ಪಡಲಿಲ್ಲ. ಸಾಮಾನ್ಯ ಜನಗಳಲ್ಲೂ ತಮ್ಮ ಕಲೆಯ ಬಗ್ಗೆ ಪ್ರೀತಿಯುಂಟಾಗುವಂತೆ ಮಾಡುವಲ್ಲಿ ಸಫಲರಾಗಿದ್ದರು.

೧೯೦೪ರಲ್ಲಿ ಅನಾರೋಗ್ಯದಿಂದ ಬಳಲಿದ ರಾಜವರ್ಮ ಮರಣಹೊಂದಿದರು. ಇದರಿಂದ ರವಿವರ್ಮನ ಮಾನಸಿಕ ದೃಢತೆ ಎಷ್ಟು ನುಚ್ಚುನೂರಾಯಿತೆಂದರೆ, ಹೊಸ ಹೊಸ ಕೆಲಸಗಳನ್ನು ಕೊಳ್ಳುವುದನ್ನೇ ಅವರು ನಿಲ್ಲಿಸಿ, ಅಪೂರ್ಣವಾಗಿದ್ದ ಕೆಲವು ಕೃತಿಗಳನ್ನು ಮಾತ್ರ ಪೂರ್ಣಗೊಳಿಸಿದರು, ಅನಾರೋಗ್ಯಕ್ಕೆ ತುತ್ತಾದ ರವಿವರ್ಮ, ತಮ್ಮ ೫೮ ನೆಯ ವಯಸ್ಸಿನಲ್ಲಿ ೧೯೦೬ರಲ್ಲಿ ಮೃತರಾದರು.


ಸಾಯುವ ವೇಳೆಗೆ ರವಿವರ್ಮ ನಿಸ್ಸಂದೇಹವಾಗಿಯೂ ಭಾರತದ ಚಿರಪರಿಚಿತ ಹಾಗೂ ಅತ್ಯಂತ ಗೌರವಾನ್ವಿತ ಕಲಾಕಾರನೆನಿಸಿದ್ದರು. ಆದರೆ ಕೆಲವರ್ಷಗಳಲ್ಲೇ

ಅವರ ವಿರುದ್ಧ ಟೀಕೆಗಳಿದ್ದವು. ಅತ ಭಾವಾತಿರೇಕಕ್ಕೊಳಗಾದವರೆಂದೂ, ಭಾರತೀಯರಂತೆ ಇಲ್ಲದೆ, ಕೇವಲ ಐರೋಪ್ಯ ವಿಧಾನಗಳನ್ನನುಸರಿಸುವರೆಂದೂ ಕಲ್ಪನಾ ಶಕ್ತಿ ಇಲ್ಲದೆ ಕೇವಲ ಅನುಕರಣೆ ಮಾಡುವವರೆಂಬ ಟೀಕೆಗಳು ಕೇಳಿಬಂದವು. ಏನೇ ಆದರೂ ಅವರ ಜನಪ್ರಿಯತೆ ಎಳ್ಳಷ್ಟೂ ಕಡಿಮೆಯಾಗಲಿಲ್ಲ. ಇತ್ತೀಚೆಗೆ ವಿಮರ್ಶಕರು ಅವರ ಬಗೆಗಿನ ಅಭಿಪ್ರಾಯಗಳನ್ನು ಪುನರ್ವಿಮರ್ಶಿಸುತ್ತಿದ್ದಾರೆ.

ಮುಂಬಯಿಯ ಚಿತ್ರಕಾರ ಹಾಗೂ ಹಿಂದಿನ ಕಲಾನಿರ್ದೇಶಕರಾದ ಬಾಬೂರಾವ್ ಸರ್ದ್ವೇಲ್ಕರ್ ರವಿವರ್ಮನನ್ನು 'ಬಣ್ಣಗಳ ಒಡೆಯ' ಎನ್ನುತ್ತಾರೆ. ಇಂದಿಗೂ ಅವರ ಹೆಚ್ಚಿನ ಚಿತ್ರಗಳ ಬಣ್ಣ ಮಾಸಿಲ್ಲ. ಅದಕ್ಕೂ ಹೆಚ್ಚಾಗಿ ಉಡಿಗೆತೊಡಿಗೆಗಳು ಆಭರಣಗಳು, ಭಾರತೀಯ ಮೈ ಚರ್ಮದ ಸೊಗಸನ್ನು ಚಿತ್ರಿಸುವುದರಲ್ಲಿ ಇಂದಿಗೂ ಅವರನ್ನು ಮೀರಿಸಿದವರಿಲ್ಲ. ನಿಜಕ್ಕೂ ಭಾರತದ ಶ್ರೇಷ್ಠ ಪ್ರಾಚೀನ ವೈಭವದ ಬಗೆಗಿನ ಅವರ ದೃಷ್ಟಿ, ಸಾಮಾನ್ಯರನ್ನಲ್ಲದೆ, ಬರಹಗಾರರು ಹಾಗೂ ಚಲನಚಿತ್ರ ನಿರ್ಮಾಪಕರ ಮೇಲೂ ತನ್ನ ಪ್ರಭಾವ ಬೀರಿದೆ.

ಆಧುನಿಕ ಚಿತ್ರಕಾರ ಹಾಗೂ ಕೇರಳ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾದ ಎ. ರಾಮಚಂದ್ರನ್ "ರವಿವರ್ಮ, ಚಿತ್ರಕಲೆಗೆ ಭವ್ಯ ಹಾಗೂ ಸಾರ್ವತ್ರಿಕ ದೃಷ್ಟಿಯಿತ್ತ ಮೊದಲ ಭಾರತೀಯ ಕಲಾಕಾರ" ಎನ್ನುತ್ತಾರೆ.

ವಿಶ್ವದ ವಿವಿಧ ಸಂಗ್ರಹಾಲಯಗಳಲ್ಲಿ ರವಿವರ್ಮರ ಕಲಾಕೃತಿಗಳು ದರ್ಶಕರನ್ನು ರಂಜಿಸುತ್ತಿವೆ. 'ಔಂಧ್'ನ ಶ್ರೀ ಭವಾನಿ ಮ್ಯೂಸಿಯಂ, ತಿರುವಾಂಕೂರಿನ ಅರಮನೆ ಸಂಗ್ರಹಾಲಯ, ಮೈಸೂರಿನ ಜಗನ್ಮೋಹನ ಅರಮನೆಯ ಶ್ರೀ ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿ, ತಿರುವನಂತಪುರದ ಚಿತ್ರಾ ಆರ್ಟ್ ಗ್ಯಾಲರಿ ಇವುಗಳಲ್ಲಿ ಕೆಲವು.



ಮನಸ್ಸಿನ ಚಿಂತಾಭ್ರಾಂತಿಗಳಿಗೆಲ್ಲ ಅಹಂಕಾರವೇ ಕಾರಣವಾಗಿದೆ. ಅಹಂಕಾರದಿಂದ ದೂರವಿರುವುದರಿಂದಲೇ ಮನಸ್ಸಿಗೆ ಶಾಂತಿ ನೆಮ್ಮದಿಗಳು ಲಭಿಸುತ್ತವೆ.

—ಮಹಾವೀರ

ಅರಣ್ಯದಲ್ಲಿ ಸಂಯುಕ್ತ ಆಡಳಿತ

ಡಾ|| ಕೋಡೀರ ಅ. ಕುಶಾಲಪ್ಪ

ಆಡಳಿತ-ನಿರ್ವಹಣೆ ಸಂಬಂಧದಲ್ಲಿ ನಿರ್ವಹಣೆಯೇ ಆಡಳಿತದ ತಾರ್ಕಿಕ ತ್ರಾಣದ ನಿರ್ಣಾಯಕ, ಆಡಳಿತೆಯೇ ನಿರ್ವಹಣೆಯ ಜನಪರ ಯಶಸ್ಸಿನ ಮಾನಕ. ಈ ಸುಲಭ ಸಾವಯವ ಸಂಬಂಧ ಈಗ ನಮ್ಮ ದೇಶದಲ್ಲಿ ಕಡಿದುಹೋಗಿದೆಯೋ 'ಆಡಳಿತ' ಗ್ರಂಥದಲ್ಲಿ ಗಹನತೆಗಾಗಿಯೋ 'ನಿರ್ವಹಣೆ' ಅರಾಜಕ ಯಾದೃಚ್ಛಿಕತೆಯಾಗಿಯೋ—ಒಟ್ಟಾರೆ ದೇಶಹಿತಕಾರಿಯಲ್ಲದ ರೀತಿಯಲ್ಲಿ—ಸಾಗುತ್ತಿವೆಯೋ ಎಂಬ ಆತಂಕ ತಲೆದೋರಿದೆ. ಪ್ರಸಕ್ತ ಲೇಖನ ಆಡಳಿತ-ನಿರ್ವಹಣೆ ಸಂಬಂಧದ ಪುನಃಸ್ಥಾಪನೆ ಕುರಿತ ಸರ್ಕಾರೀ ಚಿಂತನೆಯ ವಿವರಣೆ ತೀರ ಸಾಮಯಿಕವಾಗಿದೆ.

—ಸಂ.

ಇತ್ತೀಚೆಗಿನ ಮಾಹಿತಿಯಂತೆ, ನಮ್ಮ ರಾಷ್ಟ್ರದ ಶೇಕಡಾ ೨೨ ಭಾಗವನ್ನು ಅರಣ್ಯ ಪ್ರದೇಶವೆಂದು ಘೋಷಿಸಲಾಗಿದೆ. ಈ ಅರಣ್ಯ ಪ್ರದೇಶದಲ್ಲಿ ಶೇಕಡಾ ಸುಮಾರು ೫೦ರಷ್ಟು ಭಾಗ ಜೈವಿಕ ಒತ್ತಡಗಳ ಕಾರಣದಿಂದ ಅವನತಿ ಹೊಂದಿದ ಪ್ರದೇಶಗಳಾಗಿ ಶೇಕಡಾ ೧೧ರಷ್ಟು ಮಾತ್ರ ಉತ್ತಮ ಕಾಡು ಪ್ರದೇಶಗಳು ಇರುವುದಾಗಿದೆ. ೧೯೮೮ರ ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ, ನಮ್ಮ ದೇಶದಲ್ಲಿ ಶೇಕಡಾ ೩೩ರಷ್ಟು ಅರಣ್ಯ ಪ್ರದೇಶವಿರಬೇಕೆಂದು ಗೊತ್ತುಮಾಡಲಾಗಿದೆ. ಅಷ್ಟು ಇದ್ದರೇನೇ ನಮ್ಮ ಪರಿಸರ ಮತ್ತು ವಾತಾವರಣ ಜೀವನಕ್ಕೆ ಅನುಕೂಲವಾಗುವುದಲ್ಲದೆ, ನಮ್ಮ ದಿನನಿತ್ಯದ ಬೇಡಿಕೆಗಳಾದ ಕಟ್ಟಿಗೆ, ಮೇವು, ಸಣ್ಣ ಮರಮುಟ್ಟುಗಳ ಪೂರೈಕೆಯೂ ಆಗುವುದು. ಸತತವಾಗಿ ಏರುತ್ತಿರುವ ಜನಸಂಖ್ಯೆ (ಈಗ ಸಾಧಾರಣ ೯೦ ಕೋಟಿ), ಅವರಿಂದ ಆಗುತ್ತಿರುವ ಒತ್ತುವರಿ, ಕೈಗಾರಿಕಾ ಅಭಿವೃದ್ಧಿಗೆ ಬೇಕಾಗುವ ಜಮೀನು, ಸಾಧಾರಣ ೫೦ ಕೋಟಿ ಇರುವ ಜಾನುವಾರುಗಳ ಮೇವಿನ ಪೂರೈಕೆಗೆ ಅಗತ್ಯ ಬೇಕಾಗುವ ಗೋಮಾಳ ಮೊದಲಾದವುಗಳಿಂದ, ಅರಣ್ಯಪ್ರದೇಶವನ್ನು ಈಗಿರುವ ಶೇಕಡಾ ೨೨ರಿಂದ, ಅರಣ್ಯನೀತಿಯ ಆದೇಶದಂತೆ ಶೇಕಡಾ ೩೩ಕ್ಕೆ ಏರಿಸುವುದು ಇಂದಿನ ಪರಿಸ್ಥಿತಿಯಲ್ಲಿ ಅಸಾಧ್ಯ. ಆದರೂ ಜಮೀನುಗಳ ಬದುಗಳಲ್ಲಿ, ಸಣ್ಣ ಪುಟ್ಟ ಖಾಲಿ ಇರುವ ಜಾಗೆಯಲ್ಲಿ, ಕೈಗಾರಿಕಾ ಸಂಸ್ಥೆಗಳ ಸುತ್ತಲೂ (ಹಸಿರುಪಟ್ಟಿಯಂತ), ರಸ್ತೆ, ಕಾಲುವೆ, ರೈಲುಹಳಿಗಳ ಇಕ್ಕೆಲ

ಗಳಲ್ಲಿ, ಶಾಲಾ ಕಾಲೇಜುಗಳ ಆವರಣಗಳಲ್ಲಿ ಮತ್ತು ಇತರ ಎಡೆಗಳಲ್ಲಿ ಸಾಧ್ಯವಾದಷ್ಟು ಮರಗಿಡಗಳನ್ನು ಬೆಳೆಸಿದ್ದಾದರೆ, ಅರಣ್ಯ ವಿಸ್ತೀರ್ಣ ಹೆಚ್ಚದೆಹೋದರೂ, ಗಿಡಮರಗಳ ಸಂಖ್ಯೆ ಹೆಚ್ಚಾಗಿ, ಪರಿಸರ ಮಾಲಿನ್ಯ ಹಾಗೂ ಮಣ್ಣಿನ ಸವಕಳಿಯ ತಡೆಗೆ, ಜಮೀನಿನಲ್ಲಿ ಹೆಚ್ಚಾಗಿ ನೀರನ್ನು ಇಂಗಿಸುವಿಕೆ, ಉಷ್ಣಾಂಶಗಳ ಏರುಪೇರುಗಳ ತಡೆಗೆ ಹಾಗೂ ಜನರ ಬೇಡಿಕೆಗಳ ಪೂರೈಕೆಗೆ ಸಹಾಯಕವಾಗುವುದು.

ಕಳೆದ ಶತಮಾನದ ಆದಿಯಲ್ಲಿ ಜನರ ಹಾಗೂ ಜಾನುವಾರುಗಳ ಸಂಖ್ಯೆ ಕಡಿಮೆ ಇದ್ದು, ಅರಣ್ಯ ಪ್ರದೇಶ ಸಾಕಷ್ಟು ಇದ್ದುದರಿಂದ (ಸಾಧಾರಣ ಶೇಕಡಾ ೫೦ರಷ್ಟು) ಅದರ ಅವನತಿಗೆ ಯಾವುದೊಂದು ಕಾರಣವಿರಲಿಲ್ಲ. ಆದರೆ ದಿನ ಕಳೆದಂತೆ ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಬೀಳುವುದು ಮತ್ತು ಅರಣ್ಯಗಳ ಕಡಿತಲೆ ಜಾಸ್ತಿಯಾಗಿ ಅವುಗಳು ನಾಶವಾಗುತ್ತಾ ಬಂತು. ಇದರ ಪರಿಣಾಮ ಬಾಂಬುಗಳ ಸ್ಫೋಟಕದಂತೆ ಕೂಡಲೇ ಜನರ ಮೇಲೆ ಉಂಟಾಗದಿದ್ದರೂ, ಬರುಬರುತ್ತಾ ಜನರ ಹಾಗೂ ಪರಿಸರದ ಮೇಲೆ ಕಂಡು ಬಂತು. ಇದನ್ನು ನಿಲ್ಲಿಸಲು ಬ್ರಿಟೀಷ್ ಸರ್ಕಾರ ಹಿಂದಿನ ಶತಮಾನದ ಕೊನೆಯಲ್ಲಿ (೧೮೫೫-೧೮೭೭) ಕೆಲವು ಅರಣ್ಯ ಕಾಯಿದೆ ಮತ್ತು ನಿಯಮಗಳನ್ನು ತಂದುದಲ್ಲದೆ, ಉತ್ತಮವಾದ ಅರಣ್ಯ ಪ್ರದೇಶಗಳನ್ನು ರಾಷ್ಟ್ರದ ಉಪಯೋಗಕ್ಕೆಂದು "ಕಾದಿಟ್ಟ" ಅಥವಾ "ಸರ್ಕಾರಿ" ಅರಣ್ಯಗಳೆಂದು ಬೇರ್ಪಡಿಸಿ, ಘೋಷಿಸಲಾಯಿತು. ಅವುಗಳ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಹಲವು ಕಾರ್ಯಾಚರಣೆಯ ನಿಯಮಗಳನ್ನು ತರಲಾಯಿತು. ಹಳ್ಳಿಗಳ ಪಕ್ಕದ ಅರಣ್ಯ ಪ್ರದೇಶಗಳನ್ನು ಮತ್ತು ದನಕರುಗಳಿಗೆ ಮೇಯಲು ಬೇಕಾಗುವ ಪ್ರದೇಶಗಳನ್ನು "ಗೋಮಾಳ"ಗಳೆಂದು ಬೇರ್ಪಡಿಸಿ, ಅವುಗಳನ್ನು ಕಂದಾಯ ಇಲಾಖೆಯ ಆಡಳಿತಕ್ಕೆ ಒಳಪಡಿಸಲಾಯಿತು. ಅರಣ್ಯ ಇಲಾಖೆಯ ಆಡಳಿತಕ್ಕೆ ಬಂದ ಅರಣ್ಯ ಪ್ರದೇಶಗಳ ಕಾರ್ಯಾಚರಣೆಗೆ ಯುಕ್ತವಾದ ಕಾರ್ಯ ಯೋಜನೆ, ಪ್ರತ್ಯೇಕ ಸಿಬ್ಬಂದಿಗಳನ್ನು ನಿಯಮಿಸಿದುದರಿಂದ, ಈಗಲೂ ಅಂತಹ ಪ್ರದೇಶಗಳಲ್ಲಿ ಅರಣ್ಯ ಬಲುಮಟ್ಟಿಗೆ ಹಾಳಾಗದೆ ಇದ್ದು, ಇಂದೂ ಬೆಳೆಯುತ್ತಿದೆ. ಆದರೆ ಕಂದಾಯ ಇಲಾಖೆಯ ಮತ್ತು ಇತರ ಖಾಸಗಿ ಅರಣ್ಯ ಪ್ರದೇಶಗಳ ಕಾರ್ಯಾಚರಣೆಗೆ ಯಾವುದೊಂದು, ನೀತಿ ನಿಯಮವಿಲ್ಲದೆ, ಯಾರ ಜವಾಬ್ದಾರಿ ಇಲ್ಲದೆ, ಆ ಪ್ರದೇಶಗಳೆಲ್ಲಾ ಬಲುಮಟ್ಟಿಗೆ ಒತ್ತುವರಿಯಾಗಿ, ಕಾಡು ಅವನತಿಯಾಗಿ, ಈಗ ನೋಡಿದರೆ, ಹಳ್ಳಿಗ್ರಾಮಗಳ ಸುತ್ತಲೂ ಮೊದಲು ಉತ್ತಮವಾಗಿಯೇ ಇದ್ದ ಕಂದಾಯ ಭೂಮಿಗಳು ಈಗ ಬರೀ ಬರಡು ಪ್ರದೇಶವಾಗಿ ಕಂಡುಬರುತ್ತಿವೆ. ಈ ಪ್ರದೇಶಗಳಲ್ಲಿ ಈಗ ಮೇವು ಸಹ ಸಿಗದೆ, ಬೆಂಕಿ ಬೀಳುವುದು ಹೆಚ್ಚಾಗಿ ಒತ್ತುವರಿಯೂ ನಡೆಯುತ್ತಿದೆ.

ಈ ರೀತಿ ಅವನತಿ ಹೊಂದುತ್ತಿರುವ ಅರಣ್ಯ ಪ್ರದೇಶಗಳನ್ನು ಪುನರ್ ಅಭಿವೃದ್ಧಿಗೊಳಿಸಲು, ಜನರಲ್ಲಿ ವಿವೇಕ ಮೂಡಿಸಿ ಅವರಿಗೆ ಬೇಕಾಗುವ, ಅಕ್ಕಪಕ್ಕದ ಹಳ್ಳಿಗಳಲ್ಲಿ ನಶಿಸುತ್ತಿರುವ ಅರಣ್ಯ ಪ್ರದೇಶಗಳನ್ನು ಅವರ ಸಹಾಯದಿಂದಲೇ, ಅವರಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಲು

ಭಾರತ ಸರ್ಕಾರ ಇತ್ತೀಚೆಗೆ "ಜಂಟಿ ಆಡಳಿತ" (Joint Forest Management) ವೆಂಬ ಬೃಹತ್ ಕಾರ್ಯಕ್ರಮವನ್ನು ರೂಪಿಸಿ ಕೊಂಡಿದೆ. ೧೯೮೮ರ ರಾಷ್ಟ್ರೀಯ ಅರಣ್ಯ ನೀತಿಯಲ್ಲಿಯೂ ಅರಣ್ಯ ಅಭಿವೃದ್ಧಿ ಮತ್ತು ರಕ್ಷಣೆಗೆ ಜನರನ್ನು ತೊಡಗಿಸಲು ಉದ್ದೇಶಿಸಿದೆ. ಅಲ್ಲದೆ ಗ್ರಾಮದ ಜನರು ಮತ್ತು ಗ್ರಾಮ ಸಮುದಾಯಗಳು ಅರಣ್ಯ ಅಭಿವೃದ್ಧಿ ಮತ್ತು ಅರಣ್ಯ ರಕ್ಷಣೆಯಲ್ಲಿ, ತಮ್ಮನ್ನು ತಾವೇ ಗುರುತಿಸುವಂತೆ ಪ್ರೇರಣೆಗೊಳ್ಳುವ ರೀತಿಯಲ್ಲಿ ಪುನರ್ವ್ಯವಸ್ಥೆಗೊಳಿಸಬೇಕೆಂದು ಆದೇಶಿಸಿದೆ. ಭಾರತ ಸರ್ಕಾರದ ಪರಿಸರ ಹಾಗೂ ಅರಣ್ಯ ಮಂತ್ರಾಲಯದವರು ಒಂದು ಆದೇಶ (ಪತ್ರ ಸಂಖ್ಯೆ: ೬-೧೨-೮೯/೮೯ ಎಫ್. ಪಿ.; ದಿನಾಂಕ ೧-೬-೧೯೯೦) ವನ್ನು ಹೊರಡಿಸಿ, ಅವನತಿ ಹೊಂದಿದ ಅರಣ್ಯ ಭೂಮಿಗಳನ್ನು ಪುನಃ ಬೆಳೆಸಲು ಗ್ರಾಮ ಸಮುದಾಯಗಳನ್ನು ಮತ್ತು ಸ್ವಯಂ ಸೇವಾ ಸಮಿತಿಗಳನ್ನು ತೊಡಗಿಸುವುದಕ್ಕೆ ಯುಕ್ತ ಮಾರ್ಗದರ್ಶನ ಸೂತ್ರಗಳನ್ನು ನೀಡಿದ್ದಾರೆ. ಸಮುಚಿತ ಕ್ರಮಕ್ಕೆಗೊಳ್ಳುವಂತೆ ರಾಜ್ಯ ಸರ್ಕಾರಗಳನ್ನೂ ಕೋರಿದೆ. ಅರಣ್ಯ ಅಭಿವೃದ್ಧಿ ಕಾರ್ಯನಿರ್ವಹಣೆ, ರಕ್ಷಣೆ ಮತ್ತು ಆಡಳಿತ ರಾಜ್ಯ ಸರ್ಕಾರಗಳ ಹೊಣೆಯಾದರೂ, ಕೇಂದ್ರ ಸರ್ಕಾರ, ಅವುಗಳ ರೀತಿ ನೀತಿ ರೂಪಿಸುವ, ರಾಷ್ಟ್ರಕ್ಕೆ ಅನುಕೂಲವಾಗುವಂತಹ ಕಾರ್ಯ ನಿರ್ವಹಿಸುವ ಆದೇಶ ಹೊರಡಿಸುವ ಹಕ್ಕನ್ನು ೧೯೭೬ರಿಂದ ಪಡೆದುಕೊಂಡಿದೆ. ಅದರಂತೆ ಯುಕ್ತ ಆದೇಶಗಳನ್ನೂ ಹೊರಡಿಸುತ್ತಿದ್ದಾರೆ. ರಾಷ್ಟ್ರದಲ್ಲಿ ಭಾರತೀಯ ಅರಣ್ಯ ಕಾಯಿದೆ (೧೯೨೭) ರಾಷ್ಟ್ರದ ಎಲ್ಲಾ ಭಾಗಗಳಿಗೆ ಅನ್ವಯಿಸುತ್ತಿದೆಯಾದರೂ, ಕೆಲವು ರಾಜ್ಯಗಳಲ್ಲಿ, ಅಲ್ಲಿಯ ಪರಿಸ್ಥಿತಿ ವಿಭಿನ್ನವಾಗಿರುವುದರಿಂದಲೂ, ವಿಶೇಷ ರೀತಿ ನೀತಿ, ನಿಯಮಗಳು ಬೇಕಾಗಿರುವುದರಿಂದಲೂ, ತಮ್ಮದೇ ಆದ ರಾಜ್ಯ ಅರಣ್ಯ ಕಾಯಿದೆಗಳನ್ನು ರೂಪಿಸಿಕೊಂಡಿವೆ. ಅದರಂತೆ ಕರ್ನಾಟಕದಲ್ಲಿ, ಅರಣ್ಯ ಆಡಳಿತದಲ್ಲಿ ಬಿಗಿತರಲು, ಕರ್ನಾಟಕ ಅರಣ್ಯ ಕಾಯಿದೆ (೧೯೬೩) ಮತ್ತು ವನ್ಯಜೀವಿ ಸಂರಕ್ಷಣೆ ಕಾಯಿದೆ (೧೯೭೨)ಗಳನ್ನು ಜಾರಿಗೆ ಬಂದಿದೆ.

ಕರ್ನಾಟಕವು ತಮ್ಮ ಸರ್ಕಾರಿ ಆದೇಶ ಸಂಖ್ಯೆ ಎಫ್.ಎಫ್.ಡಿ. ೭೫, ಎಫ್.ಎ.ಪಿ. ೮೩ ದಿನಾಂಕ ೨೩-೧-೮೭ರಲ್ಲೇ ಪಟ್ಟಾ ನೀಡುವ ಕಾರ್ಯಕ್ರಮ ಮತ್ತು ಅರಣ್ಯ ಉತ್ಪನ್ನಗಳನ್ನು ಹಂಚಿಕೊಳ್ಳುವ ಬಗೆ ಕೆಲವು ನಿಯಮಗಳನ್ನು ಜಾರಿಗೆ ತಂದಿತ್ತು. ಆದರೆ ಇತ್ತೀಚಿನ ಸರ್ಕಾರಿ ಆದೇಶ ಸಂಖ್ಯೆ ಎ.ಹೆಚ್.ಎಫ್.ಎಫ್. ೨೩೨, ಎಫ್.ಎ.ಪಿ. ೮೬, ದಿನಾಂಕ ೧೨-೪-೧೯೯೩ ಪ್ರಕಾರ ಕರ್ನಾಟಕದಲ್ಲಿ ಸಂಯುಕ್ತ ಅರಣ್ಯ ಯೋಜನೆ ಮತ್ತು ನಿರ್ವಹಣೆ (ಜೆ.ಎಫ್.ಪಿ.ಎಂ.) ಕಾರ್ಯಯೋಜನೆ, ಮರದ ಸಂಬಂಧದಲ್ಲಿ ಪಟ್ಟಾ ನೀಡಿರುವ ಕಾರ್ಯಯೋಜನೆ ಮತ್ತು ಅರಣ್ಯ ಉತ್ಪನ್ನಗಳ ಹಂಚಿಕೆ ಬಗೆ ವಿಶದವಾಗಿ ಕಾರ್ಯಗತಗೊಳಿಸಲು ಸೂತ್ರಗಳನ್ನು ಜಾರಿಗೊಳಿಸಿ, ಮೊದಲು ಕಾಣಿಸಿದ ಸರ್ಕಾರದ ಆದೇಶ (ದಿನಾಂಕ ೨೩-೧-೮೭) ವನ್ನು ಅನೂರ್ಜಿತಗೊಳಿಸಿದ್ದಾರೆ. ಜೆ.ಎಫ್.ಪಿ.ಎಂ. ಆಶ್ರಯದಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ಮತ್ತು ಜನಸಮೂಹವನ್ನು ಬಹೃತ್ ಪ್ರಮಾಣದಲ್ಲಿ ಭಾಗಿತ್ವಗೊಳಿಸ

ವುದರಿಂದ ಸ್ಥಳೀಯ ಜನರ ವಾಸ್ತವಿಕ ಅವಶ್ಯಗಳನ್ನು ಪೂರೈಸಲು ಸಾಧ್ಯವಾಗುವುದಲ್ಲದೆ, ಅವನತಿ ಹೊಂದಿದ ಅರಣ್ಯಗಳನ್ನು ಮತ್ತು ಇತರ ಸರ್ಕಾರಿ ಪಾಳುಭೂಮಿಗಳನ್ನು ಉತ್ತಮ ಪಡಿಸಲಾಗುವುದು. ಈ ಕಾರ್ಯಯೋಜನೆಯು ಇನ್ನೂ ದೃಢವಾದ ಅರಣ್ಯ ಅಭಿವೃದ್ಧಿಗೆ ಕಾರಣವಾಗುವುದೆಂದು ನಿರೀಕ್ಷಿಸಲಾಗಿದೆ. ಈ ಸರ್ಕಾರದ ಆದೇಶದಂತೆ ಮುಂದಿನ ಮೂರು ಅತೀ ಮುಖ್ಯ ಯೋಜನೆಗಳು ರೂಪುಗೊಂಡಿವೆ.

ಅ) ಸಂಯುಕ್ತ ಅರಣ್ಯ ಯೋಜನೆ ಮತ್ತು ನಿರ್ವಹಣೆ (ಜೆ.ಎಫ್.ಪಿ.ಎಂ.):

ಈ ಯೋಜನೆಯಡಿಯಲ್ಲಿ ಗ್ರಾಮ ಅರಣ್ಯ ಸಮಿತಿ (ವಿ.ಎಫ್.ಸಿ.)ಗಳನ್ನು ಕರ್ನಾಟಕ ಸೊಸೈಟಿ ಅಧಿನಿಯಮದ ಮೇರೆಗೆ ರಚಿಸಿ, ಅವರು ಅರಣ್ಯ ಕಾರ್ಯ ಯೋಜನೆಯಲ್ಲೂ, ಅವರ ಸಂರಕ್ಷಣೆ ಹಾಗೂ ಅಭಿವೃದ್ಧಿಯಲ್ಲೂ ಸ್ವತಃ ಭಾಗಿಯಾಗಿ, ಉತ್ಪನ್ನದ ಕಟಾವು ಮತ್ತು ಹಂಚಿಕೆಗಳಲ್ಲೂ, ರೀತಿ ನೀತಿ ನಿಯಮಗಳನ್ನು ರೂಪಿಸಿ ಅವರಂತೆ ಕಾರ್ಯವೆಸಗುವುದು ಅವರ ಜವಾಬ್ದಾರಿಯಾಗಿದೆ. ಈ ಸಮಿತಿಗಳ ಕಾರ್ಯಚಟಣೆಗಳಿಗೆ, ನೊಂದಾಯಿತ ಗ್ರಾಮಗಳಲ್ಲಿ, ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಗಳನ್ನು ಪ್ರಾರಂಭಿಸಲಾಗಿದೆ. ಈ ಸಮಿತಿಗಳ ಜವಾಬ್ದಾರಿ ಕೆಲವೊಂದು ಜಮೀನುಗಳಲ್ಲಿ ಮಾತ್ರ ವ್ಯಾಪ್ತಿಗೊಳಿಸಲಾಗಿದೆ. ಅಂತಹ ಜಮೀನುಗಳೆಂದರೆ ೧) ೦.೪ ಮತ್ತು ಅದಕ್ಕೂ ಕಡಿಮೆ ವೃಕ್ಷದಟ್ಟನೆ ಇರುವ ಅವನತಿ ಹೊಂದಿದ ಜಮೀನುಗಳು. ೨) ಕಂದಾಯ ಇಲಾಖೆಯ ನಿಯಂತ್ರಣದಲ್ಲಿದ್ದ ಸಿ ಮತ್ತು ಡಿ ವರ್ಗದ ಭೂಮಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟದ್ದು. ೩) ರಸ್ತೆ ಮತ್ತು ಕಾಲುವೆ ಬದಿಗಳು ಹಾಗೂ ಕೆರೆಯ ಮುಂಗರೆಗಳು. ಪದನಿಮಿತ್ತ ಸದಸ್ಯರುಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಬಿಟ್ಟು, ಉಳಿದ ಎಲ್ಲಾ ಸದಸ್ಯರುಗಳು ಈ ಸಮಿತಿಯ ಫಲಾನುಭವಿಗಳಾಗುತ್ತಾರೆ. ಈ ಸಮಿತಿಯ ನಿರ್ವಹಣೆ ಸಮಿತಿಯಲ್ಲಿ ೧೦ ಚುನಾಯಿತ ಮತ್ತು ೪ ಪದನಿಮಿತ್ತ ಸದಸ್ಯರುಗಳು ಸೇರಿ (ಅಧ್ಯಕ್ಷರ ಹೊರತು) ೧೪ ಜನ ಸದಸ್ಯರಿರುತ್ತಾರೆ. ಇವರಲ್ಲಿ ೨ ಪರಿಶಿಷ್ಟ ಜಾತಿ ಪಂಗಡಗಳ ಪ್ರತಿನಿಧಿ; ೨ ಮಹಿಳಾ ಸದಸ್ಯರು; ೧ ಭೂರಹಿತ ಕಾರ್ಮಿಕರು; ೧ ಗ್ರಾಮ ಕುಶಲಕರ್ಮಿಗಳು ಮತ್ತು ೪ ಸಾಮಾನ್ಯ ಪ್ರವರ್ಗ ಸದಸ್ಯರುಗಳು ಸೇರಿರುತ್ತಾರೆ. ರಕ್ಷಣೆ, ಯೋಜನೆ, ಪುನರ್ನಿರ್ಮಾಣದಲ್ಲಿ ಗ್ರಾಮಸ್ಥರು ಸಹಕಾರವನ್ನು ಹಂಚಿಕೊಳ್ಳಲು ಇಚ್ಛಿಸುವ ಯುಕ್ತ ಪ್ರದೇಶಗಳನ್ನು ಆದ್ಯತೆಯ ಪ್ರಕಾರ ಉಪಅರಣ್ಯ ಸಂರಕ್ಷಣಾಧಿಕಾರಿಯವರು, ಸಮಿತಿಯ ಜವಾಬ್ದಾರಿಗೆ ವಹಿಸಿಕೊಡಲಾಗುವುದು. ಗ್ರಾಮ ಅರಣ್ಯ ಸಮಿತಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು ಅನೇಕ ಇವೆ. ಅವುಗಳನ್ನು ಸರ್ಕಾರದ ಆದೇಶ ದಿನಾಂಕ ೧೨-೪-೯೩ರ ಅನುಬಂಧದಲ್ಲಿ ವಿವರವಾಗಿ ಕೊಡಲಾಗಿದೆ.

ಗ್ರಾಮ ಅರಣ್ಯ ಸಮಿತಿಯಲ್ಲಿ ಗುರುತಿಸಲಾದ ಫಲಾನುಭವಿಗಳು ಉಚಿತವಾಗಿ ಹುಲ್ಲು ಸೊಪ್ಪು ಮತ್ತು ಕಟ್ಟಿಗೆಯನ್ನು ಅಲ್ಲದೆ ಮರದ ರೆಂಬೆ ಕೊಂಬೆಗಳು, ಸವರಿದ

ಭಾಗಗಳನ್ನು ಉಚಿತವಾಗಿ ಪಡೆಯಲು ಅರ್ಹರು. ಒಟ್ಟು ಉತ್ಪನ್ನದ ಶೇಕಡ ೫೦ ರಷ್ಟನ್ನು ಗ್ರಾಮಸ್ಥರಿಗೆ ಬೇಕಾದಲ್ಲಿ ರಿಯಾಯಿತಿ ದರದಲ್ಲಿ ಹಂಚಿ, ಉಳಿದುದನ್ನು ಹರಾಜಿನಲ್ಲಿ ವಿಲೆವಾರಿ ಮಾಡಬಹುದು. ಹೀಗೆ ಬಂದ ಹಣದಲ್ಲಿ ಶೇಕಡ ೫೦ ರಷ್ಟನ್ನು ಸರ್ಕಾರ ತೆಗೆದುಕೊಳ್ಳುವುದಲ್ಲದೆ, ಶೇಕಡ ೨೫ ರಷ್ಟನ್ನು ಗ್ರಾಮ ಅರಣ್ಯ ನಿಧಿಗೂ ತುಂಬುವರು.

ಆ) ಮರಮುಟ್ಟು ಯೋಜನೆ:

ಮರಗಿಡಗಳನ್ನು ಅರಣ್ಯ ಹಾಗೂ ಇತರ ಅವನತಿ ಹೊಂದುತ್ತಿರುವ ಯಾ ಹೊಂದಿದ ಜಮೀನುಗಳಲ್ಲಿ ಮಾತ್ರ ಬೆಳೆಸುವುದಲ್ಲದೆ, ರಸ್ತೆ ಬದುಗಳಲ್ಲಿ, ಕಾಲುವೆ ದಂಡೆಗಳಲ್ಲಿ, ರೈಲು ರಸ್ತೆಯ ಇಕ್ಕಡೆಗಳಲ್ಲಿ, ನಗರ ಪ್ರದೇಶದ ಉದ್ಯಾನವನ, ಶಾಲೆ ಕಾಲೇಜು, ಕೈಗಾರಿಕಾ ಜಮೀನುಗಳಲ್ಲಿ ಬೆಳೆಸಬಹುದು. ಆದರೆ ಅವುಗಳನ್ನು ಇತರ ಅರಣ್ಯ ಪ್ರದೇಶಗಳಲ್ಲಿ ಕಾಪಾಡುವಷ್ಟು ಸುಲಭವಲ್ಲ. ಆದ್ದರಿಂದ, ಜನರಿಗೆ ಕಾಯುವ ಹಕ್ಕನ್ನು "ಪಟ್ಟಾ" ರೂಪದಲ್ಲಿ ಬಿಟ್ಟುಕೊಟ್ಟು, ಅದಕ್ಕಾಗಿ ಆ ಮರಗಳಿಂದ ಬರುವ ಪೂರ್ತ ಹಣ್ಣು, ಬೀಜ, ಸೊಪ್ಪು, ರೆಂಬೆಗಳನ್ನು, ಆ ಮರಗಳನ್ನು ನೋಡಿಕೊಳ್ಳುವ ಫಲಾನುಭವಿಗಳಿಗೆ ಸಿಗುವಂತೆ ಮಾಡಲಾಗಿದೆ. ಅಂತಿಮ ಫಸಲಿನ ಕಾಲದಲ್ಲಿ ಫಲಾನುಭವಿಗಳೂ ಮತ್ತು ಸರ್ಕಾರ ೭೫:೨೫ರ ನಿಷ್ಪತ್ತಿಯಲ್ಲಿ ಹಂಚಿಕೊಳ್ಳಬಹುದು. ಸಂಸ್ಥೆಗಳು, ಸಮುದಾಯಗಳು ಮತ್ತು ಇತರ ಸರ್ಕಾರಿ ಇಲಾಖೆಗಳಿಗೆ ಸೇರಿದ ಜಮೀನಿನಲ್ಲಿ ಬೆಳೆಸಿದ ಮರಗಿಡಗಳ ಅಂತಿಮ ಉತ್ಪನ್ನದ ನಿವ್ವಳ ಮೊತ್ತವನ್ನು ೫೦:೫೦ರ ಪ್ರಮಾಣದಲ್ಲಿ ಎಂದರೆ ಅರಣ್ಯ ಇಲಾಖೆ ಮತ್ತು ಇತರ ಭಾಗಿಗಳಾದ ಸಂಸ್ಥೆ ಇಲಾಖೆಗಳು ಹಂಚಿಕೊಳ್ಳಬಹುದು. ರಸ್ತೆ ಮತ್ತು ಕಾಲುವೆ ಪಕ್ಕದ ಮರಗಳನ್ನು ಪಕ್ಕದ ಭೂಮಾಲಿಕರಿಗೆ ಪಟ್ಟಾ ನೀಡಬಹುದು. ಇಂತಹ ಸೌಲಭ್ಯಗಳನ್ನು ಪಡೆಕೊಳ್ಳಲು ಯಾರೂ ಇಚ್ಛಿಸದೇ ಇದ್ದರೆ, ಅದರ ಜವಾಬ್ದಾರಿ, ಗ್ರಾಮ ಅರಣ್ಯ ಸಮಿತಿಗೆ ಕೊಡಬಹುದು. ಅವರೂ ಮುಂದೆ ಬರದಿದ್ದಲ್ಲಿ ಅರಣ್ಯ ಇಲಾಖೆಯವರೇ ಪೂರ್ಣ ಜವಾಬ್ದಾರಿ ಹೊರಬೇಕಾಗುವುದು. ಈ ಯೋಜನೆಯಡಿಯಲ್ಲಿ, ಮರಗಳನ್ನು ಲೆಕ್ಕ ಮಾಡಿ ಮರ ಪಟ್ಟಾದಾರನಿಗೆ ಬಿಟ್ಟುಕೊಡಲಾಗುವುದು. ಇದರ ಆಡಳಿತಕ್ಕೆ ಒಂದು ಸಮಿತಿಯನ್ನು ಸಹ ಸರ್ಕಾರ ರಚಿಸುವುದಲ್ಲದೆ ಅದರಲ್ಲಿ ಅಸಿಸ್ಟೆಂಟ್ ಕಮೀಷ್‌ನರ್ ಅಧ್ಯಕ್ಷರಾಗಿಯೂ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಯಾ ಅರಣ್ಯ ವಲಯಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿದ್ದು, ಆರು ಮಂದಿ ಸದಸ್ಯರೊಳಗೊಂಡಿದೆ.

ಅಡಚಣೆಗಳು:

ಈ ಮೇಲೆ ಹೇಳಿದ ಕಾರ್ಯ ಯೋಜನೆಗಳು ಅರಣ್ಯ ಇಲಾಖೆಗೆ ತೀರ ಹೊಸದಾಗಿರುವುದರಿಂದ ಅರಣ್ಯ ಸಿಬ್ಬಂದಿಗಳಿಗೆ ಮಾಹಿತಿ ನೀಡಲು ಹೊಸ ರೀತಿಯಲ್ಲಿ ಪುನಃ ಮನವೊಲಿಸಲು ತರಬೇತಿ ಕೊಡಬೇಕಾಗುವುದು. ಅರಣ್ಯ ಸಿಬ್ಬಂದಿಗಳ ರಕ್ಷಣೆ ಬೆಳವಣಿಗೆ ಮೊದಲಾದ ಕೆಲಸ ಕಾರ್ಯಗಳು ಬರೇ ರಕ್ಷಿತ ಅರಣ್ಯ, ಸರ್ಕಾರಿ ಅರಣ್ಯಗಳಲ್ಲಿ


ನಡೆಯುತ್ತಿದ್ದುದರಿಂದ, ಗ್ರಾಮಸ್ಥರ ಹಾಗೂ ಇತರ ಜನರ ಸಂಪರ್ಕ ಹೆಚ್ಚು ಇರಲಿಲ್ಲ. ಈಗ ಕೂಡಲೆ ಅವರ ಕೆಲಸದ ರೀತಿ, ನೀತಿ ಬದಲಾಯಿಸಿ, ಜನರೊಡನೆ ಸಂಪರ್ಕ ಬೆಳೆಸಿ ಜಂಟಿ ಆಡಳಿತ ನಡೆಸುವುದು, ಅವರು ಬೆಳೆದುಬಂದ ರೀತಿಗೆ, ನೀತಿಗೆ ಪೂರಾ ಹೊಸತಾಗಿರುವುದರಿಂದ, ಅವರು ಅದನ್ನು ಸರಿಯಾಗಿ ಅನುಸರಿಸಲು, ಹಿಂದೆ ಮುಂದೆ ನೋಡುತ್ತಾ, ಸ್ವಲ್ಪ ಹೆಚ್ಚು ಕಾಲಾವಕಾಶ ಬೇಕಾಗಬಹುದು. ಜನರಿಗೆ ಅಂತಿಮ ಹಾಗೂ ಇತರ ಉತ್ಪನ್ನಗಳನ್ನು ಹಂಚುವ ಸಮಯದಲ್ಲಿ ನಿಜವಾದ ಫಲಾನುಭವಿಗಳನ್ನು ಆರಿಸುವುದು ಅವರಿಗೆ ನಿಗದಿಪಡಿಸಿದ ಪ್ರಮಾಣವನ್ನು ಹಂಚುವಲ್ಲಿ ಎಡರುತೊಡರು ಉಂಟಾಗಬಹುದು. ಬಡತನ ರೇಖೆಯಿಂದ ಕೆಳಗಿರುವಂತಹ ಫಲಾನುಭವಿಗಳು ಸದಸ್ಯರಾಗಲು ತಿಳಿಯದೆ ತಿಳುವಳಿಕೆ ಇರದೆ, ಚಂದಾಹಣವನ್ನು ಸಹಾ ಕಟ್ಟಲು ತೋಚದೆ ಈ ಯೋಜನೆ ಕುಸಿಯಲೂಬಹುದು ಅಥವಾ ಇವರ ಪಾತ್ರವನ್ನು ಗ್ರಾಮದ ಮುಖ್ಯಸ್ಥರೇ ಅಥವಾ ಮುಂದಾಳುಗಳೇ ವಹಿಸಿಕೊಂಡು, ಫಲ ಯಾರಿಗೆ ದೊರಕಬೇಕೋ ಅವರಿಗೆ ಸಿಗದೆ ಹೋಗಲೂಬಹುದು. ಗ್ರಾಮಗಳಲ್ಲಿ ರಾಜಕೀಯವೆದ್ದು ಸದಸ್ಯರಾಗದವರು ಅರಣ್ಯ ಅಭಿವೃದ್ಧಿಗೆ ಧಕ್ಕೆತಂದು, ನೆಡುತೋಪುಗಳನ್ನು ತನ್ನುಸ್ವತ್ಕೆ ತಾವೇ ಕಳ್ಳತನದಲ್ಲಿ ಕಡಿದು, ಮಾರಿ ಲಾಭ ಪಡೆದುಕೊಳ್ಳುವ ಸಾಧ್ಯತೆಯೂ ಇದೆ. ಅವಿದ್ಯಾವಂತರೇ ಹೆಚ್ಚಿರುವ ಗ್ರಾಮಗಳಲ್ಲಿ ಈ ಕಾರ್ಯ ಯೋಜನೆ ಎಲ್ಲಾರಿಗೂ ಅನುಕೂಲವಾಗದಂತೆ ನಡೆದುಹೋಗಲೂಬಹುದು. ಗ್ರಾಮಗಳಿಗೆ ಮತ್ತು ಅರಣ್ಯ ಇಲಾಖೆಗಳಿಗೆ ಅತೀ ಸಣ್ಣ ಪ್ರಮಾಣದಲ್ಲಿ ಸರ್ಕಾರಿ ಧನ ಬರುತ್ತಿರುವುದರಿಂದ, ತಾವೆಲ್ಲಾ ಸೇರಿ ಹಾಕಿಕೊಂಡ ವಾರ್ಷಿಕ ಯೋಜನೆ ಯಾ ಪಂಚವಾರ್ಷಿಕ ಯೋಜನೆಗಳೆಲ್ಲಾ ಯಶಸ್ವಿಯಾಗಿ ಕೈಗೂಡಲು ಅಸಾಧ್ಯವಾಗಬಹುದು. ಜನಸಂಖ್ಯೆ ಮತ್ತು ಜಾನುವಾರುಗಳ ಸಂಖ್ಯೆ ಏರಿದಂತೆ, ಇರುವ ಜಮೀನು ಸಾಕಾಗದೆ ಯೋಜನೆಯೇ ಕೈಬಿಟ್ಟು ಹೋಗುವ ಸಂದರ್ಭ ಬರಬಹುದು. ಗ್ರಾಮಗಳ ಸುತ್ತ ಇರುವ ಸರ್ಕಾರಿ ಜಮೀನುಗಳಿಂದ ಅದೇ ಗ್ರಾಮದವರು ಮಾತ್ರ ಫಲ ಪಡೆಯಬಹುದೆಂದರೆ, ಪಕ್ಕದ ಗ್ರಾಮಗಳಲ್ಲಿ ಗೋಮಾಳ ಅಥವಾ ಅರಣ್ಯ ಯಾ ಸರ್ಕಾರಿ ಪ್ರದೇಶಗಳು ಇಂತಹ ಜಂಟಿ ಆಡಳಿತಕ್ಕೆ ಸಿಗದೇಹೋದರೆ, ಅಕ್ಕಪಕ್ಕದ ಹಳ್ಳಿಗಳಲ್ಲಿ ಜನರಿಗೆ ಮನಸ್ತಾಪ ಉಂಟಾಗಿ ಜಗಳಗಳಾಗಲೂಬಹುದು. ಅವನತಿ ಹೊಂದುತ್ತಿರುವ ಬರಡು ಪ್ರದೇಶಗಳು ಇಲ್ಲದ ಪಕ್ಷದಲ್ಲಿ ಈ ಯೋಜನೆಯನ್ನು ಆ ಗ್ರಾಮದಲ್ಲಿ ಕೈಗೊಳ್ಳಲು ಅನಾನುಕೂಲವಾಗಲೂಬಹುದು. ಅನೇಕ ಸರ್ಕಾರಿ ಪ್ರದೇಶಗಳು ಈಗಾಗಲೇ ಒತ್ತುವರಿಯಾಗುತ್ತಿರುವುದರಿಂದ ಇಂತಹ ಯೋಜನೆಗಳಿಗೆ ಜಮೀನುಗಳು ಸಿಗದೆ ಈ ಯೋಜನೆಗಳು ಯಶಸ್ವಿಯಾಗದೆ ಇರಲೂ ಸಾಧ್ಯವಿದೆ.

ಮುಕ್ತಾಯ :

ಅರಣ್ಯದಲ್ಲಿ ಈ ಜಂಟಿ ಆಡಳಿತ ಯೋಜನೆ ಕಾರ್ಯಕ್ರಮ ಆರಂಭವಾಗಿ ಸುಮಾರು ೫-೬ ವರ್ಷಗಳಾಗಿರಬಹುದು. ಅದು ನಡೆದು ಬಂದ ಹಾದಿ, ಫಲಾನುಭವಿಗಳಿಗೆ ಸಿಕ್ಕಿದ

ಲಾಭ, ಜನರ ಅಭಿಪ್ರಾಯ ಮುಂತಾದವುಗಳನ್ನು ಇನ್ನೂ ಕೂಲಂಕಷವಾಗಿ ತುಲನೆ ಮಾಡಲಾಗಿಲ್ಲ. ಮೊತ್ತಮೊದಲನೆಯದಾಗಿ ಆರಂಭವಾದ ಈ ಜಂಟಿ ಆಡಳಿತ, ಪೂರ್ವ ಬಂಗಾಳದ ಅರಭಾರಿಯೆಂಬ ಹಳ್ಳಿಯಲ್ಲಿ ಸುಮಾರು ೧೯೭೭ರಿಂದಲೂ ನಡೆದು ಬಂದು ಯಶಸ್ವಿಯಾಗಿ ಕಂಡುಬಂದರೂ ಅಕ್ಕ ಪಕ್ಕದ ಹಳ್ಳಿ, ಊರು, ರಾಜ್ಯಗಳಲ್ಲಿ ಇದು ಇನ್ನೂ ಹಬ್ಬಿಲ್ಲ ಇದರಿಂದ ಈ ಕಾರ್ಯ ಯೋಜನೆಯಲ್ಲಿ ಅನೇಕರಿಗೆ ಅರಣ್ಯ ಇಲಾಖೆಯ ಮೇಲೆ ಸಂಶಯ ಉಂಟಾಗಿದೆ. ಇದೊಂದು ಹೊಸ ರೀತಿಯ ಪ್ರಯೋಗವಾಗಿರುವುದರಿಂದ, ಇದರ ಯಶಸ್ವಿ ಇನ್ನೂ ಸ್ವಲ್ಪ ಕಾಲಾವಕಾಶವಾಗಬಹುದು ಆದರೂ ಸರ್ಕಾರೇತರ ಸಂಸ್ಥೆ, ನಿಷ್ಠೆಯಿಂ ಕೆಲಸ ಮಾಡುವ, ಎಲ್ಲಾ ತಿಳಿದ ಅರಣ ಅಧಿಕಾರಿ ಮತ್ತು ಇತರ ಸದಸ್ಯರಿಂದ ಉತ್ತಮ ಕಾರ್ಯಕ್ರಮ ಯಶಸ್ವಿಯಾ ಬಹುದೆಂದು ಆಶಿಸೋಣ.

(ಡಾ॥ ಕೆ. ಎ. ಕುಶಾಲಪ್ಪನವರು ಈ ಭಾರತೀಯ ಪ್ಲೈವುಡ್ ಸಂಶೋಧನೆ ಹಾಗ ತರಬೇತಿ ಇನ್‌ಸ್ಟಿಟ್ಯೂಟಿನ ನಿರ್ದೇಶಕ ಬೆಂಗಳೂರಿನಲ್ಲಿದ್ದಾರೆ.)



ಪರರನ್ನು ಮುಸುಕಿರುವ ಕತ್ತಲೆಯನ್ನು ಪರಿಹರಿಸಲು ಹೋಗುವ ಮುನ್ನ, ನಿನ್ನ ಕಾಲಿನ ಬುಡಕ್ಕಿರುವ ಕತ್ತಲೆಯನ್ನು ಪರಿಹರಿಸಲು ದೀಪ ನಿನ್ನ ಬಳಿಯಿದೆಯೋ ಇಲ್ಲವೋ ನೋಡಿಕೊ. ಇಲ್ಲದಿದ್ದರೆ ನೀನೂ ಆ ಕತ್ತಲೆಯಲ್ಲಿ ಸಿಕ್ಕಿ ಪೇಚಾಡಬೇಕಾದೀತು.

—ಮಹಾವೀರ

...ನೂ ಇಲ್ಲ : ಈ ಕುಟುಂಬ ಮಾಡದೆ ಇರುವುದು!

ಎಂ. ಶಂಕರನಾರಾಯಣಭಟ್

...ಂದು ದಿನ ನಾನು ಶಾಲೆಯಿಂದ ಮನೆಗೆ ...ಂದು ಬಡಾಯಿ ಕೊಚ್ಚಿಕೊಂಡೆ. "ಅಪ್ಪಾ! ...ನಗೆ 'ಎ' ಗ್ರೇಡ್ ಸಿಕ್ಕಿದೆ."

"ಶುಕಿ, ಇದು ಒಳ್ಳೆಯ ಸುದ್ದಿ" ಎಂದರು ...ಮ್ಮಪ್ಪ ನನ್ನ ಅಡ್ಡ ಹೆಸರಿನಿಂದ.

"ಇಷ್ಟೇನಾ ಅಪ್ಪ ನಿಮ್ಮ ಮೆಚ್ಚುಗೆ?"

"ಹೌದು, ಎ+ ಗ್ರೇಡ್ ಇದೆಯಲ್ಲ!"

ಇನ್ನೊಂದು ಸಾರಿ ನಾನು ಎ+ ನೊಂದಿಗೆ ...ನೆಗೆ ಬಂದಾಗ ಅಪ್ಪ ಹೇಳಿದ್ದು.

"ಬಹಳ ಒಳ್ಳೆಯದು ಮಗಳೇ, ಎ++ ...ಳಿಸು!" ಅವರು ಕಠೋರಿಗಳಾಗಿರಲಿಲ್ಲ. ...ದರೆ ಕಪ್ಪು ಮಕ್ಕಳಾದುದರಿಂದ ನಾನು ...ತ್ತು ನನ್ನ ಸೋದರಿಯರು ಬಹಳ ...ಪ್ರಯತ್ನ ಪಡಬೇಕು ಎನ್ನುವುದು ಅವರಿಗೆ ...ಳಿದಿತ್ತು. ಶ್ರದ್ಧೆಯಿಂದ ಕೆಲಸ ಮಾಡಿ...ರೆ ಏನನ್ನೂ ಸಾಧಿಸಬಹುದು ಎನ್ನುವುದು ...ವರ ನಂಬಿಕೆ.

ಐದು ಜನ ಪುತ್ರಿಯರಿಗೆ ಅಪ್ಪ ತರಬೇತು...ಾರನಂತೆ ಇದ್ದರು. ನಮ್ಮನ್ನು ಹುರಿ...ದುಂಬಿಸಿ, ಶಿಕ್ಷಿಸಿ, ಬಹುಮಾನಕೊಟ್ಟು, ...ಕಿಲ್ಲಗೆ ಬೆನ್ನು ತಟ್ಟಿ ಮತ್ತೆ ಮುಂದೆ ನೂಕುತ್ತಿದ್ದರು, ಆದರೆ ಜೀವನದಲ್ಲಿ ನಮ್ಮ ಅಂತಿಮ ಉದ್ದೇಶವೇನು ಎನ್ನುವುದನ್ನು ಎಂದೂ ಮರೆಯಲು ಅವರು ಬಿಡುತ್ತಿರಲಿಲ್ಲ. ತನ್ನ ಐವರೂ ಪುತ್ರಿಯರೂ ವೈದ್ಯರಾಗಬೇಕೆಂಬುದು ಅವರ ಅನುಭವ ಕಲ್ಪನೆ. ಅಪ್ಪ ಕಾರ್ಮಿಕನಾಗಿಯೂ ಅಮ್ಮ ಇತರರ ಮನೆಗಳಲ್ಲಿ ಸಹಾಯಕಿಯಾಗಿಯೂ ಕೆಲಸ ಮಾಡುತ್ತಿದ್ದರು. ಇದು ೧೯೫೦ರ ಅಮೆರಿಕವಾದುದರಿಂದ ಅವರ ಕನಸು ನನಸಾಗಲು ಬಹಳ ಅಡೆತಡೆಗಳಿದ್ದವು. ಅಪ್ಪ ಮಣ್ಣು ಅಗೆಯುವ ಕೆಲಸಗಾರ. ಅವರಿಗೆ ಪುತ್ರಿಯರೇ ಇದ್ದರೂ ಅಮ್ಮನನ್ನು ಆ ಕಾರಣಕ್ಕಾಗಿ ನಿರಾಕರಿಸಲಿಲ್ಲ. ಮಗ ಬೇಕೆಂಬ ಆಸೆ ಇದ್ದರೂ ಅವರು ಕುಟುಂಬ ಬಿಟ್ಟು ಹೋಗಲಿಲ್ಲ. ಉಳಿದ ಕಾರ್ಮಿಕರು ಮಗನಿಲ್ಲದಿದ್ದುದರ ಬಗ್ಗೆ ಹಂಗಿಸಿದಾಗ ಅವರು ಅಂದಿದ್ದು, "ನನ್ನ ಪುಟ್ಟ ಹುಡುಗಿಯರು ವೈದ್ಯರಾದಾಗ ನೀವು ನಗಲಾರಿರಿ." ಹದಿನೈದು ವರ್ಷಕ್ಕೆ ನಾವು ಐವರೂ ಇತರರಂತೆ ಹಡೆಯುವ ಯಂತ್ರಗಳಾಗುವೆವು ಎಂದು ಉಳಿದವರ ಅಭಿಪ್ರಾಯವಾಗಿತ್ತು.

೧೯೯೫ರ ನವೆಂಬರ್ ತಿಂಗಳಿನ "ರೀಡರ್ಸ್ ಡೈಜೆಸ್ಟ್" ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಇವಾನ್ ಥಾರ್ನ್‌ಟನ್ ಅವರ "ನತಿಂಗ್ ದಿಸ್ ಫ್ಯಾಮಿಲಿ ಕೆನಾಟ್ ಡು" ಲೇಖನದ ...ನುವಾದ.

"ಯಾವುದೋ ಕಾರಣಕ್ಕಾಗಿ ದೇವರು ನನಗೆ ಎಲ್ಲಾ ಮಗಳಂದಿರನ್ನೇ ಕೊಟ್ಟಿದ್ದಾನೆ. ಅವರನ್ನು ಏನು ಮಾಡಬಹುದು ಎಂದು ನನಗೆ ಯಾಕೆ ತಿಳಿಯುತ್ತಿಲ್ಲ?" ಎನ್ನುತ್ತಿದ್ದರು ನಮ್ಮಪ್ಪ. ಡಾಕ್ಟರ್ ಪದವಿ ಹೇಗೆ ದೊರೆಯುತ್ತದೆ ಎನ್ನುವುದು ಅವರಿಗೆ ತಿಳಿದಿರಲಿಲ್ಲ. ಆದರೆ ಹುಡುಗಿಯರೆಲ್ಲರೂ ಶಾಲೆಯಲ್ಲಿ ಚೆನ್ನಾಗಿ ಓದುವುದು ಮೊದಲಿನ ಹೆಜ್ಜೆ ಎನ್ನುವುದು ಅವರಿಗೆ ಗೊತ್ತಿತ್ತು. ಅವರು ತಮಗೆ ಹದಿನಾಲ್ಕು ವರ್ಷಗಳಾದಾಗ ಶಾಲೆಯಿಂದ ಹೊರಬಿದ್ದಿದ್ದರು. ಈ ತಪ್ಪನ್ನು ತಮ್ಮ ಹುಡುಗಿಯರು ಮಾಡಬಾರದೆನ್ನುವುದು ಅವರ ನಿರ್ಧಾರವಾಗಿತ್ತು.

೧೯೩೦ ಆರ್ಥಿಕ ಸಂಕಷ್ಟದ ದಿನಗಳಾಗಿದ್ದುವು. ಶಾಲೆ ಬಿಡಬೇಕಾಗಿ ಬಂದಾಗ ಅವರು ಅಪಮಾನಿತರಾಗಿದ್ದರು. ಸಮುದ್ರ ತೀರವೊಂದನ್ನು ಬಂಡೆ ಕಟ್ಟಿ ರಕ್ಷಿಸುವ ಕೆಲಸ ಅವರಿಗೆ ಸಿಕ್ಕಿತು. ಪ್ರತಿ ಸಂಬಳದ ದಿನ ಅವರು ನ್ಯೂಯಾರ್ಕಿನ ಕರಿಯರ ಪ್ರದೇಶವಾದ ಹಾರ್ಲೆಮ್‌ಗೆ ಹೋಗಿ ಅಲ್ಲಿಯ ಜನರು ಮತ್ತು ಸಂಗೀತದಲ್ಲಿ ಖುಷಿಪಡುತ್ತಿದ್ದರು. ಸ್ವಲ್ಪ ಸಮಯದಲ್ಲೇ ಹಾರ್ಲೆಮ್‌ನ ದೊಡ್ಡ ಹೋಟೆಲೊಂದರಲ್ಲಿ ಪೋರ್ಟರ್ ಕೆಲಸ ಸಿಕ್ಕಿತು. ಈ ಆಧಾರದಿಂದ ಅವರು ರಾತ್ರಿ ತಮ್ಮ ಎರಡು ಮೆಚ್ಚಿನ ಆಸಕ್ತಿಗಳಾದ ಜ್ಯಾಸ್ ಸಂಗೀತ ಮತ್ತು ಕುಣಿತಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ನರ್ತನಕೂಟವೊಂದರಲ್ಲೇ ಅಮ್ಮನನ್ನು ಅವರು ಸಂಧಿಸಿದ್ದು. ಆ ಭವ್ಯ ಹೋಟಿಲಿನಲ್ಲಿ ಅಮ್ಮ ಪರಿಚಾರಿಕೆಯಾಗಿ ಕೆಲಸ ಮಾಡುತ್ತಿದ್ದಳು. ಎಲ್ಲರೂ ಅವಳನ್ನು "ಟಾಸ್" ಎಂದು ಕರೆಯುತ್ತಿದ್ದರು. ೧೯೪೩ ಸೆಪ್ಟೆಂಬರ್‌ನಲ್ಲಿ ಸೈನ್ಯಕ್ಕೆ ಸೇರಬೇಕೆಂದು ಅಪ್ಪನಿಗೆ ಆದೇಶ ಬಂತು. ಸೆಪ್ಟೆಂಬರ್ ೨೯ರಂದು ಅವರು ಮತ್ತು ಅಮ್ಮ ಒಂದು ಅಗ್ಗದ ಉಂಗುರ ಕೊಂಡುಕೊಂಡರು. ಪುಟ್ಟ ಇಗರ್ಜಿಗೆ ಹೋಗಿ ಮದುವೆಯಾದರು. ಮರು ದಿನ ಅಪ್ಪ ಬಸ್ ಹತ್ತಿ ಕರ್ತವ್ಯಕ್ಕೆ ರಾಜರಾದರು.

ನನ್ನ ದೊಡ್ಡಕ್ಕ ಡೋನಾ ೧೯೪೪ರಲ್ಲಿ ಹುಟ್ಟಿದಾಗ ಅಪ್ಪ ದಕ್ಷಿಣ ಪೆಸಿಫಿಕ್‌ನಲ್ಲಿ ಇದ್ದರು. ಅದೇ ವರ್ಷ ಸೈನ್ಯದಿಂದ ಹೊರಬಿದ್ದರು. ೧೯೪೫ರಲ್ಲಿ ಜೀನೆಟ್ ಹುಟ್ಟಿದಳು. ೧೯೪೭ರಲ್ಲಿ ಅಮ್ಮ ಪುನಃ ಬಸರಿಯಾದಳು. ಆ ಮಗು ನಾನಾಗಿದ್ದೆ— ಮೂರನೇ ಮಗಳು ಇವಾನ್. ನನ್ನ ಕೆನ್ನೆಯಲ್ಲಿ ಕುಕಿ ಗಾತ್ರದ (ಬಿಸ್ಕಿಟ್ ಗಾತ್ರದ) ಕಪ್ಪು ಚುಕ್ಕೆ ಇದ್ದ ಕಾರಣ ನನಗೆ ಕುಕಿ ಎಂದು ಅಡ್ಡ ಹೆಸರಿಟ್ಟರು. ಲಿಂಡಾ ಮತ್ತು ರೀಟಾ ನನ್ನ ತಂಗಿಯರು.

ಅಪ್ಪ ಕುಟುಂಬಕ್ಕೆ ಮೊದಲ ಆದ್ಯತೆ ಕೊಡುತ್ತಿದ್ದರು. ಅವರು ಇದ್ದ ಪರಿಸ್ಥಿತಿಯಲ್ಲಿ ದುರ್ಬಲ ವ್ಯಕ್ತಿಯಾಗಿದ್ದರೆ ಎದೆಗುಂದಿ ಖಂಡಿತಾ ಸೋಲುತ್ತಿದ್ದ. ಡೋನಾಳಿಗೆ ಐದು, ಜೀನೆಟ್‌ಳಿಗೆ ನಾಲ್ಕು ಮತ್ತು ನನಗೆ ಮೂರು ವರ್ಷಗಳಾಗಿದ್ದಾಗ ಡೋನಾಗೆ ಸಮವಯಸ್ಸಿನ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರ ನಡೆಯಿತು. ಇದನ್ನು ನೋಡಿ, ತಮ್ಮ ಮಕ್ಕಳು ಆ ಸ್ಥಳ ಬಿಟ್ಟು ನಾವು "ಲಾಂಗ್ ಬ್ರಾಂಚ್"ಗೆ ಬಂದೆವು. ಮಣ್ಣು ಅಗೆಯುವ ಕೆಲಸದೊಂದಿಗೆ ಇತರ ಚಿಕ್ಕಪುಟ್ಟ ಕೆಲಸಗಳನ್ನೂ

ಅಪ್ಪ ಮಾಡುತ್ತಿದ್ದರು. ತಾವೇ ಅಂಗಡಿಗೆ ಹೋಗಿ ಹಿಂದಿನ ದಿನದ, ಹಳೆಯದಾದ ಅಗ್ಗದ ಬ್ರೆಡ್, ಮಾಂಸಗಳನ್ನು ತರುತ್ತಿದ್ದರು. ಅವುಗಳ ಮೇಲಿನ ತೆಳ್ಳನೆಯ ಹಸಿರು ಬಣ್ಣವನ್ನು ಕತ್ತರಿಸಿ ತೆಗೆದಾಗ, ರೋಗ ನಿರೋಧಕ ಔಷಧಿಯಾದ ಪೆನ್ಸಿಲಿನ್ ನಿಂದ ಮಕ್ಕಳನ್ನು ವಂಚಿತರನ್ನಾಗಿ ಮಾಡುತ್ತಿದ್ದೇನೆ ಎಂದು ಹಾಸ್ಯ ಚಟಾಕಿ ಹಾರಿಸುತ್ತಿದ್ದರು. ಮಕ್ಕಳ ಪೋಷಣೆಗಾಗಿ ಅವರು ಪಟ್ಟಪಾಡು ಅಷ್ಟಿಷ್ಟಲ್ಲ.

ಪ್ರತಿಕೂಲ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಲು ನಮಗೆ ಅವರು ಬಹಳ ಸಹಾಯ ಮಾಡಿದರು. ಮನೆ ನಿವೇಶನವನ್ನು ಖರೀದಿಸಿ ಸ್ವತಃ ಮನೆ ಕಟ್ಟಲು ಆರಂಭಿಸಿದರು. ಅಮ್ಮ ಅವರಿಗೆ ಸಹಾಯಕಿಯಾಗಿ ಕೆಲಸ ಮಾಡಿದಳು. ಅವರ ಶ್ರಮಜೀವನವನ್ನು ಮೆಚ್ಚಿದ ಅಂಗಡಿಗಾರ ಇಟ್ಟಿಗೆ, ಸಿಮೆಂಟ್ ಮೊದಲಾದ ಸಾಮಗ್ರಿಗಳನ್ನು ಸಾಲ ರೂಪದಲ್ಲಿ ಕೊಟ್ಟ. ನಾಲ್ಕು ವರ್ಷಗಳಲ್ಲಿ ನಾವು ನಮ್ಮ ಸ್ವಂತ ಮನೆಗೆ ಬಂದೆವು. ಇಪ್ಪತ್ತೈದು ಡಾಲರ್‌ಗಳನ್ನು ಐದು ಕಂತಿನಲ್ಲಿ ಕೊಟ್ಟು, ಅಪ್ಪ ಒಂದು ಹಳೆಯ ಸ್ಯಾಕ್ಸೋಫೋನ್ ಕೊಂಡುಕೊಂಡರು. ಸ್ಯಾಕ್ಸೋಫೋನನ್ನು ನುಡಿಸಲು ಡೋನಾಳಿಗೆ ಶಿಕ್ಷಣ ಪಡೆದು ಡಾಕ್ಟರ್ ಆದ ಮಹಿಳೆ ನಿರಕ್ಷರಕುಕ್ಷಿಗಿಂತ ಜೀವನದಲ್ಲಿ ಹೆಚ್ಚು ಗೌರವ ಪಡೆಯುತ್ತಾಳೆ. ಎನ್ನುವುದು ಅಪ್ಪನಿಗೆ ಗೊತ್ತಿತ್ತು. ನಮ್ಮ ತಲೆಯೊಳಗಿರುವ ಬುದ್ಧಿಶಕ್ತಿಯನ್ನು ಯಾರೂ ಎಂದಿಗೂ ತೆಗೆದುಕೊಳ್ಳಲಾರರು ಎನ್ನುತ್ತಿದ್ದರು. ತಮ್ಮ ಐವರು ಪುತ್ರಿಯರೂ ಒಟ್ಟಾಗಿದ್ದರೆ ಏನನ್ನೂ ಸಾಧಿಸಬಹುದು ಎಂಬುದು ಅವರ ಖಚಿತ ಅಭಿಪ್ರಾಯ ಡೋನಾ, ಜೀನೆಟ್ ಮತ್ತು ನಾನು ಒಟ್ಟಿಗೆ ಸ್ಯಾಕ್ಸೋಫೋನ್ ನುಡಿಸುತ್ತಿದ್ದೆವು. ನಮ್ಮ ಕಾಲಿನ ಮೇಲೆ ನಾವು ನಿಲ್ಲಲು ಅಪ್ಪ ನಮಗೆ ತರಬೇತು ಕೊಟ್ಟರು.

೧೯೯೧ ರಲ್ಲಿ ನಮ್ಮ ಅಜ್ಜ ತೀರಿಕೊಂಡರು. ಅವರಿಗೆ ಬೆಟ್ಟಿ ಎಂಬ ಸಾಕು ಮಗಳಿದ್ದಳು. ಅಜ್ಜ ತೀರಿಕೊಂಡ ಮೇಲೆ ಅಪ್ಪ ಬೆಟ್ಟಿಯನ್ನು ಮನೆಗೆ ಕರೆದುಕೊಂಡು ಬಂದು ವಿದ್ಯಾಭ್ಯಾಸ ಕೊಡಿಸಿದರು. ನನಗೆ ಐದಲ್ಲ, ಆರು ಜನ ಮಗಳಂದಿರು ಎನ್ನುತಿದ್ದುದಲ್ಲದೆ, ಮಗಳಂತೆಯೇ ಅವಳನ್ನು ನೋಡಿಕೊಂಡರು. ಈ ಮಧ್ಯೆ ನಮ್ಮ ಸಂಗೀತಾಭ್ಯಾಸ ಪ್ರತಿಫಲ ಕೊಡಲಾರಂಭಿಸಿತು. ಉಪಾಧ್ಯಾಯರ ಹಾಗೂ ಹೆತ್ತವರ ಸಂಘದ ಸಭೆಯೊಂದರಲ್ಲಿ ಬಿಳಿಯ ಸಭಿಕರ ಮುಂದೆ ನಾವು ನಾಲ್ಕು ಕಪ್ಪು ಸೋದರಿಯರ ಸಂಗೀತ ಕಾರ್ಯಕ್ರಮವನ್ನು ನಡೆಸಲು ಅಪ್ಪ ಪ್ರೇರೇಪಿಸಿದರು. ಈ ಕಾರ್ಯಕ್ರಮ ಚೆನ್ನಾಗಿ ನಡೆಯಿತು. ಇದೇ ಸಂಘ ನಿಧಿ ಸಂಗ್ರಹಿಸಲು ನೃತ್ಯಕಾರ್ಯಕ್ರಮವನ್ನು ಹಮ್ಮಿಕೊಂಡಾಗ ನಮ್ಮನ್ನು ಆಮಂತ್ರಿಸಲಾಯಿತು. ಈ ಸಂಗೀತ ಕಾರ್ಯಕ್ರಮಗಳಿಂದ ಹಣ ಸಂಪಾದನೆಯಾದರೂ ಅದಕ್ಕಿಂತ ಹೆಚ್ಚು ಹಣ ನಮ್ಮಿಂದ ಖರ್ಚಾಯಿತು. ಆದ್ದರಿಂದ ಅಪ್ಪ ಹೆಚ್ಚು ದುಡಿಯಬೇಕಾಗಿ ಬಂತು. ಮಧ್ಯ ರಾತ್ರಿಯಿಂದ ಬೆಳಗ್ಗೆ ಎಂಟರವರೆಗೆ ಒಂದು ಕಡೆ, ಮತ್ತು ಹಗಲು ಹೊತ್ತು ಇನ್ನೊಂದು ಕಡೆ ಕೆಲಸ ಮಾಡಿ ನಮ್ಮನ್ನು ಮುಂದೂಡುತ್ತಿದ್ದರು.

ಟಿ. ವಿ.ಯಲ್ಲಿ ನಾವು ಆಂದರೆ ಥಾರ್ನ್‌ಟನ್ ಸೋದರಿಯರು ಸಂಗೀತ ಕಾರ್ಯ

ಕ್ರಮ ನಡೆಸಿಕೊಟ್ಟೆವು. ತತ್‌ಕ್ಷಣವೇ ನಮಗೆ ಕೀರ್ತಿ ಬರದಿದ್ದರೂ ಹೊಸ ಹೆಸರನ್ನು ಗಳಿಸಿಕೊಂಡೆವು. ಕರಿಜನರ ಮೆಕ್ಕಾ ಎಂದು ಪ್ರಸಿದ್ಧವಾದ ಹಾರ್ಲೆಮ್‌ನ ಅಪೊಲೋ ಥಿಯೇಟರ್‌ನಲ್ಲಿ ನಮ್ಮ ಕಾರ್ಯಕ್ರಮ ಯಶಸ್ವಿಯಾಯಿತು. ನಮಗೆ ಬಹುಮಾನ ಮತ್ತು ಹೆಸರು ಎರಡೂ ಬಂದುವು. ಪ್ರತಿಯೊಬ್ಬ ಸದಸ್ಯೆಗೂ ಇಪ್ಪತ್ತೈದು ಡಾಲರ್ ಬಹುಮಾನ ದೊರೆಯಿತು.

ಸ್ತ್ರೀಯರು ಏನನ್ನೂ ಸಾಧಿಸಬಹುದು ಎಂದು ಅಪ್ಪ ನಮಗೆ ಆಗಾಗ ಹೇಳುತ್ತಿದ್ದರು. ಹೆಚ್ಚಿನ ಜನರು ಸದಾಕಾಲ ನಮ್ಮನ್ನು ಕೆಳಗಿಳಿಸುವ ಪ್ರಯತ್ನ ಮಾಡುತ್ತಾರೆಂದೂ, ನಾವು ಅದನ್ನು ಹತ್ತಿಕ್ಕಿ ಮುಂದುವರಿಯುತ್ತಿರಬೇಕೆಂದೂ ಹೇಳುತ್ತಿದ್ದರು.

ಈ ಮಧ್ಯೆ ನಾನು ಡಾಕ್ಟರ್ ಆಗಬೇಕೆಂದು ಕಷ್ಟಪಟ್ಟು ಓದುತ್ತಿದ್ದೆ. ಜೀವಶಾಸ್ತ್ರವನ್ನು ಇಷ್ಟಪಡುತ್ತೇನೆ ಮತ್ತು ಪ್ರಸೂತಿ ವೈದ್ಯ ಆಗಬೇಕೆಂಬ ಆಸೆ ನನಗಿದೆ ಎಂದಾಗ ನಮ್ಮ ಜೀವಶಾಸ್ತ್ರದ ಉಪಾಧ್ಯಾಯ ರೋಲೋಗಾಲ್‌ಬ್ರೈತ್ ಅವರಿಗೆ ಆಶ್ಚರ್ಯವಾಯಿತು. ಕೆಲವು ದಿನಗಳ ಬಳಿಕ ಆ ಬಿಳಿಯ ಉಪಾಧ್ಯಾಯರು ಕಾರಿನಲ್ಲಿ ನಮ್ಮ ಮನೆಗೆ ಬಂದು, ಪ್ರಸೂತಿ ಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಪಠ್ಯ ಪುಸ್ತಕಗಳನ್ನು ಕೊಟ್ಟರು. ಆ ಬಿಳಿ ವ್ಯಕ್ತಿ, ಕಪ್ಪು ಹುಡುಗಿಯಾದ ನನ್ನ ಸಾಮರ್ಥ್ಯದ ಬಗ್ಗೆ ವ್ಯಕ್ತಪಡಿಸಿದ ವಿಶ್ವಾಸಕ್ಕೆ ನನ್ನ ಹೃದಯ ತುಂಬಿ ಬಂದಿತು. ನಾನು ಖಂಡಿತಾ ಡಾಕ್ಟರ್ ಆಗುತ್ತೇನೆ ಎಂಬುದರ ಬಗ್ಗೆ ಯಾವ ಅನುಮಾನವೂ ಉಳಿಯಲಿಲ್ಲ.

ನ್ಯೂಯಾರ್ಕ್‌ನಲ್ಲಿ ದಿನಕ್ಕೆ ನಾಲ್ಕು ನೃತ್ಯ ಪ್ರದರ್ಶನಗಳನ್ನು ಕೊಟ್ಟು ನಾವು ವಾರಕ್ಕೆ ಐನೂರು ಡಾಲರ್ ಹಣ ಸಂಪಾದಿಸಿದೆವು. ಆದರೆ ಅಪ್ಪನ ಪ್ರಕಾರ ಈ ಹಣವೆಲ್ಲಾ ನಮ್ಮ ಬಟ್ಟೆಗಳ ಮೇಲೆ ಖರ್ಚಾದುದರಿಂದ ನಮಗೆ ಹೋಟೆಲಿಗೆ ಹೋಗಿ ತೃಪ್ತಿಯಾಗುವಂತೆ ತಿನ್ನಲಾಗಲಿಲ್ಲ. ಇದರ ಬದಲಾಗಿ ನಮ್ಮ ಕೋಣೆಗೆ ಸ್ಯಾಂಡ್‌ವಿಚಸ್‌ಗಳನ್ನು ತರಿಸಿ ತಿಂದೆವು. ಆದರೆ ನಾವು ಡಾಕ್ಟರ್ ಆಗಬೇಕೆಂಬ ಕನಸನ್ನು ಅಪ್ಪ ಎಂದೂ ಮರೆಯಲಿಲ್ಲ. ಸ್ವಲ್ಪ ಸಮಯದಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಕ್ಲಬ್ ಒಂದರ ಅಧ್ಯಕ್ಷರು ಫೆಬ್ರವರಿ ತಿಂಗಳ ಒಂದು ಶನಿವಾರ ನೃತ್ಯ ಪ್ರದರ್ಶನ ಕೊಡಲು ನಮ್ಮನ್ನು ಆಹ್ವಾನಿಸಿದರು. ನಾವು ಬಹುದೊಡ್ಡ ತಾರೆಗಳೆಂದು ಪರಿಗಣಿಸಿದ ಅವರು ಒಂದು ಪ್ರದರ್ಶನಕ್ಕೆ ನೂರಾ ಎಪ್ಪತ್ತೈದು ಡಾಲರ್‌ಗಿಂತ ಹೆಚ್ಚು ಕೊಡಲು ಕಷ್ಟವಾಗಬಹುದು ಎಂದರು. ನಾವು ಆಗ ಒಂದು ಪ್ರದರ್ಶನಕ್ಕೆ ನಲ್ವತ್ತು ಡಾಲರ್ ಪಡೆಯುತ್ತಿದ್ದವರು. ಅಪ್ಪನಿಗೆ ಬಹಳ ಸಂತೋಷವಾಯಿತು. ನಾವು ಸಂಪಾದನೆ ಮಾಡುತ್ತಾ ಶಿಕ್ಷಣ ಪಡೆಯಬಹುದು ಎಂಬ ವಿಶ್ವಾಸ ಅಪ್ಪನಿಗೆ ಬಂತು. ೧೯೬೩ ರಲ್ಲಿ ನಾವು ನಡೆಸಿದ ಪ್ರದರ್ಶನ ನಮಗೆ ಜನಪ್ರಿಯತೆಯನ್ನು ತಂದುಕೊಟ್ಟಿತು. ವಾರದುದ್ದಕ್ಕೂ ಅಭ್ಯಾಸ ಮತ್ತು ವಾರದ ಕೊನೆ ಹಾಗೂ ರಜಾದಿನಗಳಲ್ಲಿ ನೃತ್ಯ ಪ್ರದರ್ಶನ ಈ ರೀತಿ ನಮ್ಮ ದಿನಗಳು ಬಿಡುವಿಲ್ಲದೆ ಕಳೆದುವು. ಅಮ್ಮ ಹೊಲಿದು ಕೊಟ್ಟ ನವೀನ ಮಾದರಿಯ ಉಡುಪುಗಳಿಂದಾಗಿ ನಾವು ಪ್ರದರ್ಶನಗಳಲ್ಲಿ

ಆಕರ್ಷಕವಾಗಿ ಕಾಣಿಸಿಕೊಂಡೆವು. ಆದರೆ ಈ ಕೂಟಗಳಲ್ಲಿ ಹುಡುಗರು ನಮ್ಮೊಂದಿಗೆ ಸಲಿಗೆಯಿಂದ ವರ್ತಿಸದಂತೆ ಅಪ್ಪ ನಮಗೆ ಸರ್ಪಗಾವಲಾಗಿದ್ದರು. ನಮ್ಮ ಉದ್ದೇಶ ದ್ರವ್ಯಾರ್ಜನೆ ಮತ್ತು ವಿದ್ಯಾರ್ಜನೆ ಮಾತ್ರ, ಎಂದೂ ಮಿತ್ರಾರ್ಜನೆ ಅಲ್ಲ ಎಂದು ಅವರು ಒತ್ತಿ ಹೇಳುತ್ತಿದ್ದರು.

ಆದರೆ ಅಪ್ಪನ ಕಟ್ಟುಪಾಡುಗಳಿಂದ ಡೋನಾ ಮತ್ತು ಜೀನೆಟ್ ಚಡಪಡಿಸಿದರು. ಅವರ ವಯಸ್ಸಿನ ಹುಡುಗಿಯರಂತೆ ಅವರಿಗೆ ಸ್ವಾತಂತ್ರ್ಯದ ಆಸೆ ಇದೆ ಎಂದು ಅಪ್ಪನಿಗೆ ಅಮ್ಮ ತಿಳಿಸಿದರೂ ಅಪ್ಪ ತನ್ನ ಮನೆಯ ನಿಯಮಗಳನ್ನು ಎಲ್ಲ ಸದಸ್ಯರೂ ಪಾಲಿಸತಕ್ಕದ್ದು ಎಂದು ಆದೇಶಿಸಿದರು.

ಇತರ ಕಡೆ ಪ್ರವೇಶ ಪಡೆಯಲು ಕೊನೆಯ ದಿನ ಮುಗಿದುದಾಗಿಯೂ ಆದ ಕಾರಣ ತಾವು ವಾಷಿಂಗ್‌ಟನ್‌ನ ಹೋವರ್ಡ್ ವಿಶ್ವವಿದ್ಯಾಲಯವನ್ನು ಸೇರುವುದಾಗಿಯೂ ಡೋನಾ ಮತ್ತು ಜೀನೆಟ್ ನಿರ್ಧರಿಸಿದರು. ಅಲ್ಲಿಯ ಸ್ವತಂತ್ರ ವಾತಾವರಣದಲ್ಲಿ ಹುಡುಗರೊಂದಿಗೆ ನಕ್ಕು ನಲಿದು ಮಾತನಾಡುವ ದೃಶ್ಯವನ್ನು ಅವರು ಕಲ್ಪಿಸಿಕೊಳ್ಳುತ್ತಿದ್ದರು. ಆದರೆ ಅಪ್ಪ ಸಮೀಪದ ಮಾನ್‌ಮೌತ್ ಕಾಲೇಜಿನ ಕಾರ್ಯದರ್ಶಿಯವರನ್ನು ಭೇಟಿಯಾಗಿ ಅಕ್ಕಂದಿರಿಗೆ ಪ್ರವೇಶ ದೊರಕಿಸಿಕೊಟ್ಟರು. ಈ ವಿಷಯ ತಿಳಿದು ಡೋನಾ, ಜೀನೆಟ್ ಅತ್ತು ರಂಪ ಮಾಡಿದರು.

ಡೋನಾ ಮತ್ತು ಜೀನೆಟ್ ಕಾಲೇಜು ಜೀವನ ಆರಂಭಿಸಿದಾಗ ಲಿಂಡಾ, ರೀಟಾ ಮತ್ತು ನಾನು ಶಾಲೆಯಲ್ಲಿ ಓದುತ್ತಿದ್ದೆವು. ಯಶಸ್ಸಿಗೆ ಸತತ ಪರಿಶ್ರಮದ ಹೊರತು ಬೇರೆ ದಾರಿ ಇಲ್ಲ ಎಂದು ಅಪ್ಪ ಹೇಳುತ್ತಿದ್ದರು. ತನ್ನ ಐವರು ಮಗಳಿಂದಿರೂ ಡಾಕ್ಟರ್ ಆಗಬೇಕೆಂಬುದು ಅಪ್ಪನ ಆಸೆ ಆಗಿತ್ತು. ಆದರೆ ಡೋನಾ ತನಗೆ ಡಾಕ್ಟರ್ ಆಗುವ ಸಾಮರ್ಥ್ಯವಿಲ್ಲವೆಂದು ಅಪ್ಪನಿಗೆ ತಿಳಿಸಿದಳು. ಜೀನೆಟ್ ರಸಾಯನಶಾಸ್ತ್ರದಲ್ಲಿ ಅಭ್ಯಾಸ ಮುಂದುವರಿಸುವುದಾಗಿ ತಿಳಿಸಿದಳು. ಇದರಿಂದ ಅಪ್ಪನಿಗೆ ಬಹಳ ನಿರಾಶೆಯುಂಟಾಯಿತು. ಡೋನಾ ಮತ್ತು ಜೀನೆಟ್ ಓದುವ ಸಲುವಾಗಿ ಮನೆ ಬಿಟ್ಟು ಬಾಡಿಗೆ ಕೋಣೆಯಲ್ಲಿ ವಾಸಮಾಡಲಾರಂಭಿಸಿದರು. ಆದರೆ ಸಂಗೀತ-ನೃತ್ಯ ಕೂಟಗಳಲ್ಲಿ ನಮ್ಮೊಂದಿಗೆ ಅವರು ಭಾಗವಹಿಸುತ್ತಿದ್ದರು ಮತ್ತು ಅಪ್ಪ ಅವರ ಪಾಲಿನ ಗಳಿಕೆಯನ್ನು ಅವರಿಗೆ ಕೊಡುತ್ತಿದ್ದರು.

ನನಗೆ ಡಾಕ್ಟರ್ ಆಗುವ ಇಚ್ಛೆ ಇದೆ ಎಂದು ಅಪ್ಪನಿಗೆ ತಿಳಿದು ತುಂಬ ಸಂತೋಷವಾಯಿತು. ಮದುವೆಯಾದ ಮೇಲೂ ಥಾರ್ನ್‌ಟನ್ ಎನ್ನುವ ನನ್ನ ಹೆಸರನ್ನು ಬದಲಾಯಿಸುವುದಿಲ್ಲವೆಂದಾಗ ಅವರ ಕಣ್ಣುಗಳು ಕುಣಿದುವು. ಕೊಲಂಬಿಯಾ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನಲ್ಲಿ ನನಗೆ ಪ್ರವೇಶ ಸಿಕ್ಕಿದಾಗ, ಎಲ್ಲರಿಗೂ ಅತಿ ಸಂತೋಷವಾಯಿತು. ಬಾರ್ಡ್‌ಹಾಲ್‌ನಲ್ಲಿ ನನ್ನ ವಸತಿ ಏರ್ಪಾಡಾಗಿತ್ತು. ವ್ಯಾಸಂಗದಲ್ಲಿ ನನಗೆ ಆಫ್ರಿಕನ್-ಅಮೆರಿಕನ್ ಸಹವಿದ್ಯಾರ್ಥಿಯೊಬ್ಬನ ಸ್ನೇಹವಾಯಿತು. ಆತನ ಹೆಸರು ತಿಯರ್‌ವುಡ್ ಅವನನ್ನು ತಂದೆತಾಯಿಗಳಿಗೆ ಪರಿಚಯಿಸಿದೆ. ಅವನನ್ನು ಡೇಟ್ ಮಾಡಲು (ಸಾಹಚರ್ಯ) ಅಪ್ಪ ಒಪ್ಪಿಗೆ ನೀಡಿದರು. ೧೯೭೩ ರಲ್ಲಿ ನನಗೆ ಮೆಡಿಕಲ್ ಡಿಗ್ರಿ ಸಿಕ್ಕಿತು. ಸಂತೋಷದಿಂದ ಅಪ್ಪ ಅಮ್ಮನ ಕಣ್ಣುಗಳು ಒದ್ದೆಯಾದವು.

ರೂಸ್‌ವೆಲ್ಟ್ ಆಸ್ಪತ್ರೆಯಲ್ಲಿ ಸ್ನಾತಕೋತ್ತರ ವೈದ್ಯಕೀಯ ಪರಿಣತಿಯನ್ನು ಪಡೆಯುತ್ತಿದ್ದಾಗ ಅಪ್ಪ ಬಂದು ನನ್ನನ್ನು ನೋಡಿದರು. ಡಾಕ್ಟರ್ ಥಾರ್ನ್‌ಟನ್ ಎಂಬ ಶಬ್ದ ಅವರ ಕಿವಿಗೆ ಬಿದ್ದಾಗ, ಅದು ಅವರಿಗೆ ಸಂಗೀತಕ್ಕಿಂತ ಇಂಪಾಗಿ ಕೇಳಿಸಿತಂತೆ.

೧೯೬೬-೬೭ರಲ್ಲಿ ನಾನು ರೂಸ್‌ವೆಲ್ಟ್ ಆಸ್ಪತ್ರೆಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆಯಾಗಿದ್ದೆ. ಶಿಯರ್‌ವುಡ್ ಮತ್ತು ನಾನು ಗಂಡ ಹೆಂಡಿರಾಗಿದ್ದೆವು. ಆತ ಮೂಳೆರೋಗ ತಜ್ಞನಾಗಿದ್ದ. ನಾನು ಶಸ್ತ್ರಚಿಕಿತ್ಸೆಯೊಂದರಲ್ಲಿ ನಿರತಳಾಗಿದ್ದಾಗ, ಅಮ್ಮ ಅಸ್ವಸ್ಥಳಾದ ಸುದ್ದಿ ತಿಳಿಯಿತು. ಅಮ್ಮನಿಗೆ ಪಾರ್ಶ್ವವಾಯು ಬಡಿದಿತ್ತು. ಕೆಲವು ದಿನಗಳ ಬಳಿಕ ಆಕೆ ತೀರಿಕೊಂಡಳು. ಅಮ್ಮನ ಮೃತ ದೇಹವನ್ನು ಹೂರಲು, ಗಂಡಸರನ್ನು ಗೊತ್ತುಪಡಿಸಬೇಕೆಂದು ನಮಗೆ ತಿಳಿಸಲಾಯಿತು. ಆದರೆ ಅಪ್ಪನಿಗೆ ಈ ವಿಷಯ ಹಿಡಿಸಲಿಲ್ಲ. ನಾವು ಐದು ಜನ ಮಗಳಂದಿರು ಈ ಅಂತಿಮ ಕೆಲಸ ಮಾಡಬೇಕೆಂದು ಹೇಳಿದರು. ನಾವು ಐವರೂ ಅಮ್ಮನನ್ನು ಸಮಾಧಿ ಮಾಡಿ, ಅಂತಿಮ ಪ್ರಾರ್ಥನೆ ಸಲ್ಲಿಸಿದೆವು.

ಅಮ್ಮ ತೀರಿಕೊಂಡ ತರುವಾಯವೂ ಅಪ್ಪ ಸೋಮಾರಿಯಾಗಿರಲಿಲ್ಲ. ಕೆಲಸ ಮಾಡದೇ ಇದ್ದರೆ ತಾನು ಹುಚ್ಚನಾಗುವೆನೆಂದು ಅವರು ತಿಳಿದಿದ್ದರು ಆರು ವರ್ಷಗಳ ಬಳಿಕ ಅವರಿಗೂ ಪಾರ್ಶ್ವವಾಯು ಬಡಿಯಿತು. ತನ್ನ ಐವತ್ತೆಂಟನೇ ವಯಸ್ಸಿನಲ್ಲಿ ಅವರು ವಿಧಿವಶರಾದರು. ಅಪ್ಪನನ್ನು ಕೂಡ ನಾವು ಐದು ಜನ ಹೆಣ್ಣುಮಕ್ಕಳೇ ಸೇರಿ ಸಮಾಧಿ ಮಾಡಿದೆವು. ಮಣ್ಣು ಅಗೆಯುತ್ತಿದ್ದ ಕಾರ್ಮಿಕನನ್ನು ಮಣ್ಣಿನ ತಗ್ಗಿನಲ್ಲೇ ಮಲಗಿಸಿ, ಕೊನೆಯ ಪ್ರಾರ್ಥನೆ ಸಲ್ಲಿಸಿದೆವು.

ನಾವು ಐದು ಜನ ಮಕ್ಕಳು, ಆರ್ಥಿಕವಾಗಿ, ಸ್ವತಂತ್ರ ಜೀವನ ನಡೆಸುವಂತಾದೆವು. ಅಪ್ಪನ ಮಾತುಗಳು ಸದಾಕಾಲವೂ ನಮ್ಮ ಕಿವಿಯಲ್ಲಿ ಮೊಳಗುತ್ತಿವೆ. "ನೀವು ಸಂಗೀತಗಾರರಾದರೆ ವೈರಿಗಳು ನಿಮ್ಮ ನಿಮ್ಮ ಬೆರಳುಗಳನ್ನು ಮುರಿಯಬಹುದು. ಕ್ರೀಡಾಪಟುಗಳಾದರೆ ಮೊಣಕಾಲುಗಳನ್ನು ಗಾಸಿಗೊಳಿಸಬಹುದು. ಆದರೆ ನೀವು ವಿದ್ಯಾವಂತರಾದರೆ ಆ ವಿದ್ಯೆಯನ್ನು ಯಾವ ವೈರಿಯೂ ಏನೂ ಮಾಡಲೂ ಸಾಧ್ಯವಿಲ್ಲ; ಅದು ನಿಮ್ಮದೇ" ಇನ್ನೊಂದು ಸಾರಿ ಅವರು ಬಾಗಿಲು ತೆರೆಯದಿದ್ದರೆ ಕಿಟಕಿಯ ಮೂಲಕ ಹತ್ತು, ಕಿಟಕಿ ಮುಚ್ಚಿದ್ದರೆ ನೆಲಮಾಳಿಗೆಯಿಂದ ಒಳಗೆ ಹೋಗು ಅದೂ ಮುಚ್ಚಿದ್ದರೆ ಮೇಲ್ಛಾವಣಿಯ ಹೊಗೆಕೊಳವೆಯ ಮೂಲಕ ಪ್ರವೇಶಿಸಲು ಯತ್ನಿಸು. ಪ್ರಯತ್ನಪಟ್ಟರೆ ದಾರಿ ಇದ್ದೇ ಇದೆ" ಎನ್ನುತ್ತಿದ್ದರು. ತನ್ನ ಕುಟುಂಬದ ಏಳಿಗೆಗಾಗಿ ಏಕಾಗ್ರಚಿತ್ತದಿಂದ ಅವರು ದುಡಿದರು. "ನನ್ನ ಕುಟುಂಬವನ್ನು ಪ್ರೀತಿಸುವುದು ತಪ್ಪು ಎಂದಾದರೆ ನಾನು ಸರಿಯಾಗಿರಲು ಬಯಸುವುದಿಲ್ಲ" ಎಂದು ದೃಢವಾಗಿ ಹೇಳುತ್ತಿದ್ದರು.

ನಿಜ—ಛಲ ಬೇಕು ಶರಣಂಗೆ!

ಸಂತಸದ ಸದನ

ಡಾ|| ಕೆ. ವಿ. ರಾಘವೇಂದ್ರರಾವ್

ಪೂರ್ವದಲ್ಲಿ ಪ್ರತಿಯೊಂದು ಮನೆಯು ಕೂಡ ಸ್ವರ್ಗದಂತಿರುತ್ತಿತ್ತು. ಅದನ್ನು ನೋಡುವುದಕ್ಕೂ ಕೂಡ ಎಲ್ಲರಿಗೂ ಒಂದು ತರಹ ಸಂತೋಷವಾಗುತ್ತಿತ್ತು. ಮನೆಯಲ್ಲಿ ಹುಟ್ಟಿದ ಮಕ್ಕಳೇ ಆಗಲೀ, ದೊಡ್ಡವರುಗಳೇ ಆಗಲಿ ತಮ್ಮ ಸ್ವಾರ್ಥವನ್ನು ತೋರಿಸುತ್ತಿರಲಿಲ್ಲ. ಹಿರಿಯರು ಕಿರಿಯರಿಗೆ ನಿಸ್ವಾರ್ಥ ಮನೋಬುದ್ಧಿಯನ್ನು ಕಲಿಸಿಕೊಟ್ಟು, ಎಲ್ಲರೂ ಹೊಂದಿಕೊಂಡು ಸಂತೋಷದಿಂದಿರುವ ದಾರಿಯನ್ನು ತೋರಿಸಿಕೊಡುತ್ತಿದ್ದರು. ಅವರುಗಳ ಮನಸ್ಸು ಪ್ರಾಮಾಣಿಕತೆ ಮತ್ತು ತಿಳಿ ಭಾವಗಳಿಂದ ಕೂಡಿರುತ್ತಿತ್ತು. ಈ ಕಾರಣದಿಂದ ಯುವಜನಾಂಗವು ಆನಂದದಿಂದ ಬೆಳೆಯುತ್ತಿದ್ದರು. ತಮ್ಮ ತಂದೆ ತಾಯಿಯರುಗಳನ್ನು ಬಿಟ್ಟು ದೂರ ಹೋಗಿರಬೇಕಾದ ಸಂದರ್ಭಗಳಲ್ಲಿಯೂ ಸಹ ಎಷ್ಟೋ ಸನ್ನಿವೇಶಗಳಲ್ಲಿ ತಮ್ಮ ತಂದೆ ತಾಯಿಯವರ ಸಲಹೆಯನ್ನು ಪಡೆಯುತ್ತಿದ್ದರು. ತಂದೆ ತಾಯಿಗಳ ಅನುಭವಗಳು ತಮ್ಮ ಎಷ್ಟೋ ಕಷ್ಟಗಳಿಗೆ ಸುಖ ಪರಿಣಾಮಗಳನ್ನು ನೀಡುತ್ತವೆ ಎಂಬುದೇ ಅವರ ಭಾವನೆಗಳಾಗಿತ್ತು.

ನಿಜ, ಕೆಲವರು ಕಾಡಿನ ಕ್ರೂರಮಾರ್ಗ-ದೋಪಾದಿಯಲ್ಲಿ ಜೀವನ ನಡೆಸಬೇಕು ಎಂದು ತಿಳಿಯುತ್ತಾರೆ. ಮನುಷ್ಯನ ಅನಿಸಿಕೆಗಳು ಬದಲಾಯಿಸಬಹುದು, ಆದರೆ ಇದು ಸತ್ಯದಿಂದ ದೂರವಾದದ್ದು. ಎಲ್ಲರೂ ಸಹ ಮಕ್ಕಳನ್ನು ಒಳ್ಳೆಯ ಮನೆಯಲ್ಲಿ, ಒಳ್ಳೆಯ ಪರಿಸರದಲ್ಲಿ, ಒಳ್ಳೆಯ ಸಹವಾಸದಲ್ಲಿ ಬೆಳೆಸಿ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಲಿ ಎಂಬ ಆಸೆಯನ್ನು ಇಟ್ಟುಕೊಂಡು ಬೆಳೆಸುತ್ತಾರೆಯೇ ಹೊರತು, ಕೆಟ್ಟ, ಕ್ರೂರವಾದ, ಭಯಂಕರವಾದ, ದುಷ್ಟಪರಿಣಾಮವನ್ನು ಬೀರುವ ರೀತಿಯಲ್ಲಿ ಬೆಳೆಸುವುದಕ್ಕೆ ಖಂಡಿತ ಇಷ್ಟಪಡುವುದಿಲ್ಲ.

ಯಾವ ಪುರುಷನು ಪ್ರಪಂಚಕ್ಕೆ ಬಂದ ಕೂಡಲೇ ತನ್ನ ನಿಸ್ವಾರ್ಥ ಮನೋಬುದ್ಧಿಯನ್ನು ಬೆಳೆಸಿಕೊಂಡು ಆನಂದಮಯವಾದ ಮನೆಯನ್ನು ಸೃಷ್ಟಿಸಿಕೊಳ್ಳಬೇಕು. ಯಾವ ಮಗುವೇ ಆಗಲಿ ವ್ಯಸನಗ್ರಸ್ಥ ಆಗುವುದಕ್ಕೆ ಬಿಡಬಾರದು. ಬಹಳ ಕಾಲದ ವ್ಯಸನಗ್ರಸ್ಥತೆಯಿಂದ ಆ ಮಗುವು ಶಾರೀರಕ ಮತ್ತು ಮಾನಸಿಕ ರೋಗಕ್ಕೊಳಗಾಗಬಹುದು.

ಯಾವ ಮನುಷ್ಯನು ತೃಪ್ತಿಯನ್ನು ಹೊಂದಿ, ಜೀವನದ ಒಳ್ಳೆಯ ಹಾದಿಯಲ್ಲಿ ನಡೆಯುತ್ತಾ ಹೋಗುವನೋ, ಅವನು ನಿಜವಾಗಿಯೂ, ಯಾವ ಸಂದರ್ಭದಲ್ಲಿಯೂ ಕೂಡ ಸಂತೋಷದಿಂದಲೇ ಕಷ್ಟಗಳನ್ನೂ

ಸಹ ಎದುರಿಸಲು ಧೈರ್ಯವಂತನಾಗಿರುತ್ತಾನೆ. ಅಷ್ಟೇ ಅಲ್ಲ, ಶಾರೀರಕವಾಗಿಯೂ ಮತ್ತು ಮಾನಸಿಕವಾಗಿಯೂ ಒಳ್ಳೆಯ ಆರೋಗ್ಯವನ್ನು ಹೊಂದಿರುತ್ತಾನೆ.

ಮಕ್ಕಳ ಪರಿವರ್ತನೆಗೆ ನಾವೇ ಕಾರಣರಾಗುತ್ತೇವೆ. ಒಳ್ಳೆಯ ಹಾದಿಯಲ್ಲಿ ಬೆಳಸಿದರೆ ಒಳ್ಳೆಯ ತನವನ್ನು ಪಡೆಯುತ್ತವೆ. ಕೆಟ್ಟ ಹಾದಿಯಲ್ಲಿ ಬೆಳೆಸಿದರೆ ಕೆಟ್ಟತನವನ್ನು ಕಲಿಯುತ್ತವೆ. ಅಂದರೆ ಮಕ್ಕಳ ಭವಿಷ್ಯಕ್ಕೆ ನಾವು ಮನೆಯಲ್ಲಿ ಕೊಡುವ ಶಿಕ್ಷಣವೇ ಅತಿ ಮುಖ್ಯವಾದದ್ದು.

ಷೇಕ್ಸ್‌ಪಿಯರ್ ಮದುವೆಯನ್ನು "Union of two Heads" ಎಂದು ಹೇಳಿದ್ದಾನೆ. ಮದುವೆಯಲ್ಲಿ ಎರಡು ತಲೆಗಳು ಸೇರುವುದೇನೋ ನಿಜ. ಆದರೆ ಆ ಇಬ್ಬರು ಬೆಳೆದ ವಾತಾವರಣವು ಸರಿಯಾಗಿದ್ದರೆ ಮಾತ್ರ ಅವರ ಜೀವನವು ಆನಂದದಾಯಕವಾಗಿರುತ್ತದೆ. ಇಲ್ಲವಾದಲ್ಲಿ ಅವರ ಮನೋಪ್ರವೃತ್ತಿಗಳು ಬದಲಾಯಿಸಿದ್ದರೆ ಒಬ್ಬರನ್ನೊಬ್ಬರು ಸರಿಹೊಂದಿಕೊಂಡು ಹೋಗುವುದು ಬಹಳ ಕಷ್ಟ. ಇದೇ ಗುಣಗಳು, ಮಕ್ಕಳು ಅದೇ ಪರಿಸರದಲ್ಲಿ ಬೆಳೆಯುವುದರಿಂದ. ಕಲಿಯುವ ಅವಕಾಶಗಳು ಜಾಸ್ತಿ ಇರುತ್ತದೆ. (Inheritance) ಹೀಗೆ ಇದು ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ ಹೋಗುವುದು ಸಾಧ್ಯ.

ಕೆಲವರ ಮನಸ್ಸಿನಲ್ಲಿ ದುಡ್ಡಿದ್ದರೆ ತಾವುಗಳು ಬಹಳ ಸುಖವಾಗಿರಬಹುದೆಂದು ತಿಳಿದಿದ್ದಾರೆ. ದುಡ್ಡಿನಿಂದ ಯಾವಾಗಲೂ ಸಹ ಸುಖ ಸಿಗಲಾರದು. ಪ್ರಪಂಚದಲ್ಲಿ ಒಬ್ಬ ಕಡು ಬಡವನಾದವನು ತನ್ನ ಜೀವನವನ್ನು ಬಹಳ ಸುಖವಾಗಿ ಸಾಗಿಸಿಕೊಂಡು ಹೋಗುತ್ತಿರಬಹುದು. ಆದರೆ ಬಹಳ ಹಣವಿಟ್ಟುಕೊಂಡು, ಐಶ್ವರ್ಯವಂತನಾದವನು, ಪ್ರಾಪಂಚಿಕವಾಗಿ ಎಲ್ಲಾ ಸುಖವುಳ್ಳವನೂ ಬಹಳ ಕಷ್ಟಮಯವಾದ ಜೀವನವನ್ನು ಸಾಗಿಸುತ್ತಿರಬಹುದು. ಉದಾಹರಣೆಗೆ ಅವನಿಗೆ ಅನೇಕ ಖಾಯಿಲೆಗಳಿರಬಹುದು, ಒಳ್ಳೆಯ ಮಕ್ಕಳಿಲ್ಲದಿರಬಹುದು, ಹೆಂಡತಿಯು ಸರಿಯಾಗಿ ಹೊಂದಿಕೊಳ್ಳದೆ ಇರಬಹುದು ಇತ್ಯಾದಿ, ಇತ್ಯಾದಿ.

ಆದುದರಿಂದ ಒಂದು ಒಳ್ಳೆಯ ಸುಖಮಯವಾದ ಮನೆಯನ್ನು ಹೊಂದಬೇಕಾದರೆ ತಂದೆ ತಾಯಿಯಂದಿರಿಬ್ಬರೂ ತಮ್ಮ ಅನೇಕ ಆಕಾಂಕ್ಷೆಗಳನ್ನು ತ್ಯಾಗಮಾಡಿ ಒಬ್ಬರಿಗೊಬ್ಬರು ಹೊಂದಿಕೊಂಡು ಜೀವನವನ್ನು ನೆಮ್ಮದಿಯಿಂದ ನಡೆಸಿಕೊಂಡು ಬರುವುದಕ್ಕೆ ಸಮರ್ಥರಾಗಬೇಕು ಇಬ್ಬರೂ ಜಗಳವಾಡದೆ ಯಾವ ಸಮಸ್ಯೆ ಬಂದರೂ ನಗುನಗುತ್ತಾ ಪರಿಹಾರವನ್ನು ಕಂಡು ಹಿಡಿಯುವದರಲ್ಲಿ ಯೋಚನಾಶೀಲರಾಗಬೇಕು. ಯಾವಾಗಲೂ ತಂದೆಯೇ ಆಗಲೀ, ತಾಯಿಯೇ ಆಗಲೀ ತಾನು ಮಾಡಿದ್ದು ಸರಿಯೆಂದು ತಿಳಿಯಬಾರದು. ಎಲ್ಲರೂ ಯಾವಾಗಲೂ ತಾವುಮಾಡಿದ್ದು ಸರಿಯಾದದ್ದು ಎಂಬ ನಿಲವನ್ನು ಬಿಡಬೇಕು ಎಲ್ಲರೂ ಒಂದಲ್ಲ ಒಂದು ಸಲ ತಪ್ಪನ್ನು ಮಾಡೇ ಮಾಡುತ್ತಾರೆ. ಒಬ್ಬರಿಗೊಬ್ಬರು ಸಲಹೆಯನ್ನು ಕೊಟ್ಟುಕೊಂಡು ತಮ್ಮ ಸಮಸ್ಯೆಯನ್ನು ಒಳ್ಳೆಯ ರೀತಿಯಲ್ಲಿ ಪರಿಹಾರ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ತಮ್ಮಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಈ ರೀತಿಯಲ್ಲಿ ದಂಪತಿಗಳು ನಡೆದುಬಂದರೆ ನಿಜ

...ಾಗಲೂ ಸುಖೀ ಸಂಸಾರವನ್ನು ಕಾಣಬಹುದು.

(Little Joys, Kindness and Happy surprise really make Life worth while)

ಆದರೆ ಸ್ವಾರ್ಥ ಜನಗಳು ಈ ಸುಖೀ ಸಂಸಾರವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಅವರು ತಮ್ಮ ಮನಸ್ಸಿನಲ್ಲಿ ಮೊದಲಿನಿಂದಲೂ ಸ್ವಾರ್ಥತೆಯನ್ನು ಬೆಳಸಿಕೊಂಡು ಬಂದಿರುವುದರಿಂದ ಅದನ್ನು ತಿದ್ದುವುದಕ್ಕೆ ಸಾಧ್ಯವೇ ಇಲ್ಲ. ಮಿಕ್ಕವರ ಭಾವನೆಗಳಿಗೆ ಅವರು ಬೆಲೆಯನ್ನು ಕೊಡುವುದಿಲ್ಲ. ತಮ್ಮ ದಾರಿಯಲ್ಲೇ ತಾವು ಹೋಗುತ್ತಾರೆ.

ಇಂತಹ ಜನರಿಂದ ಒಂದು ಒಳ್ಳೆಯ ಸಮೂಹವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಯುವಕರು ಮದುವೆಯಾಗುವಾಗ ಈ ಅಂಶವನ್ನು ಗಮನದಲ್ಲಿಟ್ಟಿರಬೇಕು. ಏಕೆಂದರೆ ಸ್ವಾರ್ಥಮನೋಭಾವವಿಟ್ಟಿರುವ ಮನುಷ್ಯನನ್ನು ಸರಿಮಾಡುವುದು ಕಷ್ಟ. ಅಂತಹ ಜನಗಳಿಂದಲೇ ಅನೇಕ ಮನೆಗಳಲ್ಲಿ ಒಡಕು ಬರುವುದು. ಒಬ್ಬರನ್ನೊಬ್ಬರು ಅನ್ಯೋನ್ಯವಾಗಿ ಪ್ರೀತಿಸಿ ಮದುವೆ ಮಾಡಿಕೊಳ್ಳುವುದರಿಂದ ಅವರುಗಳ ಮನಸ್ಸು ಒಂದುಗೂಡಿ ಸುಖೀ ಸಂಸಾರವಾಗಬಹುದು ಆದರೆ ಅವರು ಸ್ವಾರ್ಥಿಗಳಾಗಬಾರದು.

ಸುಖೀ ಸಂಸಾರದಲ್ಲಿ ಹೊಟ್ಟೆಕಿಚ್ಚು ಇರಬಾರದು. ಹಾಗೇನಾದರೂ ಇದ್ದರೆ ಅವನು ಯಾವ ತರಹದಲ್ಲೂ ಭದ್ರವಾಗಿರುವುದಿಲ್ಲ. (Insecurs)

ಪ್ರತಿಯೊಂದು ಸಂಸಾರದಲ್ಲಿಯೂ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿಸಬೇಕಾದರೆ ಅದು ತಾಯಿಗೆ ಮಾತ್ರ ಸಾಧ್ಯ. ಅವಳ ಗುಣಗಳು, ಆಸೆ ಆಕಾಂಕ್ಷೆಗಳು, ಆದರ್ಶಗಳು ಮನೆಯ ಜನಗಳ ಮೇಲೆ ಒಳ್ಳೆ ಪರಿಣಾಮಗಳನ್ನು ಬೀರುತ್ತವೆ. ಆಕೆಯು ಒಳ್ಳೆ ಸುಸಂಸ್ಕೃತಳು, ಸಹಾನುಭೂತಿಯುಳ್ಳವಳು ಅವಳ ಮನೆಯು ಒಳ್ಳೆ ವಾತಾವರಣವನ್ನು ಸೃಷ್ಟಿಸುತ್ತದೆ. ಅದಕ್ಕೆ ಬದಲಾಗಿ ಅವಳು ಉದಾಸೀನವಾಗಿಯೂ, ತಿಳುವಳಿಕೆ ಇಲ್ಲದವಳೂ ಆದಲ್ಲಿ ಮನೆಯಲ್ಲಿ ಒಳ್ಳೆ ಶಿಕ್ಷಣವಿರುವುದಿಲ್ಲ.

ಯಾವ ವ್ಯಕ್ತಿಯೇ ಆಗಲಿ ತನ್ನ ಕಸುಬಿನಲ್ಲಿ ಉದ್ಧಾರವಾಗಬೇಕಾದರೆ ಒಳ್ಳೆ ವಿದ್ಯಾಭ್ಯಾಸವಿರಬೇಕು, ಈ ವಿದ್ಯಾಭ್ಯಾಸವು ಕೇವಲ ಹೊರ ಪ್ರಪಂಚಕ್ಕೆ ಅಲ್ಲ, ಮನೆಯ ಒಳಗಿನ ಪ್ರಪಂಚಕ್ಕೂ ಅನ್ವಯಿಸಬೇಕು. ಪ್ರತಿಯೊಬ್ಬ ಸ್ತ್ರೀಯೂ ತನ್ನ ಮನೆಯನ್ನು ಸರಿಯಾಗಿ ನೋಡಿಕೊಳ್ಳಬೇಕಾದರೆ ಅವಳಿಗೆ ಆರೋಗ್ಯ, ಮಗುವಿನ ರಕ್ಷಣೆ ಇವೇ ಮೊದಲಾದ ಮನೆಗೆ ಬೇಕಾಗುವ ಶಿಕ್ಷಣವನ್ನು ಕೊಟ್ಟಿರಬೇಕು. ಒಂದು ಒಳ್ಳೆಯ ಸುಖೀ ಸಂಸಾರವಾಗಬೇಕಾದರೆ ಇವುಗಳು ಅತ್ಯವಶ್ಯಕ. ಇದಕ್ಕಿಂತ ಮೇಲಿನ ಜವಾಬ್ದಾರಿ ಮತ್ತೊಂದಿಲ್ಲ. ಎಲ್ಲದಕ್ಕಿಂತ ಮಿಗಿಲಾಗಿ ಮನೆಯು ಬಹಳ ಖುಷಿಯಾಗುವ ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಜಾಗವಾಗಬೇಕು. ಹೀಗಿದ್ದರೆ ಮಾತ್ರ ಎಲ್ಲರೂ ಆ ಮನೆಯಲ್ಲಿ ಸುಖವಾಗಿರಬಲ್ಲರು, ಇಷ್ಟೇ ಅಲ್ಲದೆ, ಸ್ನೇಹಿತರು, ಅಕ್ಕಪಕ್ಕದವರು ಆ ಮನೆಯ ಆದರ್ಶವನ್ನು ಹೊಂದುತ್ತಾರೆ. ಅಂತಹ ಮನೆಯಲ್ಲಿ ಹುಟ್ಟುವ ಮಕ್ಕಳೂ ಸಹ ಸುರಕ್ಷಿತರಾಗಿ ಸಮಾಜದಲ್ಲಿ ಒಳ್ಳೆಯ ಹೆಸರನ್ನು ಪಡೆಯುತ್ತಾರೆ.

ಹುಟ್ಟು ಹೃದಯ ರೋಗಗಳು

ಡಾ|| ಕರವೀರಪ್ರಭು ಕ್ಯಾಲಕೊಂಡ

ಹೆಂಗೆಯಾದ ಹಸುಗೂಸುಗಳಲ್ಲಿ ಕಾಣುವ ಹೃದಯ ರೋಗಗಳು ತಜ್ಞ ವೈದ್ಯರ ತೀಕ್ಷ್ಣ ಪರೀಕ್ಷೆಗಳಿಗೆ ಮಾತ್ರ ಗೊತ್ತಾಗುವುವು, ಕೆಲವನ್ನು ಹಸುಗೂಸುಗಳಲ್ಲಿ ಪತ್ತೆ ಹಚ್ಚಿದರೆ, ಇನ್ನು ಕೆಲವು ಶಾಲಾ ಮಕ್ಕಳ ಆರೋಗ್ಯ ತಪಾಸಣೆಯ ವೇಳೆಯಲ್ಲೋ, ಬೇರೆ ಕಾಯಿಲೆಗಾಗಿ ಪರೀಕ್ಷಿಸುವಾಗಲೋ ಆಕಸ್ಮಿಕವಾಗಿ ವೈದ್ಯರ ಗಮನಕ್ಕೆ ಬರುವುವು.

ಗರ್ಭಕೋಶದಲ್ಲಿ ಪಿಂಡವು ೩ ವಾರವಾದ್ದಾಗ ಹೃದಯದ ಬೆಳವಣಿಗೆಗೆ ನಾಂದಿಯಾಗುವುದು. ಆಗ ಇದು ಒಂದು ಸಾದಾ ಟ್ಯೂಬಿನಂತೇ ಕಾಣುವುದು, ನಂತರ ಬದಲಾವಣೆಗಳನ್ನು ಹೊಂದಿ, ಅತ್ತ ಇತ್ತ ಮಣಿದು, ಬೆಸೆದು, ನಡುವೆ ಇಬ್ಭಾಗಿಸುವ ಗೋಡೆಗಳು ಬೆಳೆದು, ಕವಾಟ, ರಕ್ತನಾಳಗಳು ವಿಕಾಸವಾಗಿ, ಎಂಟನೆಯ ವಾರವಲ್ಲಿ ಅದು ಹೃದಯದ ಆಕಾರವನ್ನು ಪಡೆಯುವುದು. ೧೩ನೆಯ ವಾರದಲ್ಲಿ ಅಕುಂಚನಾ ಶಕ್ತಿಯು ಸಂಚಯವಾಗಿ, ನೀರೆತ್ತುವ ಪಂಪಿನಂತೆ ಜೀವನ ಪರ್ಯಂತ ಕಾರ್ಯ ನಿರ್ವಹಿಸುವುದು. ಭ್ರೂಣದಲ್ಲಿ ರಕ್ತದ ಶುದ್ಧೀಕರಣ ಶ್ವಾಸಕೋಶದ ಮೂಲಕ ನಡೆಯುವುದಿಲ್ಲ, ಶಿಶುವಿನ ಶ್ವಾಸಕೋಶಗಳಿಗಿನ್ನು ಆಮ್ಲಜನಕದ ಪೂರೈಕೆ ಇಲ್ಲದಿರುವುದರಿಂದ ರಕ್ತನಾಳಗಳು ಶುದ್ಧ ರಕ್ತವನ್ನು ತಾಯಿಯ ರಕ್ತನಾಳಗಳ ಮೂಲಕ ಪಡೆಯುತ್ತವೆ.

ಕಾರಣಗಳು :

ಗರ್ಭದಲ್ಲಿ ಬೆಳೆಯುತ್ತಿರುವ ೩ರಿಂದ ೮ ವಾರಗಳ ಪಿಂಡವ ಹೃದಯದ ಅಂಗ ರಚನೆಯಲ್ಲಿ ಆಗುವ ವಿಕೃತಿಯ ಫಲವಾಗಿ ಹುಟ್ಟು ಹೃದಯ ರೋಗಗಳು ತಲೆದೋರುತ್ತವೆ. ನೈಸರ್ಗಿಕ ತಪ್ಪಿನಿಂದ ಉಂಟಾಗುವ ಈ ತೆರನಾದ ಹೃದಯ ರೋಗಗಳು ಅಪರೂಪಕ್ಕೆ ಸಿಗುತ್ತವೆ. ರಕ್ತಸಂಬಂಧವಲ್ಲಿ ಮದುವೆಯಾದ ದಂಪತಿಗಳಿಗೆ ಹುಟ್ಟುವ ಮಕ್ಕಳಲ್ಲಿ ಹುಟ್ಟು ಹೃದಯ ರೋಗಗಳ ಹಾವಳಿ ಇತರ ದಂಪತಿಗಳಿಗೆ ಹುಟ್ಟುವ ಮಕ್ಕಳಿಗಿಂತ ಹೆಚ್ಚು ಇರುವುದರಿಂದಾಗಿ ಆನುವಂಶಿಕತೆಯನ್ನು ಅಲಕ್ಷಿಸುವಂತಿಲ್ಲ. ಗರ್ಭಿಣಿಯು ಮೊದಲ ಮೂರು ತಿಂಗಳ ಕಾಲಾವಧಿಯಲ್ಲಿ ಜರ್ಮನ್ ದಡಾರಕ್ಕೆ ತುತ್ತಾದಲ್ಲಿ ಪಿಂಡದ ಭದ್ರ ಹೃದಯ ಭಿತ್ತಿಗಳೆಲ್ಲಾ ಛಿದ್ರ ಛಿದ್ರವಾಗುವುವು, ಹುಟ್ಟು ಹೃದಯ ರೋಗಕ್ಕೆ ಹಾದಿ ಮಾಡುವುದು.

ವಿರೂಪೋತ್ಪತ್ತಿ ಪರಿಣಾಮ ಬೀರುವ ಶಕ್ತಿ ಸಾಮರ್ಥ್ಯ ಹೊಂದಿದ ಔಷಧಿಗಳನ್ನು ಗರ್ಭಿಣಿಯು ಮೊದಲ ಮೂರು ತಿಂಗಳಲ್ಲಿ ಸೇವಿಸದೆ ಇರುವುದು ಸೂಕ್ತ. ಥಲಿಡಾಮೈಡ್ ಔಷಧಿ, ಸೆಳವು ನಿರೋಧಕ ಔಷಧಿಗಳಿಂದ ಈ ದುಷ್ಪರಿಣಾಮ ಹೊಂದಿರುವುದು ಖಚಿತವಾಗಿದೆ. ಈ ವಿರೂಪೋತ್ಪತ್ತಿ ಪರಿಣಾಮ ಹೊಂದಿರುವ ಔಷಧಿಗಳ ಯಾದಿಯನ್ನು ಸಂಶೋಧಕರು ಪೂರ್ತಿ ಮಾಡಬೇಕಾಗಿದೆ. ಕಾರಣ ಅನಾವಶ್ಯಕ ಔಷಧಿ ಸೇವನೆಗೆ ಅವಕಾಶ ನೀಡದಿರುವುದು ಒಳ್ಳೆಯದು.

ಕ್ಷಕಿರಣ, ರೇಡಿಯಂ ಪರಮಾಣು ಸಿಡಿತಗಳಿಂದ ಏಳುವ ವಿಕಿರಣತೆಗೆ ಮೈಯೊಡ್ಡುವುದು, ಸಿಹಿಮೂತ್ರ ರೋಗದಿಂದ ಬಳಲುವ ಗರ್ಭಿಣಿ, ಎತ್ತರ ಪ್ರದೇಶಗಳಲ್ಲಿ ವಾಸಿಸುವುದು ಹುಟ್ಟು ಹೃದಯ ರೋಗಗಳ ಹಾವಳಿ ಹೆಚ್ಚಿಸಿರುವುದು ಅಧ್ಯಯನಗಳಿಂದ ಸಾಬೀತಾಗಿದೆ. ಅಪೌಷ್ಠಿಕ ಆಹಾರದಿಂದಲೂ, ಕೆಲವೊಂದು ಜೀವಸತ್ವಗಳ ಅದರಲ್ಲೂ 'ಎ' ಅನ್ನಾಂಗದ ಕೊರತೆಯಿಂದಲೂ ಪಿಂಡದ ಗುಂಡಿಗೆಯು ಕೆಡುವುದು ಉಂಟು.

ರೋಗದ ಪ್ರಮಾಣ :

ಹುಟ್ಟುವ ಪ್ರತಿ ಸಾವಿರ ಮಕ್ಕಳಲ್ಲಿ ೬ ರಿಂದ ೮ ಮಕ್ಕಳು ಹುಟ್ಟು ಹೃದಯ ರೋಗಗಳೊಂದಿಗೆ ಈ ಪ್ರಪಂಚಕ್ಕೆ ಪಾದಾರ್ಪಣೆ ಮಾಡುವುವು. ೧೦ ವರ್ಷದ ಪ್ರತಿ ಸಾವಿರ ಮಕ್ಕಳಲ್ಲಿ ಒಂದು ಮಗು ಈ ರೋಗದಿಂದ ಬಳಲುವುದು, ಹುಟ್ಟು ಹೃದಯದ ರೋಗಗಳ ಹಾವಳಿ ಪ್ರಪಂಚದ ಎಲ್ಲಾ ದೇಶಗಳಲ್ಲೂ ಹೆಚ್ಚು ಕಡಿಮೆ ಒಂದೇ ಆಗಿರುವುದು. ಮೊದಲ ಹುಟ್ಟು ಹಬ್ಬದ ಮೊಂಬತ್ತಿಯ ಬೆಳಕನ್ನು ಇವರಲ್ಲಿಯ ಅರ್ಧದಷ್ಟು ಮಕ್ಕಳು ಕಾಣುವುದಿಲ್ಲ. ನೀಲಿ ಮಗುವಿಗೆ ಪ್ರಮುಖ ಕಾರಣ ಫೆಲಾಟ್ನ ನಾಲ್ಕು ವೈಪರೀತ್ಯಗಳು.

ಹುಟ್ಟು ಹೃದಯರೋಗಗಳ ಪ್ರಕಾರಗಳು :

ಹೃದಯವನ್ನು ಎಡ ಮತ್ತು ಬಲ ಎಂದು ವಿಂಗಡಿಸುವ ನಡುವಿನ ತೆರೆಯ ಬೆಳವಣಿಗೆ ಸರಿಯಾಗಿ ಆಗದೆ ರಂಧ್ರಗಳು ಏರ್ಪಟ್ಟು ಎರಡೂ ಹೃತ್ಕರಣ ಅಥವಾ ಹೃತ್ಕುಕ್ಷಿಗಳ ನಡುವೆ ಸಂಪರ್ಕವನ್ನು ಕಲ್ಪಿಸಬಹುದು ಅಥವಾ ಹೃದಯದಿಂದ ಹೊರಹೊಮ್ಮುವ ಮಹಾ ಅಪಧಮನಿ ಮತ್ತು ಶ್ವಾಶಕೋಶ ಅಪಧಮನಿಗಳ ಮಧ್ಯ ರಂಧ್ರ ಉಂಟಾಗಿ ಶುದ್ಧ ಮತ್ತು ಅಶುದ್ಧ ರಕ್ತಗಳ ಕಲಬೆರಕೆ ಆಗಬಹುದು. ಸಾಮಾನ್ಯವಾಗಿ ಮಹಾ ಅಪಧಮನಿ ಮತ್ತು ಶ್ವಾಶಕೋಶ ಅಪಧಮನಿಗಳ ನಡುವೆ ಸಂಬಂಧವನ್ನು ಕಲ್ಪಿಸುವ ರಕ್ತನಾಳ, ಜನ್ಮ ತಳೆದ ಕೆಲ ದಿನಗಳಲ್ಲಿ ಮುಚ್ಚಲ್ಪಡುವುದು. ಅಕಸ್ಮಾತ್ ಅದು ಮುಚ್ಚದೆ ಉಳಿದರೆ ಅಥವಾ ಹೃದ್ಧಮನಿ ತನ್ನ ಗಾತ್ರದಲ್ಲಿ ಎಲ್ಲಿಯಾದರೂ ಕಿರಿದಾಗಿದ್ದರೆ ಹೃದಯ ರೋಗಗಳು ತಲೆದೋರುವ ಸಾಧ್ಯತೆಗಳು ಇರುತ್ತವೆ.

ಹುಟ್ಟು ಹೃದಯ ರೋಗಗಳ ತೀವ್ರತೆ ವಿವಿಧ ತೆರನಾಗಿದೆ. ಸ್ಥಾನ ಪಲ್ಲಟಗೊಂಡು ಬಲಕ್ಕಿರುವ ಹೃದಯ ಯಾವುದೇ ಗುಣಲಕ್ಷಣಗಳನ್ನು ತೋರ್ಪಡಿಸದೆ ಇರಬಹುದು. ಇಂಥವರನ್ನು ಪರೀಕ್ಷೆ ಮಾಡುವಾಗ ಆಕಸ್ಮಿಕವಾಗಿ ಪತ್ತೆ ಆಗಬಹುದು. ಕಿರಿದಾದ ಹೃದ್

ಕವಾಟ ಯಾವ ಗುಣ ಲಕ್ಷಣಗಳಿಲ್ಲದೇ ಇದ್ದು, ಮಧ್ಯ ವಯಸ್ಸಿನಲ್ಲಿ ತನ್ನ ಇರುವಿಕೆಯನ್ನು ಪ್ರಕಟಗೊಳಿಸಬಹುದು.

ವರ್ಗೀಕರಣ

೧) ನೀಲಿಗಟ್ಟಿದ ಹೃದಯ ರೋಗಗಳು :

- ಅ) ಕಿರಿದುಗೊಂಡ ಹೃದ್ಧಮನಿ
- ಬ) ಕಿರಿದುಗೊಂಡ ಹೃದ್ಕವಾಟ
- ಕ) ಬಲ ಹೃದಯ
- ಡ) ಕಿರಿದುಗೊಂಡ ಶ್ವಾಸಕವಾಟ
- ಇ) ಹುಟ್ಟು ಹೃದಯ ತಡೆ
- ಈ) ರಕ್ತನಾಳದ ಉಂಗುರ

೨) ನಿಗೂಢ ನಿಲಿಗಟ್ಟುವ ಹೃದಯ ರೋಗಗಳು :

- ಅ) ತೆರೆದ ಸಂಪರ್ಕನಾಳ
- ಬ) ರಂಧ್ರಗೊಂಡ ಹೃತ್ಕರಣದ ತೆರೆ
- ಕ) ರಂಧ್ರಗೊಂಡ ಹೃತ್ಕುಕ್ಷಿಯ ತೆರೆ
- ಡ) ಐಸೆನ್ ಮೆಂಗರನ ಸಂಕೀರ್ಣ

೩) ನೀಲಿಗಟ್ಟುವ ಹೃದಯ ರೋಗಗಳು :

- ಅ) ಫೆಲಾಟ್ಸನ ೪ ವೈಪರಿತ್ಯಗಳು
- ಬ) ಬೆಳೆಯದ ತ್ರಿಪಕ್ಷಕವಾಟ
- ಕ) ಸ್ಥಳಾಂತರಗೊಂಡ ದೊಡ್ಡ ರಕ್ತನಾಳಗಳು
- ಡ) ಐಸನ್ ಮೆಂಗರನ ಸಂಕೀರ್ಣ

ರೋಗದ ಲಕ್ಷಣಗಳು :

ಹುಟ್ಟು ಹೃದಯ ರೋಗದ ಲಕ್ಷಣಗಳು ಸಾಮಾನ್ಯವಾಗಿ ಹಸುಗೂಸುಗಳಲ್ಲಿ ಹಾಗೂ ಕಿರಿ ವಯಸ್ಸಿನವರಲ್ಲಿ ತೋರಿಬರುತ್ತವೆ. ಅನೇಕ ಬಾರಿ ದೇಹದಲ್ಲಿ ನೀಲಿ ಛಾಯೆ ತೋರಿಬರಬಹುದು, ಉಬ್ಬಸದಿಂದ ಏದುಸಿರು ಬಿಡುವಿಕೆಯಾಗಿ ಯಾವುದೇ ಶ್ರಮದ ಕಾರ್ಯ ನಿರ್ವಹಿಸಲು ಅಸಮರ್ಥರನ್ನಾಗಿ ಮಾಡುತ್ತವೆ. ದೈಹಿಕ ದುರ್ಬಲತೆ, ಅಸಮರ್ಪಕ ಬೆಳವಣಿಗೆ, ಪದೇ ಪದೇ ತೋರಿಬರುವ ಕೆಮ್ಮು ಮುಖ್ಯವಾಗಿ ಕಂಡುಬರುವ ಲಕ್ಷಣಗಳು. ಕೆಲವು ಹುಟ್ಟಿನೊಡನೆಯೇ ತಮ್ಮ ಇರುವಿಕೆಯನ್ನು ಪ್ರಕಟಪಡಿಸುತ್ತವೆ. ಸ್ಥಾನಪಲ್ಲಟಗೊಂಡ ರಕ್ತನಾಳಗಳು ಜೀವದ ಉಳಿವಿಗೇ ಮಾರಕವಾಗುತ್ತವೆ. ಇನ್ನು ಕೆಲವು ರೋಗಗಳು ಯವ್ವನದಲ್ಲಿ ತಮ್ಮ ಇರುವಿಕೆಯ ಸುಳಿವನ್ನು ನೀಡುತ್ತವೆ.

೧) ನಿಲಿಗಟ್ಟುವಿಕೆ :

ಹುಟ್ಟು ಹೃದಯ ರೋಗಗಳಲ್ಲಿ ಶುದ್ಧ ರಕ್ತ ಮತ್ತು ಮಲಿನ ರಕ್ತಗಳ ಕಲಬೆರಕೆ ಆಗುವುದರಿಂದ ಕೇಂದ್ರೀಯ ನೀಲಿಗಟ್ಟುವಿಕೆ ತಲೆದೋರುವುದು. ದೊಡ್ಡ ರಕ್ತನಾಳಗಳು ಸ್ಥಾನಪಲ್ಲಟ, ತ್ರಿಪಕ್ಷಕವಾಟದ ಬೆಳವಣಿಗೆ ಆಗದ, ಫೆಲಾಟ್ಸನ ನಾಲ್ಕು ವೈಪರೀತ್ಯಗಳು ಇರುವವರಲ್ಲಿ ನೀಲಿಗಟ್ಟುವಿಕೆ ದಟ್ಟವಾಗಿರುವುದು ಇಂಥ ಮಕ್ಕಳನ್ನು ನೀಲಿಗಟ್ಟುವಿಕೆ ಮೇಲಿಂದ ಮೇಲೆ ಆದರವಿಂದ ಅಪ್ಪಿಕೊಳ್ಳುವುದು. ಸಕಾಲದಲ್ಲಿ ಸೂಕ್ತ ಚಿಕಿತ್ಸೆಯಿಂದ ಇಂಥ ಮಕ್ಕಳು ವಂಚಿತರಾದಲ್ಲಿ ಪ್ರಾಣಪಕ್ಷಿ ಹಾರಿಹೋಗಬಹುದು. ಸೆಳವಿನ ಸುಳಿಯಲ್ಲಿ ಸಿಕ್ಕ ಮಕ್ಕಳಲ್ಲೂ ನೀಲಿಗಟ್ಟುವಿಕೆ ಕಾಣಿಸಿಕೊಳ್ಳುವುದು. ಹುಟ್ಟು ಹೃದಯ ರೋಗಗಳಲ್ಲಿ ನೀಲಿಗಟ್ಟುವಿಕೆ

ಪ್ರಜ್ಞಾಹೀನತೆ, ಸತ್ವ ಮತ್ತು ಶಕ್ತಿ ಹೀನತೆಗಳಲ್ಲಿ ಅಂತ್ಯಗೊಳ್ಳುವುದು. ಹಾಗು ಮುದ್ದೆ ಬಸವಣ್ಣನಂತೆ ಆಗುವುದು.

೨. ಉಬ್ಬಿ ಬಾಗಿರುವ ಉಗುರ

ಎದ್ದು ಕಾಣುವ ಉಬ್ಬಿ ಬಾಗಿದ ಉಗುರು ಇರುವ ಮಕ್ಕಳು ನೀಲಿಗಟ್ಟು ವಿಕೆಯ ಹುಟ್ಟು ಹೃದಯ ರೋಗದಿಂದ ಬಳಲುತ್ತಿರುವದನ್ನು ಸ್ಪಷ್ಟಪಡಿಸುವದು. ದೀರ್ಘಕಾಲಿಕ ಆಮ್ಲಜನಕದ ಕೊರತೆಯ ಪೂರೈಕೆಯೇ ಇದಕ್ಕೆ ಕಾರಣ. ಉಸಿರಾಟದ ತೊಂದರೆಯು ಇದರಿಂದಲೇ ಉದ್ಭವಿಸುವದು ಪರಿಶ್ರಮದ ಚಟುವಟಿಕೆಗಳಿಗೆ ಅಡ್ಡಿಯನ್ನೊಡ್ಡುವದು.

೩. ಕುಕ್ಕರಗಾಲಿನಲ್ಲಿ ಕೂಡುವದು

ಕೆಲವು ಮಕ್ಕಳು ಆಡುವಾಗ, ಓಡುವಾಗ, ಉಸಿರುಗಟ್ಟಿದಂತಾಗಿ, ಸರಕ್ಕನೆ ಕುಳಿತು ಸುಧಾರಿಸಿಕೊಳ್ಳುವ ಮೊಣಕಾಲು ಮಡಚಿಕೊಂಡು ಕುಂಡೆಯ ಮೇಲೆ ಕುಡುವದು ಫೆಲಾಟ್ಸನ ನಾಲ್ಕು ವೈಪರಿತ್ಯೆಗಳಿರುವ ರೋಗದ ಒಂದು ಲಕ್ಷಣ. ಹಾಗೆ ಕುಳಿತಾಗ ಆಯಾಸ ಕಡಿಮೆ ಆಗುವದು. ಇಂಥವರಲ್ಲಿ ಯಾವಾಗಲೂ ಆಮ್ಲಜನಕದ ಕೊರತೆಯ ಕೊರಗು ಇರುವದರಿಂದಾಗಿ ಬೆಳವಣಿಗೆ ಕುಂಠಿತಗೊಳ್ಳುವದು. ನರಪೇತನ ನಾರಾಯಣನಂತೆ ಕಾಣುವದು. ಮೇಲಿಂದ ಮೇಲೆ ಸೊಂಕಿನ ಸುಳಿಯಲ್ಲಿ ಈ ಮಕ್ಕಳು ಗಿರಕಿ ಹೊಡೆಯುವರು.

೪. ಹೃತ್ಕುಕ್ಷಿಯ ಹೊರೆ

ಕಿರಿದುಗೊಂಡ ಹೃತ್ಕವಾಟ ಮತ್ತು ಕಿರಿದುಗೊಂಡ ಹೃದ್ಧಮನಿಗಳಿಂದಾಗಿ ಎಡ ಹೃತ್ಕುಕ್ಷಿಗೆ ಹೆಚ್ಚುವರಿ ಕೆಲಸ ಬೀಳುತ್ತದೆ. (ಸಂಕೋಚನ ಹೊರೆ) ಇದನ್ನು ಸಹನೆಯಿಂದ ಸಹಿಸುವ ಶಕ್ತಿ ಎಡ ಹೃತ್ಕುಕ್ಷಿಗೆ ಇರುವ ಪ್ರಯುಕ್ತ ಇವರ ಲಕ್ಷಣಗಳಾವವು ಪ್ರಕಟಗೊಳ್ಳುವದಿಲ್ಲ. ಆದರೆ ಈ ಹೊಂದಾಣಿಕೆಯ ತಾಳ ಒಮ್ಮಿಂದೊಮ್ಮೆಲೇ ತಪ್ಪುವದರಿಂದಾಗಿ ಮರಣ ಒಮ್ಮೆಲೇ ಅಪ್ಪಿಕೊಳ್ಳಬಹುದು. ಬಲ ಹೃತ್ಕುಕ್ಷಿಯ ಮೇಲೆ ಇಂಥಹ ಹೆಚ್ಚುವರಿ ಕೆಲಸ ಬಿದ್ದಾಗ ಅದು ಎಚ್ಚರಿಕೆಯ ಗಂಟೆಯನ್ನು ಮೊಳಗಿಸುವದು. ಹೀಗಾಗಿ ಪರಿಶ್ರಮದ ಉಬ್ಬಸ, ದಣಿವು, ನಿತ್ರಾಣ, ನೀಲಿಗಟ್ಟುವಿಕೆ ತಲೆದೋರುವವು.

ವ್ಯಾಕೋಚನ ಹೊರೆ ತೆಗೆದ ಸಂಪರ್ಕನಾಳ, ರಂಧ್ರಗೊಂಡ ಹೃತ್ಕರಣದ ತೆರೆ, ರಂಧ್ರಗೊಂಡ ಹೃತ್ಕುಕ್ಷಿಯ ತೆರೆಗಳಲ್ಲಿ ವ್ಯಾಕೋಚನ ವೇಳೆಯಲ್ಲಿ ಎಡ ಹೃತ್ಕುಕ್ಷಿಯಲ್ಲಿ ಹೆಚ್ಚು ರಕ್ತ ಸಂಗ್ರಹವಾಗುವದು. ಹೀಗಾಗಿ ಹೃದಯ ಹಿಗ್ಗುವದು. ಶೃಂಗಸ್ಥಳದಲ್ಲಿ ವ್ಯಾಕೋಚನ ಮರ್ಮರ ಕೇಳಿ ಬರುವುದು.

೫. ಕಿರಿದುಗೊಂಡ ಹೃದ್ಧಮನಿ

ಸ್ಥಾನಪಲ್ಲಟಗೊಂಡ ದೊಡ್ಡ ರಕ್ತನಾಳಗಳು ಇರುವ ಪ್ರಸಂಗಗಳಲ್ಲಿ ಹೃದಯದಿಂದ ರಕ್ತ ಹೊರಹಾಕುವಿಕೆ ಅಸಮರ್ಪಕವಾಗುವುದು. ಹೀಗಾಗಿ ರಕ್ತ ತುಂಬಿದ ಹೃದಯ ಸೋಲುವಿಕೆಗೆ ಹಾದಿಯಾಗುವುದು.

೬. ಕುಂಠಿತ ಬೆಳವಣಿಗೆ

ಹುಟ್ಟು ಹೃದಯ ರೋಗಗಳು ದೇಹದ ಕುಂಠಿತ ಬೆಳವಣಿಗೆಗೆ ಕಾರಣೀಭೂತವಾಗುವವು. ಉದಾಹರಣೆ—ತೆರೆದ ಸಂಪರ್ಕನಾಳ,

ರಂಧ್ರಗೊಂಡ ಹೃತ್ಕರಣದ ತೆರೆ ಅಥವಾ ಕಿರಿದುಗೊಂಡ ಹೃದ್ಧಮನಿ ಇರುವವರಲ್ಲಿ ಕಾಲಾನುಕ್ರಮತೆಗೆ ತಕ್ಕ ಬೆಳವಣಿಗೆ ಆಗುವುದಿಲ್ಲ.

೭. ಉಸಿರಾಟದ ಸೋಂಕಿನ ಉಪಟಳ

ಹುಟ್ಟು ಹೃದಯ ರೋಗಗಳ ಬಾಹುಬಂಧನದಲ್ಲಿ ಬಂಧಿತರಾದ ಮಕ್ಕಳು ಮೇಲಿಂದ ಮೇಲೆ ಉಸಿರಾಟದ ಸೋಂಕಿನ ಸುಳಿಯಲ್ಲಿ ಗಿರಕಿ ಹೊಡೆಯುವರು.

೮. ನೆಲೆನಿಂತ ನಂಜು

ಹಲ್ಲು, ಕಿವಿ, ಟಾನಸಿಲ್‌ಗಳಲ್ಲಿ ನೆಲೆನಿಂತ ನಂಜು ಅನೇಕ ತೊಡಕು ತೊಂದರೆಗಳನ್ನು ಆಹ್ವಾನಿಸುವವು. ಹುಟ್ಟು ಹೃದಯ ರೋಗಿಗಳಲ್ಲಿ ಕಿವಿ ಸೋರುತ್ತಿದ್ದರೆ ಮೆದುಳಿನ ಪೊರೆಯುರಿತ, ಮಿದುಳ ಕುರುಗಳ ಹಾವಳಿಯನ್ನು ಹೆಚ್ಚಿಸುವದು. ಈ ನತದೃಷ್ಟರಲ್ಲಿ ಕ್ಷಯ ರೋಗ ಮತ್ತು ಅದರಿಂದ ಉದ್ಭವಿಸುವ ತೊಡಕುಗಳು ಜಾಸ್ತಿ. ಹೃದಯದ ಒಳಪೊರೆಯುರಿತಗಳ ಉಪಟಳಗಳ ಒಡನಾಟ ಇವರಲ್ಲಿ ಹೆಚ್ಚು.

೯. ಊನಗಳ ನಂಟು

ಮಾರ್ಫಾನ ಲಕ್ಷಣ ಕೂಟ, ಡೌನನ ಲಕ್ಷಣ ಕೂಟ, ಟರ್ನರ್‌ನ ಲಕ್ಷಣ ಕೂಟ, ಒಳಾಂಗಗಳ ತಿರುವು ಮುರುವುಗಳ ನಂಟು ಹುಟ್ಟು ಹೃದಯ ರೋಗಗಳೊಡನೆ ಇದ್ದು, ಅವರ ಬದುಕಿನ ಅಳಿವು ಉಳಿವುಗಳ ಮೇಲೆ ಸಾಕಷ್ಟು ಪ್ರಭಾವ ಬೀರುವವು. ಹೃದಯ ರೋಗಗಳು ಗಮನ ಸೆಳೆಯುವ ಮರ್ಮರಗಳಿಲ್ಲದಾಗ ರೋಗ ನಿಧಾನದಲ್ಲಿ ಹಾದಿ ತಪ್ಪಿಸುವವು. ಹೃದಯ ಹಿಗ್ಗುವಿಕೆ ಮತ್ತು ಹೃದಯ ಸೋಲುವಿಕೆ ಸದ್ದಿಲ್ಲದೆ ಹೆಜ್ಜೆ ಹಾಕಲು ಅವಕಾಶ ನೀಡುವವು. ಅಹಿತಕರ ಘಟನೆಗಳು ಜರುಗಲು ಅನುವು ಮಾಡುವವು.

ರೋಗ ನಿದಾನ

ಹುಟ್ಟು ಹೃದಯ ರೋಗಗಳನ್ನು ಖಚಿತವಾಗಿ ಕಂಡು ಹಿಡಿಯುವುದು ತಜ್ಞ ವೈದ್ಯರ ಆದ್ಯಕರ್ತವ್ಯ ಇದಕ್ಕೆ ಹೃದ್ರೋಗದ ವಿಶೇಷ ಕೇಂದ್ರಗಳಲ್ಲಿರುವ ಎಲ್ಲ ಉತ್ಕೃಷ್ಟ ಉಪಕರಣಗಳು ಬೇಕಾಗಿಲ್ಲ. ನಿಖರವಾದ ರೋಗ ನಿದಾನಕ್ಕೆ ರೋಗದ ಇತಿಹಾಸ, ಪರಿಪೂರ್ಣ ಪರೀಕ್ಷೆ, ಎದೆಯ ಕ್ಷ-ಕಿರಣ, ವಿದ್ಯುತ್ ಹೃದಯ ಚಿತ್ರ ಸಾಕು.

ರೋಗಿ, ರೋಗಿಯ ಸಂಬಂಧಿಕರು ಹೇಳುವದನ್ನು ತಾಳ್ಮೆಯಿಂದ ವೈದ್ಯರು ಕೇಳಬೇಕು, ಹೆಚ್ಚಿನ ಮಾಹಿತಿಬೇಕಾದಲ್ಲಿ ಬಿಚ್ಚು ಮನಸ್ಸಿನಿಂದ ಪ್ರಶ್ನಿಸಬೇಕು. ನೀಲಿಗಟ್ಟುವಿಕೆ, ಸರಿಯಾಗಿ ಆಹಾರ ತೆಗೆದು ಕೊಳ್ಳದೆ ಇರುವದು, ಕುಕ್ಕರಗಾಲಿನಿಂದ ಕೂಡುವದು, ಕುಂಠಿತ ಬೆಳವಣಿಗೆ, ಆಯಾಸವಾಗುವದು, ಪದೇ ಪದೇ ಕಾಡುವ ಉಸಿರಾಟದ ಸೋಂಕುಗಳು, ಹೃದಯ ಸೋಲುವಿಕೆಗೆ ಸಂಬಂಧಿಸಿದ ತೊಡಕು ತೊಂದರೆಗಳು ಹುಟ್ಟು ಹೃದಯ ರೋಗದ ಇರುವಿಕೆಗೆ ಸುಳಿವು ನೀಡಬಹುದು. ಕಾರಣ ಸಹನೆಯಿಂದ ರೋಗದ ಇತಿಹಾಸ ಸಂಗ್ರಹಿಸುವುದು ಮುಖ್ಯ. ಕೆಲವೊಂದು ಊನಗಳು, ನಿಶ್ಚಿತ ಹುಟ್ಟು ಹೃದಯ ರೋಗದ ಪ್ರಕಾರಗಳು ಕೂಡ ನಿಕಟ ಸಂಬಂಧ ಹೊಂದಿರುವದರಿಂದ ಪರೀಕ್ಷೆ ಮಾಡುವಾಗ ಅವುಗಳತ್ತ ಲಕ್ಷ ಕೊಡಬೇಕು.

ಹೃದ್ರೋಗ ನಿರ್ಧಾರಕಗಳು

ಅ) ಪ್ರಧಾನ ನಿರ್ಧಾರಕಗಳು

೧. ೩ ಅಥವಾ ೪ ನೇ ಗ್ರೇಡಿನ ಸಂಕೋಚನ ಮರ್ಮರ ಜೊತೆಗೆ ತಾಕು ಮರ್ಮರ.
೨. ವ್ಯಾಕೋಚನ ಮರ್ಮರ
೩. ಹೃದಯ ಸೋಲುವಿಕೆ +
೪. ನೀಲಿಗಟ್ಟುವಿಕೆ
೫. ಅಸಮಾನ್ಯ ವಿದ್ಯುತ್ ಹೃದಯ ಚಿತ್ರ.

ಬ) ಸಹಾಯಕ ನಿರ್ಧಾರಕಗಳು

೧. ತಾಕು ಮರ್ಮರ ಇಲ್ಲದೆ ಮೂರನೇ ಗ್ರೇಡಿನ ಸಂಕೋಚನ ಮರ್ಮರ
೨. ಅಸಮಾನ್ಯ ವಿದ್ಯುತ್ ಹೃದಯ ಚಿತ್ರ.
೩. ಹೃದಯ ಸೋಲುವಿಕೆ ±
೪. ರಕ್ತದೊತ್ತಡದ ವೈಪರಿತ್ಯಗಳು
೫. ಅಸಮಾನ್ಯ ಕ್ಷ-ಕಿರಣ ಚಿತ್ರ
೬. ಅಸಮಾನ್ಯ ೨ನೇ ಶ್ವಾಸ ಶಬ್ಧ

ಪ್ರಧಾನ ನಿರ್ಧಾರಕಗಳಲ್ಲಿಯ ಒಂದು, ಸಹಾಯಕ ನಿರ್ಧಾರಕಗಳಲ್ಲಿಯ ಎರಡು ಅಂಶಗಳು. ಹೃದ್ರೋಗ ಇರುವದನ್ನು ಖಚಿತ ಪಡಿಸುವವು. ಇದು ಸಂಜಾತವೋ ಅಥವಾ ಅರ್ಜಿತವೋ ಎಂಬುದನ್ನು ಸುದೀರ್ಘ ಇತಿಹಾಸ ಸಂಗ್ರಹ ಮತ್ತು ಭೌತಿಕ ಪರೀಕ್ಷೆಗಳಿಂದ ನಿರ್ಧರಿಸಬಹುದು. ವರ್ಷದೊಳಗಿನ ಮಕ್ಕಳಲ್ಲಿ ಮರ್ಮರ ಕೇಳಿದರೆ, ನೀಲಿಗಟ್ಟುವಿಕೆ ಮತ್ತು ಎದೆ ಚಕ್ಕೆಬದಿಯ ಮರ್ಮರಗಳು ಯಾವಾಗಲೂ ಹುಟ್ಟು ಹೃದಯ ರೋಗಗಳು ಇರುವದನ್ನು ಸೂಚಿಸುತ್ತವೆ ಎಂಬುದನ್ನು ಮರೆಯಬಾರದು. ಹುಟ್ಟು ಹೃದಯ ರೋಗಗಳು ಈಚೀಚೆಗೆ ಹೆಚ್ಚಾಗುತ್ತಿರುವಂತೆ ತೋರುತ್ತದೆ. ರೋಗ ನಿದಾನ ವಿಧಾನ, ಚಿಕಿತ್ಸೆ ಸೌಲಭ್ಯಗಳ ಅನುಕೂಲ ಉತ್ತಮಿಸಿರುವುದು ಇದಕ್ಕೆ ಕಾರಣವಾಗಿರಬಹುದು.

ಉಪಚಾರ

೧) ರಕ್ತ ಹೀನತೆ ತಲೆದೋರದಂತೆ ಸಕಾಲಕ್ಕೆ ಸೂಕ್ತ ಚಿಕಿತ್ಸೆ ನೀಡುವುದು.

೨) ಜೀವಸತ್ವಗಳು, ಲವಣಾಂಶಗಳು, ಸಸಾರಜನಕಗಳು ಸಾಕಷ್ಟು ಪ್ರಮಾಣದಲ್ಲಿರುವ ಸಮತೋಲ ಆಹಾರವನ್ನು ಕೊಟ್ಟು, ಜೀವನಾವಶ್ಯಕಗಳನ್ನು ಪೂರೈಸುವುದು, ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಡುವುದು.

೩) ನಿರ್ಜಲೀಕರಣ ತಲ್ಲಣಿಸಿಕೆ ಮತ್ತು ರಕ್ತ ಕರಣೆಗಟ್ಟಿ ತಲೆದೋರಬಹುದಾದ ತೊಡಕು ತೊಂದರೆಗಳಿಗೆ ಹಾದಿಮಾಡುವುದರಿಂದಾಗಿ, ನಿರ್ಜಲೀಕರಣ ಹಣಕೆ ಹಾಕದಂತೆ ಸಾಕಷ್ಟು ದ್ರವ ಆಹಾರ, ನೀರನ್ನು ಕೊಡಬೇಕು. ಹುಟ್ಟು ಹೃದಯ ರೋಗಗಳಲ್ಲಿ ಅತಿಸಾರ ಕಾಣಿಸಿಕೊಂಡಲ್ಲಿ ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು.

೪) ನಿಶ್ಚಿತ ಚಿಕಿತ್ಸೆ: ಶಸ್ತ್ರ ಚಿಕಿತ್ಸೆ ಅವಶ್ಯವೆಂದು ಕಂಡುಬಂದಲ್ಲಿ, ಶಸ್ತ್ರಚಿಕಿತ್ಸಾ ಪೂರ್ವಸಿದ್ಧತೆಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ಮಾಡಿ ಯೋಜನಾ ಬದ್ಧ ಚಿಕಿತ್ಸೆಯನ್ನು ಕೈಗೆತ್ತಿಕೊಳ್ಳಲು ಮರೆಯಬಾರದು, ರೋಗಿಯ ಸ್ಥಿತಿಗತಿ, ಸಿಗುವ ಸೌಲಭ್ಯಗಳು, ಲಭ್ಯವಿರುವ ತಾಂತ್ರಿಕ

ನೈಪುಣ್ಯತೆಗಳನ್ನು ಪರಿಗಣಿಸಿ ಶಮನಕ ಅಥವಾ ನಿಯತ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಬೇಕು.

ಹುಟ್ಟು ಹೃದಯ ರೋಗಗಳೆಲ್ಲವೂ ಊನಗೊಳಿಸುವುದಿಲ್ಲ ಇವುಗಳಲ್ಲಿ ಎಷ್ಟೋ ಊನಗಳು ತೀರ ಸಣ್ಣವಾಗಿದ್ದು, ಬಾಳಿನಲ್ಲಿ ಮುಂದೆ ಸರಿಹೋಗಿ ಯಾವ ತೊಡಕು ತೋರುವುದಿಲ್ಲ. ಅಲ್ಲದೇ, ಗುಂಡಿಗೆಯ ಊನಗಳ ಶಸ್ತ್ರವೈದ್ಯ ಈಗ ಮಹಾನಗರಗಳ ದೊಡ್ಡ ಆಸ್ಪತ್ರೆಗಳಲ್ಲೂ ಬಹುವಾಗಿ ಮುಂದುವರೆದಿದೆ. ೧೦೦ಕ್ಕೆ ೯೦ ಮಂದಿಗೆ ಶಸ್ತ್ರ ವೈದ್ಯದಿಂದ ಅನುಕೂಲವಿದೆ. ಹುಟ್ಟು ಹೃದಯ ರೋಗದ ಕೂಸಿಗೆ ಹಿಂದೊಂದು ಕಾಣದಿದ್ದ ಸೋಜಿಗದ ಶಸ್ತ್ರವೈದ್ಯನ ಅನುಕೂಲಗಳಿಂದ ಎಲ್ಲರಂತೆ ಬದುಕಿ ಬಾಳುವ ಅವಕಾಶ ಅಪಾರವಾಗಿ ಹೆಚ್ಚಿದೆ. ಹೃದಯ ಊನಗಳನ್ನು ಚಿಕ್ಕಂದಿನಲ್ಲೇ ಕಂಡು ಹಿಡಿಯಲು ಬಲು ಸುಧಾರಿಸಿದ ವಿಧಾನಗಳು ಇಗ ಬಂದಿರುವದರಿಂದ ಬಲಿಯುವ ಮೊದಲೇ ಚಿಕಿತ್ಸೆ ಮಾಡಿಸಲು ಅನುಕೂಲವಾಗಿವೆ. ಬದಕು ಭಯಂಕರವಾಗಿ ಕಂಡರೂ, ದೂರ ಬಾಂದಳದಲ್ಲಿ ಆಶಾಕಿರಣ ಮೂಡಿದೆ. ಭೀಕರತೆ ಮಾಯವಾಗಿದೆ ಬದುಕು ಸಹ್ಯವಾಗಿದೆ.



ಹಿಂಸೆಯಿಂದ ಪ್ರಯೋಜನ ದೊರೆಯದು. ಹಿಂಸೆಯಿಂದ ದೊರೆತ ಫಲವಾದರೂ ಶಾಶ್ವತವಾದುದಲ್ಲ. ಮೂರ್ಖರು ಮಾತ್ರ ಹಿಂಸೆಯಿಂದ, ಆನಂದ ಪಡಬಹುದು.

—ಮಹಾವೀರ

ನಾನಿನ್ನೂ ಬದುಕಿದ್ದೇನೆ

ಗ. ನಾ. ಭಟ್ಟ

(ಸಾಹಸ? ವ್ಯಕ್ತಿ ತನ್ನ ಅದಲನ್ನು ನಿಸರ್ಗದ ಸವಾಲಿಗೆ ಸಮೀಕರಿಸುವ ಪ್ರಯತ್ನ. ಇದರಲ್ಲಿ ಗೆದ್ದವರ ಹೆಸರು ದಾಖಲಾಗುತ್ತದೆ, ಇತರರಿಗೆ ಸ್ಫೂರ್ತಿದಾಯಕವಾಗುತ್ತದೆ. ಸೋತವರ ಹೆಸರು!)

ಅಮೇರಿಕಾದ ವೈನ್ ರಾಜ್ಯದಲ್ಲಿ, ಬೀಲ್ಸ್ ಐಲ್ಯಾಂಡ್ ಮತ್ತು ಜೋನ್ಸ್ ಪಾರ್ಟ್ ದ್ವೀಪಗಳ ಜನಾಂಗ ಜನವರಿ ೨೫, ೧೯೯೧ನ್ನು ವರ್ಷದ ಅತಿ ಚಳಿಯ ದಿನವೆಂದು ಸ್ಮರಿಸಿಕೊಳ್ಳುತ್ತದೆ. ಆ ದಿನಗಳಲ್ಲಿ ಹವಾಮಾನದ ಉಷ್ಣಾಂಶ ೧೭.೭C° ಗಿಂತ ಮೇಲೆ ಏರಲೇ ಇಲ್ಲ. ಮೀನು ಹಿಡಿಯುವವರಲ್ಲಿ ಬಹುಮಂದಿ ಮನೆಯಲ್ಲೇ ನಿಂತರು. ಇಂತಹ ಸಂದರ್ಭದಲ್ಲಿ ರೋಜರ್ ಶ್ಯಾಂಡ್ಲರ್ ಮತ್ತು ಫಿಲ್‌ರೋಸಿ ಎನ್ನುವ ಗೆಳೆಯರಿಬ್ಬರು ಕೊರೆಯುವ ಚಳಿಯಲ್ಲಿ ಸಾಹಸವನ್ನೆಸಗಲು ಮುಂದಾದರು. ಅದಕ್ಕೆ ಕಾರಣ ಅವರಿಗೆ ಹಣದ ಅಗತ್ಯ. ಸಮುದ್ರದ ಕಡಿದಾದ ಬಂಡೆಗಳಲ್ಲಿ ಬಸವನಹುಳುವಿನಂತಿರುವ 'ಪೆರಿವಿಂಕಲ್' ಎಂಬ ಜೀವಿ ತುಂಬಾ ಬೆಲೆಯುಳ್ಳದ್ದಾಗಿದ್ದು ಹಣ ತಂದುಕೊಡುವ ಪದಾರ್ಥವಾಗಿತ್ತು. ಆ ಪೆರಿವಿಂಕಲ್‌ಗಳ ಸಂಗ್ರಹಕ್ಕಾಗಿ ರೋಜರ್ ಮೂರು ಮೀಟರ್ ಉದ್ದಳತೆಯ ಪುಟ್ಟ ದೋಣಿಯೊಂದನ್ನು ತಂದ. ಅದು ಅವನ ಮೃತ ತಂದೆಯದಾಗಿತ್ತು. ಆಮೇಲೆ, ಇದುವರೆಗೆ ಯಾರೂ ಹೋಗದಿದ್ದ ಜಾಗಕ್ಕೆ ಹೋಗಿ ಪೆರಿವಿಂಕಲ್‌ಗಳನ್ನು ಸಂಗ್ರಹಿಸಿ ತರೋಣವೆಂದು ಗೆಳೆಯ ಫಿಲ್‌ಗೆ ಹೇಳಿದ. ಅವನು ಅದಕ್ಕೆ ಸಮ್ಮತಿಸಿದ.

ಅಂತೆಯೇ ೩೧ ವರ್ಷ ವಯಸ್ಸಿನ ರೋಜರ್ ಮತ್ತು ೩೨ ವಯಸ್ಸಿನ ಫಿಲ್ ಬೀಲ್ಸ್ ದ್ವೀಪದ ಕಡಲ ತೀರವನ್ನು ತಲುಪಿದರು ಮತ್ತು ಮೈನಸ್ ೨ ಡಿಗ್ರಿCನ ನೀರಿಗೆ ದೋಣಿಯನ್ನು ಇಳಿಸಿದರು. ಚಳಿಯಿಂದ ಫಿಲ್‌ನ ಮುಖವು ಆಗಲೇ ಕೆಂಪಾಯಿತು. ಸುಮಾರು ಮಧ್ಯಾಹ್ನದ ವೇಳೆಗೆ ಅವರು ತಮ್ಮ ಸಾಹಸ ಯಾತ್ರೆಯನ್ನಾರಂಭಿಸಿದರು. ಸಮುದ್ರ ದಡದಿಂದ ೪೫ ಮೀಟರ್ ದೂರದಲ್ಲಿ ಅವರು ಬಯಸಿದ ಪೆರಿವಿಂಕಲ್‌ಗಳು ಕಾಣಿಸತೊಡಗಿದುವು. ಸುಮಾರು ಎರಡು ಗಂಟೆಗಳ ಕಾಲ ಪೆರಿವಿಂಕಲ್‌ಗಳನ್ನು ಸಂಗ್ರಹಿಸಿದರು. ಅಷ್ಟರಲ್ಲಿ ಎರಡು ಬಂಡೆಗಳು ಮುಗಿದಿದ್ದುವು. ಅವರು

೧೯೯೫ರ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಮೈಕೇಲ್ ಸೀಟನ್ ಅವರ "ಸ್ವಿಮ್ ಫಾರ್ ಲೈಫ್" ಎಂಬ ಲೇಖನದ ಅನುವಾದ.

ಮೂರನೆಯ ಬಂಡೆಗೆ ಹೋಗಲು ಸಿದ್ಧರಾಗುತ್ತಿದ್ದಂತೆ ಸುಮಾರು ೪೫ ಕೋಟಿಯಷ್ಟು ಪೆರಿವಿಂಕಲ್‌ಗಳು ಸಂಗ್ರಹವಾಗಿದ್ದವು. ಈ ಪೆರಿವಿಂಕಲ್‌ಗಳನ್ನು ಕಲೆಹಾಕುವಾಗ ಸಮುದ್ರದಭರತ ಜೋರಾಗಿ ಬಂದು ಬಂಡೆಗಳನ್ನು ಮುಚ್ಚಿಬಿಡುತ್ತಿದ್ದುವು. ಈ ಉಬ್ಬರವನ್ನು ತಪ್ಪಿಸಿಕೊಳ್ಳುತ್ತಾ, ಬೆನ್ನು ಮತ್ತು ಮೊಳಕಾಲಿಗುಂಟಾದ ಸೀತದ ಬಾಧೆಯನ್ನು ಸಹಿಸುತ್ತಾ ಮೂರನೆಯ ಬಂಡೆಯನ್ನು ತಲಪಿದರು.

ಆ ಬಂಡೆಯನ್ನವರು ಸೇರುತ್ತಿದ್ದಂತೆ ರೋಜರ್ ಲಂಗರುರಹಿತ ದೋಣಿಯನ್ನು ನೀರಿನಿಂದ ಹೊರಗೆಳೆದ. ಅಂತೆಯೇ ಅವರು ತಮ್ಮ ಕೆಲಸದಲ್ಲಿ ಮಗ್ನರಾದರು. ಕೆಲಸದ ತನ್ಮಯತೆಯಲ್ಲಿ ಆ ಕ್ಷಣ ಅವರು ತಮ್ಮ ಪುಟ್ಟ ದೋಣಿಯನ್ನು ಮರೆತರು. ಅಷ್ಟರಲ್ಲಿ ಭಯಂಕರ ಬಿರುಗಾಳಿಯೊಂದು ಬಂದು ದೋಣಿಯನ್ನು ತಾಕಿತು. ಅವರ ಬುಟ್ಟಿಗಳಲ್ಲೆಲ್ಲಾ ನೀರು ತುಂಬಿಕೊಂಡಿತು. ಫಿಲ್ ತನ್ನ ಬುಟ್ಟಿಯನ್ನು ಬರಿದಾಗಿಸುವುದಕ್ಕೆ ಬೋಟ್ ಕಡೆಗೆ ಹೊರಟ. ಅದು ಅಲ್ಲಿಲ್ಲದಿರುವುದರಿಂದ ಫಿಲ್ "ಹೇ ರೋಜರ್ !" ಎಂದು ಕೂಗಿದ. ಆ ದೋಣಿಯೊಡನೆ ಏನು ಮಾಡುತ್ತಿದ್ದಿಯೆಂದು ರೋಜರ್ ಫಿಲ್‌ನನ್ನು ಕೇಳುತ್ತಿದ್ದಂತೆ ಅವನು ಅದು ಅಲ್ಲಿಲ್ಲದಿರುವುದನ್ನು ಗಮನಿಸಿದ. ಮರುಕ್ಷಣದಲ್ಲಿ ಅವರಿಬ್ಬರೂ ಅದು ಮುನ್ನುಗ್ಗುತ್ತಿರುವ ಸಮುದ್ರದ ಅಲೆಗಳಲ್ಲಿ ಗಾಳಿಯಿಂದ ಸಮುದ್ರದ ಕಡೆಗೆ ತಳ್ಳಲ್ಪಡುತ್ತಿರುವುದನ್ನು ನೋಡಿದರು.

ಅಪಾಯಕರ ಸನ್ನಿವೇಶವೊಂದು ಅವರಿಗೆ ಎದುರಾಯಿತು. ಆಗವರು ಬಂಡೆಗಳ ರಾಶಿ ಮೇಲೆ ಕೊರೆಯುವ ಚಳಿಯಲ್ಲಿ ವೇಗವಾಗಿ ಭೋರ್ಗರೆಯುತ್ತ ಏರಿಬರುತ್ತಿದ್ದ ಸಮುದ್ರದ ಉಬ್ಬರದೊಂದಿಗೆ ಇದ್ದರು. ಅಂದು ಇಡೀ ದಿನ ಬೇರೆ ಯಾವ ದೋಣಿಯೂ ಅತ್ತ ಬರಲಿಲ್ಲ. ಆಗ ರೋಜರ್ ಫಿಲ್ ಕಡೆಗೆ ತಿರುಗಿ ನಾವೀಗ ಅಪಾಯದ ಸುಳಿಯಲ್ಲಿ ಸಿಲುಕಿದ್ದೇವೆ" ಎಂದ. ದೋಣಿ ಅವರಿಗೆ ಒಮ್ಮೆ ಕಾಣಿಸುತ್ತಾ ಇನ್ನೊಮ್ಮೆ ಮುಳುಗುತ್ತಾ ವಂಚಿಸುತ್ತಿತ್ತು. ಈ ವಿಷಮ ಸನ್ನಿವೇಶದಲ್ಲಿ ಫಿಲ್ ಹತಾಶನಾಗಿದ್ದರೂ ಆ ಭಾವವನ್ನು ತೋರಗೊಡದೆ ರೋಜರ್‌ಗೆ ದೋಣಿಯನ್ನು ಮರೆತು ಬಿಡು. ಈಜಿಕೊಂಡು ಹೋಗೋಣ' ಎಂದ. 'ತಾನು ಹಾಗೆ ಮಾಡಲಾರೆ' ಎಂದು ರೋಜರ್ ಮಾರ್ನುಡಿದ. ಹೀಗೆ ಮಾರ್ನುಡಿದ ರೋಜರಿಗೆ ತಾನವನ ಸಹಾಯಕ್ಕಾಗಿ ಈಜದಿದ್ದರೆ ಕಡಿದಾದ ಬಂಡೆಯಂಚಿನಲ್ಲಿ ಇದ್ದ ಆತ ಸಾಯುವುದು ಖಂಡಿತವೆಂದು ಫಿಲ್ ಯೋಚಿಸಿದ. ಅಂತೆಯೇ ಫಿಲ್ ನಾವಿಬ್ಬರು ಒಟ್ಟಿಗೆ ಹೋಗೋಣ. ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳೋಣ' ಎಂದು ರೋಜರ್‌ಗೆ ಹೇಳಿದ.

ಈಜುವ ಸಲುವಾಗಿ ಸಮುದ್ರಕ್ಕೆ ನೆಗೆಯಲು ನಾಲ್ಕು ಸಲ ಯತ್ನಿಸಿದರು. ಆದರೆ ಪ್ರತಿಸಾರಿಯೂ ಹಿಂಜರಿದರು. ಅಂತಿಮವಾಗಿ ಅಂದರೆ ಐದನೆ ಸಾರಿ ಈಜಲು ನೆಗೆಯುವುದೆಂದೇ ನಿರ್ಧರಿಸಿದರು. ನೀರು ಬೇಗ ಬೇಗ ಅವರನ್ನು ಸಮೀಪಿಸುತ್ತಿತ್ತು. ಸಮುದ್ರದ ದಡ ಸುಮಾರು ೧೮೦ ಮೀಟರ್‌ಗಳಷ್ಟು ದೂರದಲ್ಲಿತ್ತು. ಸಮುದ್ರದಲ್ಲಿ ಈಜಲು ಸಿದ್ಧರಾದ ಅವರು ತಮ್ಮ ಮೈಮೇಲಿನ ಬಟ್ಟೆ, ಕೋಟು, ಬೂಟುಗಳನ್ನು ಕಳಚಿದರು. ಅದುವರೆಗೆ ಒಟ್ಟುಗೂಡಿಸಿದ್ದ ಪೆರಿವಿಂಕಲ್‌ಗಳನ್ನು ಒಂದು ಸುರಕ್ಷಿತ ಬಂಡೆಯಂಚಿನಲ್ಲಿ ಇಟ್ಟರು.

ಆಮೇಲೆ ರೋಜರ್ ಮೊಣಕಾಲೂರಿ ನಮಿಸಿ ಪ್ರಾರ್ಥಿಸಿದ. ಫಿಲ್‌ನನ್ನು ಅಪ್ಪಿಕೊಂಡು ಆತ ತನ್ನ ಉತ್ತಮ ಗೆಳೆಯನೆಂದು ಹೇಳಿದ." ಅಲ್ಲದೆ ತಾನು ಮೂರರವರೆಗೆ ಎಣಿಸುವೆನೆಂದೂ ಅಷ್ಟರಲ್ಲಿ ಇಬ್ಬರೂ ಸಮುದ್ರಕ್ಕೆ ಜಿಗಿಯುವುದೆಂದೂ ಅರಿಕೆ ಮಾಡಿದ.

ರೋಜರ್ "ಒಂದು ಎರಡು...." ಮೂರು ಎಂದು ಹೇಳುವುದರೊಳಗೇ ಫಿಲ್ ಸಮುದ್ರಕ್ಕೆ ಜಿಗಿದುಬಿಟ್ಟ. ನೀರಿನ ಒಳಕ್ಕೆ ಪ್ರವೇಶಿಸಿದ ಅವನಿಗೆ ಯಾವುದೋ ಗೋಡೆಗೆ ಅಪ್ಪಳಿಸಿದಂತಾಯಿತು. ಮರುಕ್ಷಣದಲ್ಲಿಯೇ ರೋಜರ್ ಅರಚುತ್ತಾ ಸಮುದ್ರಕ್ಕೆ ಜಂಪ್ ಮಾಡಿದ ಸದ್ದು ಕೇಳಿಸಿತು. ಒಬ್ಬ ಮನುಷ್ಯ ನೀರಿನೊಳಗೆ ಎಷ್ಟು ಹೊತ್ತು ಇರಬಲ್ಲ" ಎಂದು ಫಿಲ್ ಯೋಚಿಸಿದ. ಐದು ಅಥವಾ ಹತ್ತು ನಿಮಿಷ ಇರಬಲ್ಲ" ಎಂದು ತನ್ನೊಳಗೆ ತಾನೇ ಅಂದುಕೊಂಡ.

ಗಾಳಿಗಿಂತ ಸಮುದ್ರದ ನೀರೇ ಬೆಚ್ಚಗಿದ್ದದರಿಂದ ಅಲ್ಲಿಯೇ ಸ್ವಲ್ಪ ವೇಳೆ ಇರುವೆನೆಂದು ಫಿಲ್ ಯೋಚಿಸಿದ. ಹಾಗೆಯೇ ರೋಜರ್ ಕಡೆಗೆ ನೋಡಿ ಅವನು ಈಜಲು ಹೆದರುತ್ತಿಲ್ಲವೆಂದೂ, ಬೇಗನೆ ದಡ ತಲುಪುವೆನೆಂದೂ ತಿಳಿದು ಫಿಲ್ ಒಂಟಿಯಾಗಿ ಬೇಗ ಬೇಗ ಈಜ ತೊಡಗಿದ. ಸುಮಾರು ಅರ್ಧದಷ್ಟು ಕ್ರಮಿಸಿದ ಮೇಲೆ ಫಿಲ್‌ನ ಕೈಕಾಲುಗಳು ಚಲಿಸದಾದವು. ತಾನು ದಡ ತಲುಪಲಾರೆ ಎಂದುಕೊಳ್ಳುತ್ತಿದ್ದಂತೆ ಫಿಲ್ ಕಡಿಮೆ ನೀರಿದ್ದ ಜಾಗವನ್ನು ತಲುಪಿದ್ದ. ರೋಜರ್ ಕಡೆಗೆ ಹಿಂತಿರುಗಿ ನೋಡಿ 'ಬಾ ಬಾ' ಎಂದು ಕೂಗಿದ. ಫಿಲ್‌ನ ಒದ್ದೆಯಾದ ವೈಚರ್ಮ ತೀಕ್ಷ್ಣ ಗಾಳಿಗೆ ಗಡ್ಡೆಗಟ್ಟಲಾರಂಭಿಸಿತ್ತು. ಆದರೂ ರೋಜರ್‌ಗೆ ಅಪಾಯವಾಗುವಂತಿದ್ದರೆ ರೋಜರ್‌ಗಾಗಿ ಮತ್ತೆ ಈಜಲು ಸಿದ್ಧನಾಗಿದ್ದ.

ದಡಕ್ಕೆ ೧೫ ಮೀಟರ್ ದೂರವಿರುವಾಗ ಶ್ವಾಸೋಚ್ಛ್ವಾಸವನ್ನು ಸರಿಪಡಿಸಿಕೊಳ್ಳಲು ರೋಜರ್ ಬೆನ್ನು ಅಡಿಮಾಡಿ ಈಜಲಾರಂಭಿಸಿದ್ದ. ಆಗಂತೂ ಆತ ತುಂಬಾ ನಿಶ್ಶಕ್ತನಾಗಿದ್ದ. ಕೆಲವೇ ತಿಂಗಳ ಹಿಂದೆ ನಿಧನನಾಗಿದ್ದ ತನ್ನ ತಂದೆಯ ಜಾಗಕ್ಕೆ ತಾನೂ ಹೋಗಲಿರುವೆನೆಂದೂ, ತನ್ನ ಹೆಂಡತಿ ಮಕ್ಕಳನ್ನು ತಾನಿನ್ನು ನೋಡುವುದೇ ಇಲ್ಲವೆಂದು ಯೋಚಿಸಿದ. ಹೀಗೆ ಯೋಚಿಸುತ್ತಿದ್ದಂತೆ ಅವನಿಗೆ ಆಶ್ಚರ್ಯವಾಗುವಂತೆ ಅವನ ಪಾದ ದಡದ ತಳವನ್ನು ಸ್ಪರ್ಶಿಸಿತು. ಪ್ರವಾಹದ ಸಹಾಯವೋ ಅನ್ನುವಂತೆ ಪ್ರವಾಹದಿಂದ ತಳ್ಳಲ್ಪಟ್ಟ ಆತ ಹೇಗೋ ತೆವಳಿಕೊಂಡು ದಡವನ್ನು ಸೇರಿದ. ಆದರೆ ಅಷ್ಟರಲ್ಲಿ ಆತ ಮುಂದೆ ಚಲಿಸಲಾಗದಷ್ಟು ಶಕ್ತಿಗುಂದಿದ್ದ.

ಸಮುದ್ರ ಸಾಹಸ ಕೈಗೊಳ್ಳುವುದಕ್ಕೆ ಮೊದಲು ಫಿಲ್ ಟ್ರಕ್ಕನ್ನು ತಂದಿದ್ದ. ಅದನ್ನು ದಡದ ಸಮೀಪದಲ್ಲಿ ಕಾಟೇಜೊಂದರಲ್ಲಿ ನಿಲ್ಲಿಸಿದ್ದ. ಈಗ ಅದನ್ನು ತರಲೆಂದು ಅತ್ತ ಹೊರಟ. ಆಗ ಅವನ ಬಟ್ಟೆ ಚಳಿಯಿಂದ ಕಲ್ಲಿನಂತೆ ಗಟ್ಟಿಯಾಗಿ ಹೋಗಿತ್ತು. ಕೈಕಾಲುಗಳಿಗೆ ಜೋಮು ಹಿಡಿದಿದ್ದವು. ಆಗವನು ಜೋರಾಗಿ ನಡೆಯಲು ಅಸಮರ್ಥನಾಗಿದ್ದ. ಜಾರುವ ಕಲ್ಲುಬಂಡೆಯ ಮೇಲೆ ಬೀಳುತ್ತಾ, ಏಳುತ್ತಾ ಕೊನೆಗೆ ಭೂಮಿಯ ಮೇಲೆ ಅಂಗಾತನಾಗಿ ಬಿದ್ದ. ಹಾಗೆ ಬಿದ್ದಾಗ ಅವನಿಗೆ ಅದೊಂದು ಸುಖದ ಗಳಿಗೆ ಎನಿಸಿತ್ತು. ಹೀಗೆಯೇ ಕಣ್ಣು ಮುಚ್ಚಿ ಹಾಯಾಗಿ ಮಲಗಿದ್ದಿದ್ದರೆ ಎಂದು ಯೋಚಿಸುವಷ್ಟರಲ್ಲಿ ರೋಜರನ ದುಃಸ್ಥಿತಿ ನೆನಪಾಗಿ ಕೂಡಲೆ ಟ್ರಕ್ ಬಳಿ ಬಂದ. ಅದೃಷ್ಟವಶಾತ್ ಟ್ರಕ್ಕಿನ ಕೀ ಟ್ರಕ್ ಒಳಗಡೆಯೇ ಇತ್ತು. ಕೂಡಲೆ ಗಾಡಿಯನ್ನು ಸ್ಟಾರ್ಟ್ ಮಾಡಿದ.

ನಾರ್ವ್ ಲಿಬಿಯೆನ್ನುವವನು ತನ್ನ ಹೆಂಡತಿಯೊಡನೆ ರಸ್ತೆಗೆ ಸ್ವಲ್ಪ ದೂರದಲ್ಲಿ ವಾಸಿಸಿದ್ದ. ಅಪರಾಹ್ನ ೨.೧೫ರ ಸಮಯಕ್ಕೆ ಅವನ ಮನೆಯ ನಾಯಿ ಬೊಗಳಹತ್ತಿತು. ಆ ಸದ್ದಿಗೆ ಹೊರಗೆ ಬಂದ ನಾರ್ವ್ ಲಿಬಿಗೆ ಒಬ್ಬ ಅಪರಿಚಿತ ವ್ಯಕ್ತಿ ಕಾಣಿಸಿದ. ಅವನ ತಲೆಗೂದಲು ಮತ್ತು ಗಡ್ಡ ನೀರ್ಗಲ್ಲಿನಿಂದ ಅಸ್ತವ್ಯಸ್ತವಾಗಿತ್ತು. ಅವನ ಮೈಚರ್ಮ ಬೆಳ್ಳಗಾಗಿದ್ದಲ್ಲದೆ ಮೇಣದಂತೆ ಹೊಳೆಯುತ್ತಿತ್ತು. ಅವನ ತುಟಿ ನೀಲಿ ಬಣ್ಣವನ್ನು ತಳೆದಿತ್ತು. ಆ ಅಪರಿಚಿತ ವ್ಯಕ್ತಿ, "ನನ್ನ ಗೆಳೆಯ ರೋಜರ್ ಸಮುದ್ರ ದಡದ ತಳದಲ್ಲಿ ಅಪಾಯಕ್ಕೆ ಸಿಲುಕಿದ್ದಾನೆ" ಎಂದು ಕೂಗಿದ. "ಯಾರೂ ರೋಜರ್" ಎಂದು ನಾರ್ವ್ ಕೇಳಿದ. 'ರೋಜರ್ ಶ್ಯಾಂಡ್ಲರ್' ನಾನವನನ್ನು ಬಿಟ್ಟು ಬಂದಿದ್ದೇನೆ. ನಾವಿಬ್ಬರೂ, ಒಟ್ಟಿಗೇ ನೀರಿನಲ್ಲಿದ್ದೆವು ಎಂದ ಕೂಡಲೆ ನಾರ್ವ್ ಲಿಬಿ 'ರೋಜರ್' ತನ್ನ ಹೆಂಡತಿಯ ಚಿಕ್ಕಪ್ಪ ಎಂದು ಗುರುತಿಸಿದ ಹಾಗೆಯೇ ತನ್ನ ಹೆಂಡತಿ ಹಾಗೂ ಮಗಳನ್ನು ಕರೆದು ಆ ಅಪರಿಚಿತನನ್ನು ಹಾಸುಗಂಬಳಿಯಲ್ಲಿ ಸುತ್ತಿ ಮಲಗಿಸುವಂತೆ ಹೇಳಿ ರೋಜರನನ್ನು ಹುಡುಕುವುದಕ್ಕೆ ಹೊರಟ.

ಫಿಲ್ಸ್‌ನ ತಂಗಿ ಸಿಂಡಿ ಫ್ಯಾಗನ್ ಅನ್ನುವವಳು ಬೀಲ್ಸ್ ಐಲ್ಯಾಂಡಿನಲ್ಲಿ ತುರ್ತು ವೈದ್ಯಕೀಯ ತಂತ್ರಜ್ಞಳಾಗಿ ಕಾರ್ಯ ನಿರ್ವಹಿಸುತ್ತಿದ್ದಳು. ಅಲ್ಲಿಯ ನಿವಾಸಿಗಳು ಅವಳಿಗೆ ಆಗಾಗ್ಗೆ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಫೋನ್ ಮಾಡುತ್ತಿದ್ದರು.

ಅಪರಾಹ್ನ ೩-೩೦ಕ್ಕೆ ಓರ್ವ ಯುವತಿಯಿಂದ ಜರೂರು ಚಿಕಿತ್ಸೆಗಾಗಿ ಸಿಂಡಿಗೆ ಫೋನ್ ಬಂತು. ನಿನ್ನ ಅಣ್ಣ....ಅವರು.... ನೀರಿನಲ್ಲಿ ಅಪಾಯದಲ್ಲಿದ್ದಾರೆ. ಕೂಡಲೆ ಬನ್ನಿ" ಎಂದು ಅವಳು ಹೇಳುವಷ್ಟರಲ್ಲಿ ಫೋನ್ ಲೈನ್ ಕೆಟ್ಟುಹೋಯಿತು. ಮಧ್ಯದಲ್ಲೇ ಫೋನ್ ನಿಂತಿದ್ದರಿಂದ ಫಿಲ್ ಇರುವ ಜಾಗವನ್ನೂ ತಾನು ನಾರ್ವ್ ಲಿಬಿಯ ಮಗಳೆಂದೂ, ಹೇಳಲೂ ಅವಳಿಂದ ಆಗಲಿಲ್ಲ.

ಸಿಂಡಿಯು ಜೋನ್ಸ್‌ಪಾರ್ಕ್‌ಲ್ಲಿರುವ ಆ್ಯಂಬುಲೆನ್ಸ್ ಸಿಬ್ಬಂದಿಯನ್ನು ದೂರವಾಣಿ ಮೂಲಕ ಕರೆಯಲು ಯತ್ನಿಸಿದಳು. ಆದರೆ ಫೋನ್ ಕಾರ್ಯನಿರತವಾಗಿತ್ತು. ಆ ಕೂಡಲೆ ಅವಳ ಗಂಡ ಸುದ್ದಿಯನ್ನು ತೆಗೆದುಕೊಂಡು ಕಾರ್ ಓಡಿಸಿದ. ಈ ಮಧ್ಯದಲ್ಲಿ ಸಿಂಡಿಯೂ ಕಾರ್ ತೆಗೆದುಕೊಂಡು ಹೊರಟಳು. ಹೋಗುವಾಗ ಅವಳು ತನ್ನ ಅಣ್ಣ ಫಿಲ್‌ನನ್ನು ಕುರಿತು ಆತ ಬದುಕಿದರೂ ಅವಿಕಲಾಂಗನಾಗಿ ಬದುಕಿರಲಾರ. ಆಗಾಗ ಅವನಿಗೆ ಹೃದಯಾಘಾತವಾಗಬಹುದು. ಪಾರ್ಶ್ವವಾಯು ಬಡಿಯಬಹುದು. ಬುದ್ಧಿಭ್ರಮಣೆಯಾಗಬಹುದು. ಆಗಾಗ ಗಲಿಬಿಲಿಗೊಳಗಾಗಿ, ಅಸಹಾಯಕನಾಗಿ ಕೋಪಿಸಿಕೊಳ್ಳಬಹುದು" ಎಂದು ಮುಂತಾಗಿ ಯೋಚಿಸುತ್ತಿದ್ದಳು. ಆ್ಯಂಬುಲೆನ್ಸ್ ಸಿಬ್ಬಂದಿಯೊಡನೆ ಫಿಲ್‌ನನ್ನು ಹುಡುಕತೊಡಗಿದ ಅವಳಿಗೆ ನಾರ್ವ್‌ಲಿಬಿಯ ಮನೆಯ ಮುಂದೆ ಫಿಲ್‌ನ ಟ್ರಕ್ಕು ನಿಂತಿದ್ದು ಕಾಣಿಸಿತು. ಲಿಬಿಯ ಮನೆಯ ಮುಂದೆ ಸುಮಾರು ೧೦-೧೨ ಜನರ ಆತಂಕಗೊಂಡ ಗುಂಪೊಂದು ಸೇರಿತ್ತು. ಈ ಮಧ್ಯಂತರದಲ್ಲಿ ಲಿಬಿಯು ದಡದ ಸಮೀಪದಲ್ಲಿ ಗೊತ್ತುಗುರಿಯಿಲ್ಲದೆ ತಿರುಗುತ್ತಾ, ಮಂಕುಹಿಡಿದವನಂತಿದ್ದ ರೋಜರನನ್ನು

ಗುರುತಿಸಿ ಮನೆಗೆ ಕರೆ ತಂದಿದ್ದ. ಅಲ್ಲಿ ನೆರೆದಿದ್ದ ಜನರೆಲ್ಲರೂ ಫಿಲ್ ಮತ್ತು ರೋಜರ್ ಮೇಲೆ ಶಾಲು, ರಜಾಯಿ ಟವಲ್ ಮೊದಲಾದುವುಗಳನ್ನು ಎಸೆದರು. ಸಿಂಡಿಯು ಅವರ ನಾಡಿ ಬಡಿತ ಅನಿಯಮಿತ ವಾದದ್ದನ್ನು ರಕ್ತದೊತ್ತಡ ಇಳಿಮುಖ ವಾದದ್ದನ್ನೂ ಗಮನಿಸಿದಳು. ಅವರ ಕಣ್ಣು ನಿಸ್ತೇಜವಾಗಿತ್ತು. ಮಾಂಸಖಂಡಗಳು ಹೆಪ್ಪುಗಟ್ಟಿದ್ದವು. ಸಿಂಡಿಯು ರೋಜರ್‌ನಿಗೆ ಆಗತ್ಯವಿದ್ದ ಆಮ್ಲಜನಕವನ್ನು ನೀಡಲು ಮೊದಲು ಅವನನ್ನು ಆ್ಯಂಬುಲೆನ್ಸ್‌ಗೆ ಹತ್ತಿಸಿದಳು. ಆಮೇಲೆ ಫಿಲ್‌ನನ್ನು ಹತ್ತಿಸಿದಳು.

ರೋಜರ್ ಶ್ಯಾಂಡ್ಲರ್ ಮತ್ತು ಫಿಲ್ ರೋಸಿ ಸ್ಥಳೀಯ ಆಸ್ಪತ್ರೆಯೊಂದಕ್ಕೆ ಒಯ್ಯಲ್ಪಟ್ಟಾಗ ಫಿಲ್‌ನ ಉಷ್ಣತೆ ೯೫°F ರೋಜರನ ಉಷ್ಣತೆ ೯೪°F ಇತ್ತು. ಇಬ್ಬರಿಗೂ ನರಗಳ ಮೂಲಕ ದ್ರವೌಷಧ ವನ್ನು ನೀಡಿ ಬೆಚ್ಚಗಿನ ಕಂಬಳಿ ಹೊದೆಯಿಸ ಲಾಯಿತು. ಒಂದು ಗಂಟೆಯೊಳಗೆ ಅವರಿಗೆ ಯಾವ ಪ್ರಾಣಾಂತಿಕ ಅಪಾಯವೂ ಇಲ್ಲ ವೆಂಬ ಸೂಚನೆ ಬಂತು. ಸ್ವಲ್ಪ ಸಮಯ ದಲ್ಲಿ ಫಿಲ್ ಮತ್ತು ರೋಸಿ ನಡುಗಲಾರಂಭಿ ಸಿದರು. ಆಗ ಅವರ ಮೈ ಸಾಕಷ್ಟು ಬೆಚ್ಚಗಾಗಿತ್ತು.

ಅಂದು ರಾತ್ರಿ ಯುನೈಟೆಡ್ ಸ್ಟೇಟಿನ ಕರಾವಳಿ ಪಹರೆಗಾರರು ರೋಜರ್ ಮತ್ತು ಫಿಲ್ ತೆಗೆದುಕೊಂಡು ಹೋಗಿದ್ದ ದೋಣಿ ಸಿಗಲಿಲ್ಲವೆಂದು ವರದಿ ಮಾಡಿದ್ದರಿಂದ ರೋಜರ್ ಸಹೋದರ ಆರಿನ್ ತಾನೇ ಸ್ವತಃ ಅದನ್ನು ಹುಡುಕಲು ಹೊರಟ. 'ಪೆರಿವಿಂಕಲ್'ಗಳಿದ್ದ ಶಿಲಾಫಲಕದಿಂದ ಒಂದೆರಡು ಕಿಲೋಮೀಟರ್ ಅಂತರದಲ್ಲಿ ದೋಣಿಯು ದಡದ ನೆಲಕ್ಕೆ ತಾಗಿ ತೇಲು ತ್ತಿತ್ತು. ಆರಿನ್‌ನು ಪೆರಿವಿಂಕಲ್‌ಗಳನ್ನೆಲ್ಲಾ ಮರಳಿ ಪಡೆದು, ಮಾರುಕಟ್ಟೆಗೆ ತೆಗೆದು ಕೊಂಡು ಹೋಗಿ, ಮಾರಾಟ ಮಾಡಿ, ಹಣ ಪಡೆದು ಮರು ದಿನ ಆಸ್ಪತ್ರೆಯಿಂದ ಬಿಡು ಗಡೆಯಾಗಿ ಬರಲಿರುವ ಫಿಲ್ ಮತ್ತು ರೋಜರ್‌ಗಾಗಿ ಕಾಯುತ್ತ ಕುಳಿತ. ಆಸ್ಪತ್ರೆಯಿಂದ ಬಂದ ರೋಜರ್ ಶ್ಯಾಂಡ್ಲರ್ ತನ್ನ ತಾಯಿಯನ್ನು ನೋಡು ವುದಕ್ಕೂ ಮೊದಲು ಮಾಡಿದ ಕೆಲಸ ಬೋಟ್‌ಗೆ ಲಂಗರು ಹಾಕಿಸಿದ್ದು.

ಈ ಕಠಿಣ ಸತ್ವಪರೀಕ್ಷೆಯಾದಂದಿನಿಂದ ರೋಜರ್ ಮತ್ತು ಫಿಲ್ ಒಬ್ಬರ ನ್ನೊಬ್ಬರು ಬಿಟ್ಟಿರಲಾಗದ ಗೆಳೆಯರಾದರು. ಆ ಕೊರೆಯುವ ಚಳಿಯಲ್ಲಿ ಆ ದಿನವನ್ನು ಕುರಿತು, ಒಂದು ಸಲವಾದರೂ ಆ ಘಟನೆ ಯನ್ನು ವಿನೋದವೆಂದು ಸ್ವೀಕರಿಸಿದ. ಫಿಲ್‌ನ ಉಪದೇಶವನ್ನು ಮನ್ನಿಸಿದ ರೋಜರ್‌ಗೆ ಫಿಲ್‌ನು ಹಿರಿಯ ಅಣ್ಣ ನಂತಾಗಿದ್ದಾನೆ. ಫಿಲ್ ಈ ಅನುಭವವನ್ನು ಹಗುರವಾಗಿ ಪರಿಗಣಿಸಿದರೂ ಅವನಿದು ವರೆಗೂ ಕಾದಿರಿಸಿಕೊಂಡ ಪತ್ರಿಕೆಯ ದಾಖಲೆಯು ಅವನ ನಿಜಾನುಭವವನ್ನು ಸಾರುತ್ತದೆ. ಅದರ ತಲೆ ಬರಹ ಹೀಗಿದೆ: ಇಬ್ಬರು ಮೀನು ಹಿಡಿಯುವವರು ಸಮುದ್ರಕ್ಕೆ ಈಜಲು ಹೋಗಿ ಪ್ರಾಣಾಂತಿಕ ಅಪಾಯಕ್ಕೆ ಸಿಲುಕಿ ಚಿಕಿತ್ಸೆಗೊಳಗಾದರು" ಎಂದು ಅದರ ಕೆಳಗೆ ಫಿಲ್ ಹೀಗೆ ಅಚ್ಚು ಹಾಕಿಸಿದ್ದಾನೆ. "ಜನವರಿ ೨೫-೧೯೯೧: ಸಾವಿನ್ನೂ ಬದುಕಿದ್ದೇನೆ."

ಶಾಕಾಹಾರ: ತಥ್ಯ, ಮಿಥ್ಯ

ಕೆ. ಶಾಂತಾಮಣಿ

ಮುಂಬಯಿನ "ವೆಜಿಟೇರಿಯನ್ ಸೊಸೈಟಿ"ಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಮೊರಾರ್ಜಿ ದೇಸಾಯಿ ಅವರು "ಒಂದು ಕಡೆ ಪಾಶ್ಚಾತ್ಯ ದೇಶದಲ್ಲಿ ಜನರು ಶಾಕಾಹಾರಿಯಾಗ ತೊಡಗಿದರೆ ಈ ಕಡೆ ಭಾರತದಲ್ಲಿ! ಭಾರತೀಯ ಪರಂಪರೆಯ ಪ್ರಕಾರ ಶಾಕಾಹಾರಿಯಾದರೂ ಮಾಂಸಾಹಾರಿಯಾಗುತ್ತಿದ್ದಾರೆ" ಎಂದು ಹೇಳಿದರು. ಮೊರಾರ್ಜಿಯವರು ಸ್ವಯಂ ಶಾಕಾಹಾರಿಯಾಗಿದ್ದರು. ಮಾನವನ ಶಾರೀರಕ, ಆರ್ಥಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಉನ್ನತಿಗೆ ಶಾಕಾಹಾರಿ ಜೀವನ ಅಗತ್ಯವೆಂಬ ಧೋರಣೆಯ ಪ್ರಬಲ ಪಕ್ಷಪಾತಿಯಾಗಿದ್ದರು. ಇದೀಗ ಶಾಕಾಹಾರಿ ಹವಾ ಎಲ್ಲೆಲ್ಲೂ ಹರಡುತ್ತಿದೆ. ಸಾಂಸ್ಕೃತಿಕ ಪುನರ್‌ಜಾಗರಣೆ, ನೈತಿಕ ಪುನರುತ್ಥಾನ ಮತ್ತು ವೈಜ್ಞಾನಿಕ ಸಂಶೋಧನೆಯ ಪರಿಣಾಮ ಸ್ವರೂಪವಾಗಿ ಸಸ್ಯಾಹಾರಿಗಳ ಬಗೆಗೆ ದೃಷ್ಟಿಕೋನ ಬದಲಾಗುತ್ತಿದೆ. ಆಹಾರ-ದರ್ಶನದ ರೂಪದಲ್ಲಿ ಶಾಕಾಹಾರದ ಬಗ್ಗೆ ಬಹಳ ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಇದೀಗ ಹೊಸ ಅಭಿಪ್ರಾಯಗಳು ಹೊರಬರುತ್ತಿವೆ. ಶಾಕಾಹಾರವನ್ನು ಸರಿಯಾದ ಹಿನ್ನೆಲೆಯಲ್ಲಿ ಸ್ವಾಸ್ಥ್ಯ, ಪೋಷಣೆ, ಸಾಮಾಜಿಕ-ಆರ್ಥಿಕ ಸ್ಥಿತಿ ಮತ್ತು ಪರ್ಯಾವರಣ ಮತ್ತು ಇತರೆ ವ್ಯಾವಹಾರಿಕ ಒರೆಗಲ್ಲಿನ ಮೇಲೆ ಒರೆಹಚ್ಚಿ ನೋಡಲಾಗುತ್ತಿದೆ.

ಶಾಕಾಹಾರದ ಬಗೆಗೆ ಚರ್ಚೆ ನಡೆಸುವ ಮೊದಲು ಶಾಕಾಹಾರಿ ಎಂದರೆ ಯಾರು? ಎಂಬುದನ್ನು ತಿಳಿಯಬೇಕು. ವಿವಿಧವಾದ ಶಾಕಾಹಾರಿಗಳು ಇದ್ದಾರೆ. ಒಂದು ಕಡೆ ಮೊಟ್ಟೆ ಹಾಲು ತೆಗೆದುಕೊಳ್ಳುವವರು ಮೀನು-ಮಾಂಸ ಎಂದರೆ ಮೂಗು ಮುರಿಯುತ್ತಾರೆ. ಇನ್ನು ಕೆಲವರು ಹಾಲು ತೆಗೆದುಕೊಳ್ಳುತ್ತಾರೆ. ಮೊಟ್ಟೆಯನ್ನು ಮುಟ್ಟುವುದಿಲ್ಲ. ಇನ್ನೂ ಕೆಲವರು ಮೊಟ್ಟೆಯ ಮಾತು ಹಾಗಿರಲಿ, ಹಾಲು, ಮೊಸರು, ಬೆಣ್ಣೆ, ಜೇನುತುಪ್ಪ ಕೂಡ ತಿನ್ನುವುದಿಲ್ಲ. ಭಾರತದಲ್ಲಿ ಧರ್ಮಪರಾಯಣರಾದ ಕೆಲವರಂತೂ ಬೆಳ್ಳುಳ್ಳಿ, ಈರುಳ್ಳಿ, ಕೋಸು, ಮೂಲಂಗಿ, ಆಲೂಗೆಡ್ಡೆ, ಹಲಸು ಮುಂತಾದ ಮನುಷ್ಯರ ಅಂಗಾಂಗಗಳನ್ನು ಹೋಲುವ ತರಕಾರಿಯನ್ನೂ ಕೂಡ ತಿನ್ನುವುದಿಲ್ಲ. ಬಂಗಾಳ, ಕೇರಳ ಮುಂತಾದ

೧೯೮೪ರ 'ನವನೀತ' ಮಾಸಪತ್ರಿಕೆಯಲ್ಲಿ ಪ್ರಕಟವಾದ ಧೀರೇಂದ್ರ ಕುಮಾರ ದೀಕ್ಷಿತ್ ಅವರ "ಶಾಕಾಹಾರ: ಕುಛ್ ತಥ್ಯ, ಕುಛ್ ಭ್ರಾಂತಿಯಾ" ಲೇಖನದ ಅನುವಾದ.

ಸಮುದ್ರ ದಡದಲ್ಲಿ ವಾಸಿಸುವ ಶಾಕಾಹಾರಿ ಜನರು ಮೀನನ್ನು 'ಗಂಗಾಫಲ' ಅಥವಾ 'ಜಲಾಹಾರ' ಎಂದು ಹೇಳಿಕೊಂಡು ತಿನ್ನುತ್ತಾರೆ. ಪಂಜಾಬಿನಲ್ಲಿ ಒಬ್ಬ ಮೊಟ್ಟೆ ವ್ಯಾಪಾರಿ ಮೊಟ್ಟೆಯನ್ನು "ರಾಮ್ ಲಡ್ಡೂ" ಎಂದು ಹೇಳಿ ಮಾರುತ್ತಿದ್ದ. ಇದರಿಂದ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ಬಂದು ಅವನ ಮೇಲೆ ಮೊಕದ್ದಮೆ ಹೂಡಿದ್ದರು. ಒಬ್ಬ ಮಾಂಸಾಹಾರಿ ಮಿತ್ರರು "ನಾನು ಆಡನ್ನು ತಿನ್ನುತ್ತೇನೆ, ಅದು ಹುಲ್ಲು ತಿನ್ನುತ್ತದೆ. ಅಂದಮೇಲೆ ನಾನೂ ಶಾಕಾಹಾರಿ ಎಂದ ಹಾಗಾಯಿತು" ಎಂದರಂತೆ. ಕೆಲವು ಪಂಡಿತರು ಜಗದೀಶ ಚಂದ್ರ ಬಸು ಅವರನ್ನು ಆಧರಿಸಿ 'ವನಸ್ಪತಿ, ಸೊಪ್ಪು ತರಕಾರಿಗಳಲ್ಲೂ ಜೀವ ಇದೆ' ಎಂದು ವಾದಿಸುತ್ತಾರೆ. ಮಾಂಸಾಹಾರಿಗಳಾದರೋ ಬಹಳ ವಿಚಿತ್ರದವರು. ಹಿಂದೂ ಗೋಮಾಂಸ ತಿನ್ನುವುದಿಲ್ಲ. ಮುಸಲ್ಮಾನರು ಹಂದಿ ಮಾಂಸ ತಿನ್ನುವುದಿಲ್ಲ.

ಎಲ್ಲರೂ ಒಪ್ಪಿಕೊಳ್ಳುವಂತಹ ವಿಷಯವೆಂದರೆ ಶಾಕಾಹಾರಿ ಕೋಳಿ, ಮೀನು, ಮಾಂಸವನ್ನೂ ಕೂಡ ತಿನ್ನಬಾರದು. ಭಾರತದಲ್ಲಿ ಕೇವಲ ೬೪% ಜನರು ಮಾತ್ರ ಶಾಕಾಹಾರಿಗಳಾಗಿದ್ದಾರೆ. ತಮಿಳುನಾಡಿನಲ್ಲಿ ಮಾಂಸಾಹಾರ ಹೆಚ್ಚು. ಗುಜರಾತ್, ರಾಜಸ್ಥಾನ, ಹರಿಯಾಣ, ಉತ್ತರಪ್ರದೇಶ, ಮಧ್ಯಪ್ರದೇಶಗಳಲ್ಲಿ ಕ್ರಮವಾಗಿ ೬೯%, ೬೦%, ೫೪%, ೫೦%, ೪೫%ರಷ್ಟು ಜನರು ಶಾಕಾಹಾರಿಗಳಾಗಿದ್ದಾರೆ. ಮಾಂಸಾಹಾರಿ ಕ್ಷೇತ್ರದಲ್ಲೂ ಕೂಡ ಗುಣಮಟ್ಟದ ದೃಷ್ಟಿಯಿಂದ ಮಾಂಸಾಹಾರದ ಪ್ರಮಾಣ ಬಹಳ ಕಡಿಮೆ. ಭಾರತೀಯ ಸರಾಸರಿ ೩೦ ಗ್ರಾಮ್‌ನಷ್ಟು ಮಾಂಸ ಪ್ರತಿದಿನ ತಿನ್ನುತ್ತಾನೆ. ಇದನ್ನೆಲ್ಲಾ ಒಟ್ಟುಗೂಡಿಸಿದರೆ ಭಾರತದಲ್ಲಿ ಮಾಂಸಾಹಾರಿಗಳ ಮುಖ್ಯ ಭೋಜನವೂ ಕೂಡ ಶಾಕಾಹಾರಿಯೇ ಆಗಿರುತ್ತದೆ.

ಬಲಿಷ್ಠ, ವೀರ ಮತ್ತು ತೇಜಸ್ವಿ ಆಗಬೇಕಾದರೆ ಮಾಂಸ ತಿನ್ನಬೇಕೆನ್ನುವುದು ಒಂದು ಭ್ರಮೆ. ಆದರೆ ವಾಸ್ತವದಲ್ಲಿ ಆನೆ, ಗೇಂಡಾಮೃಗ, ಹಿಪ್ಪೊಪೊಟೊಮಸ್, (ನೀರಾನೆ) ಮುಂತಾದ ಪ್ರಾಣಿಗಳು ಬಹಳ ಬಲಿಷ್ಠವಾಗಿರುತ್ತವೆ. ಡಾ|| ಜೆ. ಡಿ. ಕ್ರೇಗ್‌ರ ಹೇಳಿಕೆ ಪ್ರಕಾರ ಮಾಂಸದಿಂದ ದೂರ ಇರುವ ಅನೇಕ ಯುರೋಪಿಯನ್ನರು ಬಹಳ ಬುದ್ಧಿವಂತರಷ್ಟೆ ಅಲ್ಲ, ಸಹಿಷ್ಣುಗಳೂ ವ್ಯಾಯಾಮ ಆಟಗಳಲ್ಲಿ ನಿಪುಣರೂ ಆಗಿದ್ದಾರೆ. ಸಾಮಾನ್ಯವಾಗಿ ಮಾಂಸಾಹಾರಿಗಳು ಮದ್ಯಪಾನ ಮಾಡುತ್ತಾರೆ. ಮದ್ಯದ ಚಟ, ಮಾಂಸದಂತಹ ತಾಮಸ ಭೋಜನ ಮತ್ತು ವಾಸನೆಯ ಜ್ವಾಲಾಮುಖಿ ಸಿಡಿದೆದ್ದರೆ ಹೇಳುವುದೇನಿದೆ? ಭಾರತದಲ್ಲಿ ಅನೇಕ ಸ್ತ್ರೀಯರು ವಿವಾಹದ ನಂತರ ಸಂಪ್ರದಾಯಕ್ಕೆ ಅನುಗುಣವಾಗಿಯೋ ಅಥವಾ ತಮ್ಮ ಸ್ವಇಚ್ಛೆಯಿಂದ ಶಾಕಾಹಾರಿ ಆಗಬಯಸಿದರು. ಪತಿ ಮಾಂಸಾಹಾರಿ ಆಗಿದ್ದರೆ ಮಾಂಸದ ಅಡಿಗೆ ಮಾಡಲು ಪ್ರೇರೇಪಿಸುತ್ತಾನೆ. ಎಷ್ಟೋ ಜನ ಸ್ತ್ರೀಯರು ಮಾಂಸಾಹಾರದ 'ಡಿಗ್ರಿ' ಪಡೆಯದಿದ್ದರೂ 'ಮೊಟ್ಟೆ' ತಿನ್ನುವ ಡಿಪ್ಲೋಮಾ ಪಡೆಯುತ್ತಾರೆ. ಆದರೆ ಕೆಲವು ಶಾಕಾಹಾರಿ ಪತಿ ಮಾಂಸಪ್ರೇಮಿ ಪತ್ನಿಗೆ ಮಾಂಸಾಹಾರವನ್ನು ಬಿಡುವಂತೆ ಬಲವಂತಪಡಿಸುವುದಿಲ್ಲ ಸಹಿಷ್ಣುಗಳಾಗಿರುತ್ತಾರೆ.

ಶಾಕಾಹಾರದ ಗುಣಾವಗುಣಗಳ ಪರೀಕ್ಷೆ ನಡೆಸಿದಾಗ, ಮನುಷ್ಯನ ಶಾರೀರಿಕ ರಚನೆ

ಯನ್ನು ಮಾಂಸಭಕ್ಷ ಪ್ರಾಣಿಗಳಾದ ಸಿಂಹ, ಹುಲಿಗಳೊಡನೆ ಹೋಲಿಸಿದಾಗ ಅವುಗಳಲ್ಲಿನ ಶಾರೀರಕ ಸಂ ರಚನೆ ಮತ್ತು ಕ್ರಿಯಾತ್ಮಕ ರಚನೆಗಳು, ಮನುಷ್ಯ ಶಾರೀರಕ ರಚನೆ ಶಾಕಾಹಾರಿಗೆ ಅನುಗುಣವಾಗಿದೆ ಎಂಬುದನ್ನು ಸಿದ್ಧಪಡಿಸುತ್ತದೆ. ಉದಾಹರಣೆಗೆ ಮಾಂಸ ತಿನ್ನಲು ಅವುಗಳಿಗೆ ವಿಶೇಷವಾದ ಚೂಪಾದ ಪಂಜಗಳಿವೆ, ಮಾನವನಿಗೆ ಅಂಥ ಪಂಜಗಳಿಲ್ಲ. ಮಾಂಸ ತಿನ್ನಲು ಬೇಕಾದಂಥ ಚೂಪಾದ ಹಲ್ಲುಗಳೂ ಕೂಡ ಮನುಷ್ಯನಿಗಿಲ್ಲ. ನಮ್ಮ ದವಡೆ ಮೇಲೆ ಕೆಳಗೆ ಅತ್ತ ಇತ್ತ ಚಲಿಸುತ್ತದೆ. ಅದರೆ ಅವುಗಳ ದವಡೆ ಮೇಲೆ ಕೆಳಗೆ ಮಾತ್ರ ಚಲಿಸುತ್ತದೆ. ಆಕಡೆ ಈಕಡೆ ಚಲಿಸುವುದಿಲ್ಲ. ನಮ್ಮ ಲಾಲಾರಸದಲ್ಲಿ ಕ್ಷಾರವಿರುತ್ತದೆ. ಏಕೆಂದರೆ ಶಾಕಾಹಾರದಲ್ಲಿರುವ ಕಾರ್ಬೋಹೈಡ್ರೇಟ್ ಚೆನ್ನಾಗಿ ಜೀರ್ಣವಾಗಬೇಕು. ಮಾಂಸಾಹಾರಿಯ ಲಾಲಾರಸ ಆಮ್ಲೀಯವಾಗಿರುತ್ತದೆ. ಇದರಿಂದ ಸತ್ತ ಮೃಗದ ಮಾಂಸ ಸುಲಭವಾಗಿ ಜೀರ್ಣವಾಗಬಲ್ಲದು. ಮಾಂಸಾಹಾರಿಯ ಯಕೃತ್ ಮನುಷ್ಯನದಕ್ಕಿಂತ ದೊಡ್ಡದಾಗಿದ್ದು ಹೆಚ್ಚು ಪಿತ್ತವನ್ನು ಸ್ರವಿಸಿ ಮಾಂಸವನ್ನು ಅರಗಿಸಿಕೊಳ್ಳುತ್ತದೆ.

ಹಾಗಾದರೆ ಮೂಲತಃ ಶಾಕಾಹಾರಿಯಾದ ಮಾನವ ಮಾಂಸಾಹಾರಿ ಹೇಗೆ ಆದ? ಆದಿ ಶಿಲಾಯುಗದಲ್ಲಿ ನಾಗರೀಕತೆಯ ಕೊರತೆಯಿಂದಾಗಿ ಮಾನವ ಹಸಿಮಾಂಸವನ್ನು ತಿಂದು ನಂತರ ಬೇಯಿಸಿ ತಿಂದಿರಬಹುದು. ಸಭ್ಯತೆ ಬೆಳೆದಂತೆ ನಿಧಾನವಾಗಿ ಶಾಕಾಹಾರಿಯಾಗಿರಬಹುದು. ಹಿಂದೂ ಧರ್ಮ ಮಾಂಸಾಹಾರವನ್ನು ಸಮರ್ಥಿಸುವುದಿಲ್ಲ. ಅನ್ಯಧರ್ಮಗಳೂ ಕೂಡ ಹೊಟ್ಟೆಯನ್ನು ಸ್ಮಶಾನ ಮಾಡಿಕೊಳ್ಳುವಂತೆ ಹೇಳುವುದಿಲ್ಲ. ಜರತುಷ್ಟ್ರನೂ ಕೂಡ ಮಾಂಸಾಹಾರವನ್ನು ಸೈತಾನನ ರಚನೆ ಎಂದು ಹೇಳಿ ಅದನ್ನು ವರ್ಜಿಸುವಂತೆ ಹೇಳಿದ. ಜೈನ, ಬೌದ್ಧ ಧರ್ಮಗಳು ಅಹಿಂಸೆ ಆಧಾರದ ಮೇಲಿರುವುದರಿಂದ ಅಲ್ಲೂ ಶಾಕಾಹಾರವನ್ನು ಅನಿವಾರ್ಯ ಎಂದಿದ್ದಾರೆ.

ಇಂದಿನ ವಾತಾವರಣದಲ್ಲಿ ಶಾಕಾಹಾರಿಯಾಗಿಯೇ ಬಾಳುವುದು ಕಷ್ಟ. ಮಹಾನಗರಗಳಲ್ಲಿ ಶುದ್ಧ ಶಾಕಾಹಾರಿ ಹೋಟೆಲುಗಳು ಸಿಗುವುದೂ ಕಷ್ಟ ಅಲೋಪತಿ ಔಷಧಿಗಳ ಸೇವನೆ ಮಾಡುವಾಗ ಶಾಕಾಹಾರಿ ಮೀನಿನ ಎಣ್ಣೆ, ಯಕೃತ್ತಿನ ಎಣ್ಣೆ, ಕೋಳಿ ಮಾಂಸ. ಇನ್ನು ಏನೇನು ಅಭಕ್ಷ್ಯ ಭಕ್ಷಣವನ್ನು ಬಲವಂತವಾಗಿ ಮಾಡಬೇಕಾಗುತ್ತದೋ, ಭಗವಂತ ಬಲ್ಲ. ಈಗಂತೂ ವನಸ್ಪತಿ ತುಪ್ಪದಲ್ಲೂ ಕೂಡ ಕೊಬ್ಬು ಸೇರಿಸುತ್ತಾರೆಂಬ ವದಂತಿಯೂ ಹುಟ್ಟಿದೆ. ಇದೇ ರೀತಿ ಮೊಟ್ಟೆ ತಿನ್ನದ ಶಾಕಾಹಾರಿಗಳು ತಿಳಿಯದೆ ಮಾಂಸವನ್ನು ತಿನ್ನುತ್ತಾರೆ. ಚೀಸ್‌ನ್ನು ಜನ ಹಾಲಿನಿಂದ ತಯಾರಿಸಿದೆ ಎಂದು ತಿಳಿದು ತಿನ್ನುತ್ತಾರೆ. ಆದರೆ ಅದನ್ನು ರೀನೇಟ್ ಎಂಬ ಎನ್‌ಜೈಮನ್ನು ಕರುವಿನ ಹೊಟ್ಟೆಯಿಂದ ತೆಗೆದಿರುತ್ತಾರೆಂದು ಎಷ್ಟು ಜನರಿಗೆ ಗೊತ್ತು ?

ಈಗಿನ ವೈದ್ಯರು ಮತ್ತು ವಿದ್ಯಾವಂತರೂ ಮಾಂಸಾಹಾರವನ್ನು ಪ್ರೋಟೀನಿನ ಆಗರವೆಂದೇ ತಿಳಿದಿದ್ದಾರೆ. ಧಾನ್ಯಗಳು ಮತ್ತು ತಾಜಾತರಕಾರಿಗಳ ಸಮತೋಲನ ಆಹಾರ ಬಹಳ ಉಪಯುಕ್ತವಾದದ್ದು ಮತ್ತು ಪೌಷ್ಟಿಕ ಆಹಾರವೆಂದು ಸ್ಪಷ್ಟೀಕರಿಸಿದ್ದಾರೆ. ಶಾಕಾಹಾರಿಗಳು ಭೋಜನದ

ಪದಾರ್ಥಗಳನ್ನು ಬೇರೆಬೇರೆಯಾಗಿ ತಿನ್ನು ವುದಕ್ಕಿಂತ ಒಟ್ಟಿಗೆ ತಿನ್ನುವುದು ಉತ್ತಮ, ರೊಟ್ಟಿ ಮತ್ತು ಬೇಳೆ ಒಟ್ಟಿಗೆ ತಿನ್ನುವುದ ರಿಂದ ರೊಟ್ಟಿಯ ಕಡಿಮೆ ಪ್ರೋಟೀನ್ ಬೇಳೆಯ ಹೆಚ್ಚಿನ ಪ್ರೋಟೀನ್ ಜೊತೆಸೇರಿ ಆಹಾರ ಸಮತೋಲನಗೊಳ್ಳುತ್ತದೆ. ಇದರ ಜೊತೆಗೆ ಹಾಲು-ಮೊಸರು ಸೇರಿದರೆ ಇನ್ನೂ ಫಲಕಾರಿ. 'ನ್ಯಾಷನಲ್ ನ್ಯೂಟ್ರಿಷನ್ ಮಾನಿಟರಿಂಗ್ ಬ್ಯುರೋ'ದ ರಿಪೋರ್ಟಿನ ಪ್ರಕಾರ ಭಾರತದಲ್ಲಿ ಪ್ರೋಟೀನಿನ ಸೇವನೆ ಕೇವಲ ಸರಾಸರಿ ೫೨.೩ ಗ್ರಾಂ. ಬೇಳೆ-ಹಾಲು ಬಳಸುವ ಕರ್ನಾಟಕದಲ್ಲಿ ಪ್ರೋಟೀನಿನ ಅಂಶ ಹೆಚ್ಚಾಗಿ ಜನರ ಶರೀರಕ್ಕೆ ಸೇರುವುದು. ಆದರೆ ಮಾಂಸಾಹಾರ ಸೇವಿಸುವ ಕೇರಳದಲ್ಲಿ ಕೇವಲ ೫೦.೩ ಗ್ರಾಂ ಪ್ರೋಟೀನ್ ಮಾಂಸಾ ಹಾರದಲ್ಲಿ ಮಾತ್ರ ಇದೆ ಎನ್ನುವುದು ಭ್ರಮೆ. ಶಾಕಾಹಾರದಲ್ಲಿ ಬೇಳೆ, ಸೊಪ್ಪು, ಅಕ್ಕಿ, ಗೋಧಿಯಲ್ಲಿ ಪ್ರಕಾಶ ಸಂಶ್ಲೇಷಣೆ ಯಿಂದ ಕಾರ್ಬೋಹೈಡ್ರೇಟ್ ಇವುಗಳ ಕೋಶಗಳಲ್ಲಿ ತುಂಬಿರುತ್ತದೆ. ಇದನ್ನು 'ರಫೇಜ್' ಎನ್ನುತ್ತಾರೆ ಇವು ಮಲಬದ್ಧತೆ ಯನ್ನು ನಿವಾರಿಸುತ್ತವೆ. ಅಮೆರಿಕದಲ್ಲಿ ಟಫನ್ ಸಮಯದಲ್ಲಿ ಈ ಕೊರತೆಯನ್ನು ತುಂಬಿಕೊಳ್ಳುತ್ತಾರೆ. ಇದರ ಅಭಾವವಾದರೆ ಕ್ಯಾನ್ಸರ್ ಬರುವ ಸಾಧ್ಯತೆ ಉಂಟು.

ಶಾಕಾಹಾರದಲ್ಲಿ ಕೊಬ್ಬು ಕಡಿಮೆ ಇರುತ್ತದೆ. ಮಾಂಸಾಹಾರದಲ್ಲಿ ಇದು ಹೆಚ್ಚಾಗಿರುತ್ತದೆ. ಕೊಬ್ಬು ಇರುವ ಆಹಾರ ದಿಂದ ಸ್ಥೂಲಕಾಯರು ಆಗುತ್ತಾರೆ. ವಿಟಮಿನ್ ಬಿ–೧೨ರ ಕೊರತೆಯಿಂದ ಸ್ನಾಯುಮಂಡಲ ದುರ್ಬಲವಾಗುತ್ತದೆ. ಶಾಕಾಹಾರದಲ್ಲಿ ಇದು ಕಡಿಮೆ. ಮಾಂಸಾ ಹಾರಿಗಳು ಇದನ್ನು ಎತ್ತಿಹಿಡಿಯುತ್ತಾರೆ. ಆದರೆ ಹಾಲಿನಲ್ಲಿ ವಿಟಮಿನ್ ಇದ್ದೇ ಇರು ತ್ತದೆ. ದೋಸೆ, ಇಡ್ಲಿಗಳಲ್ಲೂ ವಿಟಮಿನ್ ಇರುತ್ತದೆ.

ಮಾಂಸದಲ್ಲಿ ಘಾತಕ ಕೀಟಾಣು (ವಿಷ ಬಾಧೆ) Food poison ನಾಶಕದ ಅಂಶ ಸೇರಿಕೊಂಡಿರುತ್ತದೆ. ಇಂಗ್ಲೆಂಡಿನಲ್ಲಿ ಶೇಕಡ ೬೦ ರಷ್ಟು ಇಂಥ ವಿಷದ ಘಟನೆ ಗಳು ನಡೆಯುತ್ತಿರುತ್ತವೆ. ಮಾರುಕಟ್ಟೆಯ ಮಾಂಸವಂತೂ ಬಹಳ ಅನಾರೋಗ್ಯಕರ ವಾಗಿರುತ್ತದೆ.

ಸದೃಢವಾದ ಶರೀರಕ್ಕೆ ಕಡಿಮೆ ಕ್ಯಾಲೋರಿ ಅತ್ಯಗತ್ಯ. ೧ ಪೌಂಡು ಮಾಂಸ ದಲ್ಲಿ ೧೨೦೦ ಕ್ಯಾಲೋರಿ ಇದ್ದರೆ, ೧ ಪೌಂಡು ಸೇಬಿನಲ್ಲಿ ೨೪೨ ಕ್ಯಾಲೋರಿ ಇರುತ್ತದೆ. ಶಾಕಾಹಾರಿ ಭೋಜನದಲ್ಲಿ ೩೦ ಗ್ರಾಂ ಲೋಹ ಮನುಷ್ಯನ ಶರೀರವನ್ನು ಸೇರು ತ್ತದೆ. ಕಿತ್ತಲೆ, ಸೊಪ್ಪು, ನಿಂಬೆಯಲ್ಲಿ ಲೋಹ ಅಂಶ ಹೆಚ್ಚಾಗಿದ್ದು, ಹಿಮೋ ಗ್ಲೋಬಿನ್ ಕೊರತೆ ಇದ್ದವರಿಗೆ, ಬಹಳ ಸಹಾಯಕಾರಿಯಾಗಿದೆ. ಎರಡನೆ ಮಹಾ ಯುದ್ಧವಾದಾಗ ಮಾಂಸವನ್ನು ಮಕ್ಕಳು, ಗರ್ಭವತಿಯರಿಗೆ ಮಾತ್ರ ಮೀಸಲಾಗಿಟ್ಟರು. ಆದರೆ ಶಾಕಾಹಾರಿಯಾದವರು ಅಥವಾ ಮಾಂಸ ಕೊಳ್ಳಲಾಗದವರು ಅವರಿಗಿಂತ ಆರೋಗ್ಯವಾಗಿದ್ದದ್ದು ಕಂಡು ಬಂತು.

ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾ ತಾಂತ್ರಿಕ ಸಂಸ್ಥೆಯ ಡಾ॥ ಕೆ. ಟಿ. ಅಚಾರ್ಯರು ಶಾಕಾಹಾರವೇ ಸಂಪೂರ್ಣವಾದ ಆಹಾರ ಎಂದು ಸ್ಪಷ್ಟ ವಾಗಿ ಹೇಳಿದ್ದಾರೆ. ಪೌಷ್ಟಿಕಾಂಶ ಉಳ್ಳ ಆಹಾರವನ್ನು ಸಮಯಕ್ಕೆ ಸರಿಯಾಗಿ

ತೆಗೆದುಕೊಳ್ಳುವುದರಿಂದ ಶಾರೀರಿಕ ವಿಕಾಸವಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದ್ದಾರೆ.

ಒಟ್ಟಿನಲ್ಲಿ ಶಾಕಾಹಾರ ಎಲ್ಲ ದೃಷ್ಟಿಯಿಂದಲೂ ಗುಣಕಾರಿ, ಆರೋಗ್ಯವರ್ಧಕ ಮತ್ತು ಸಾತ್ವಿಕ ಗುಣಉಳ್ಳದ್ದು "ಆಹಾರದಂತೆ ಮನಸ್ಸು." ಹಿಂಸೆಯ ಆಹಾರವನ್ನು ಅವಲಂಬಿಸಿರುವ ಜನ ಪ್ರಪಂಚದ ಹಿಂಸೆಯ ದಾವಾನಲವನ್ನು ಹೇಗೆ ಹೋಗಲಾಡಿಸಬಲ್ಲರು? ಪಾಶ್ಚಾತ್ಯ ಅಂಧಾನುಕರಣೆ ಮತ್ತು ತಮ್ಮನ್ನು ಆಧುನಿಕರೆಂದು ಹೇಳಿಕೊಳ್ಳುವ ಸಡಗರದಲ್ಲಿ ಮತ್ತು ವೈಜ್ಞಾನಿಕ ತತ್ವಗಳನ್ನು ತಿಳಿಯದ ಯುವ ವರ್ಗ ಮಾಂಸಭಕ್ಷಣೆಯ ಕಡೆಗೆ ಸಾಗುತ್ತಿದ್ದಾರೆ ಈ ದಿಕ್ಕಿನಲ್ಲಿ 'ವೆಜಿಟೇರಿಯನ್ ಸೊಸೈಟಿ'ಯ ಪಾತ್ರ ಹಿಂದಾಗಿದೆ. ಅವರು ಭಾರತವನ್ನು ಶಾಕಾಹಾರಿ ದೇಶವನ್ನಾಗಿ ಮಾಡಲು ಕಟಿಬದ್ಧರಾಗಬೇಕು. ಮಾಂಸಾಹಾರದಿಂದ ಶಾಕಾಹಾರದ ಕಡೆಗಿನ ಈ ಯಾತ್ರೆ ಅನಾಗರೀಕತೆಯಿಂದ ಸಭ್ಯತೆ ಕಡೆಗೆ ಹೋಗುವ ಯಾತ್ರೆಯಾಗಿದೆ.



ಕ್ರೂರ ಪ್ರಾಣಿಗಳನ್ನು ಪಳಗಿಸುವುದಕ್ಕೆ ಪಂಜರದಲ್ಲಿ ಹಾಕಿ ಹಿಂಸಿಸುವಂತೆ ಪರಮಾತ್ಮನು ದುಷ್ಟರನ್ನು ಮತ್ತೆ ಮತ್ತೆ ಈ ವಿಶ್ವವೆಂಬ ಪಂಜರಕ್ಕೆ ಒಗೆದು ಪಳಗಿಸುತ್ತಾನೆ. ಮಾನವ ಜೀವನ ದೊರಕಿತೆಂದು ಹೆಮ್ಮೆಯಿಂದ ಮೆರೆದಾಡದೇ ಮುಕ್ತಿಗಾಗಿ ಹೋರಾಡಿರಿ.

—ಮಹಾವೀರ

ಜಾನ್ ಕೀಟ್ಸ್

ಶಂಸ ಐತಾಳ

೧೮೧೯ರ ವಸಂತಕಾಲದ ಒಂದು ದಿವಸ. ಲಂಡನ್ ನಗರದ ಸಮೀಪವಿರುವ ವೆಂಟ್ ವರ್ತ್ ಪ್ಲೇಸ್ ಉದ್ಯಾನದಲ್ಲಿ ಗೂಡು ಕಟ್ಟಿಕೊಂಡಿದ್ದ ಒಂದು ನೈಟಿಂಗೇಲ್ ಪಕ್ಷಿ ಇಂಪಾಗಿ ಹಾಡಿತು. ಅದನ್ನು ಆಲಿಸಿದ ಶ್ರೀಸಾಮಾನ್ಯನೊಬ್ಬ ಆನಂದಪರವಶನಾಗಿ ತನ್ನನ್ನೇ ತಾನು ಮರೆತ. ಆ ಪಕ್ಷಿಗಾನದಲ್ಲಿ ಅವನು ನಿರಂತರ ಹಾಗೂ ಅವಿಚ್ಛಿನ್ನ ಸಂತಸ ಪಡೆಯತೊಡಗಿದ. ಒಂದು ದಿನ ಬೆಳಗ್ಗೆ ತನ್ನ ಕುರ್ಚಿಯನ್ನು ಉದ್ಯಾನಕ್ಕೆ ಸಾಗಿಸಿ, ಪ್ಲಮ್ ಮರದ ಬುಡದಲ್ಲಿ ಅದರ ಮೇಲೆ ಕುಳಿತು ಕವಿತೆ ಬರೆದ. ಅವನೇ ೨೩ ವರ್ಷ ವಯಸ್ಸಿನ ಜಾನ್ ಕೀಟ್ಸ್; ಆಗ ಬರೆದ ಪದ್ಯವೇ 'ಓಡ್ ಟು ಎ ನೈಟಿಂಗೇಲ್.'

ಆ ಕವನವನ್ನು ಮೊತ್ತಮೊದಲ ಸಲ ಓದುವಾಗ, ನಾನು ೧೮ ವರ್ಷ ವಯಸ್ಸಿನ, ಇಂಗ್ಲೆಂಡಿನ ಒಬ್ಬ ವಿದ್ಯಾರ್ಥಿಯಾಗಿದ್ದೆ. ಕೀಟ್ಸ್ ಕವಿಯ ಖ್ಯಾತಿಯ ಪರಿಚಯ ನನಗಾದದ್ದು ಆ ಕವನದಿಂದಲೇ. ಅದರ ಸೌಂದರ್ಯ, ಶ್ರೀಮಂತಿಕೆ, ಪ್ರತಿಮಾ ಶಿಲ್ಪಗಳಿಗೆ ನಾನು ಮಾರುಹೋದೆ. ಆಮೇಲೆ ಒಂದೊಂದಾಗಿ ಅವನ ಇತರ ಕವನಗಳನ್ನು ಓದುತ್ತ ಹೋದಂತೆ, ಅವನ ಬದುಕನ್ನು ತಿಳಿಯುತ್ತ ಹೋದಂತೆ, ಅವನ ಬುದ್ಧಿಶಕ್ತಿ ಕಾವ್ಯಪ್ರತಿಭೆಗಳಷ್ಟೇ ಅಲ್ಲ, ಅಲ್ಪಾವಧಿ ಬಾಳಿದ ಅವನ ಧೈರ್ಯಸ್ಥೈರ್ಯ-ಗಾಂಭೀರ್ಯಗಳೂ ನನ್ನನ್ನು ಮರುಳು ಮಾಡಿದುವು. ಕ್ಷಯರೋಗ ಪೀಡಿತನಾಗಿದ್ದರೂ ಕೀಟ್ಸ್ ಬೆದರದೆ ಒಳ್ಳೆಯ ಬದುಕನ್ನು ಬಾಳಿದ. ಅಕಾಲ ನಿಧನ ಹೊಂದಿದರೇನು? ಅವನು ಅಮರ ಕವಿ.

ಜಾನ್ ಕೀಟ್ಸ್ ಜನಿಸಿದ್ದು ೧೭೯೫ನೆಯ ಅಕ್ಟೋಬರ್ ೩೧ರಂದು ಲಂಡನ್ನಿನಲ್ಲಿ. ಹುಟ್ಟಿದಂದಿನಿಂದಲೇ ಅವನು ಅನಾರೋಗ್ಯಕ್ಕೀಡಾಗಿದ್ದ; ಬದುಕಿನಲ್ಲಿ ದುರಂತ ಘಟನೆಗಳನ್ನು ಆಗಾಗ ಎದುರಿಸುತ್ತಿದ್ದ. ಅವನ ತಂದೆ ಲಾಯವೊಂದರಲ್ಲಿ ನೌಕರ; 'ಕುದುರೆ ಚಾಕರ.' ಕೀಟ್ಸ್ ಎಂಟು ವರ್ಷದ ಬಾಲಕನಾಗಿರುವಾಗಲೇ, ಅವನ ತಂದೆ ಕುದುರೆ ಸವಾರಿ ಮಾಡುತ್ತಿರುವಾಗ ಅಪಘಾತಕ್ಕೆ ಬಲಿಯಾಗಿ ಜೀವ ತೆತ್ತ. ಕೀಟ್ಸ್‌ನಿಗೆ ಹದಿನಾಲ್ಕು ವರ್ಷವಾಗುವಾಗ, ಅವನ ತಾಯಿ ಕೂಡ ಕ್ಷಯರೋಗದಿಂದ ಸತ್ತು ಹೋದಳು. ಅವನ ಸಹೋದರರಲ್ಲಿ ಒಬ್ಬ

೧೯೬೩ರ ಜನವರಿ ೩೧ರ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾಗಿರುವ ಹ್ಯೂಬರ್ಟ್ ಡೆ ಸಾಂಟಾನಾ ಅವರ 'ದಿ ಗ್ಲೋರಿ ಆಫ್ ಕೀಟ್ಸ್' ಎಂಬ ಲೇಖನದ ಆಧಾರ.

ನಾದ ಟಾವರ್‌ನನ್ನು ಬಲಿತೆಗೆದುಕೊಂಡದ್ದೂ ಕ್ಷಯಮಾರಿಯೇ.

ಕ್ಷಯರೋಗ ಕೀಟ್ಸ್‌ನನ್ನೂ ಬಿಡಲಿಲ್ಲ. ಇಪ್ಪತ್ತೈದನೆಯ ವಯಸ್ಸಿನಲ್ಲಿ ಇವನೂ ಮೃತನಾದ. ಹೀಗೆ ಇವನ ಬಾಳು ಅಲ್ಪ ಕಾಲಾವಧಿಯದು. ಆದರೇನು? ತನ್ನ ಕೆಲವು ಉತ್ಕೃಷ್ಟಕವನಗಳಿಂದ ಇವನು ಇಂಗ್ಲಿಷ್ ಸಾಹಿತ್ಯವನ್ನು ಶ್ರೀಮಂತಗೊಳಿಸಿದ. ಒಂದೇ ಒಂದು ಸಾಲು ಕವನವನ್ನು ಬರೆಯದಿದ್ದರೂ, ಅವನು ಅವರಿವರಿಗೆ ಬರೆದ, ಮೋಹಕ ಶೈಲಿಯ ಪತ್ರಗಳಿಂದಲೇ ಅವನ ಹೆಸರು ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತಿತ್ತು. ಅವನ ಪತ್ರಿಕಾ ಬರವಣಿಗೆ ಸಮೃದ್ಧವಾಗಿತ್ತು. ಅಷ್ಟೇ ಅಲ್ಲದೆ ತನ್ನ ಮನೆಯವರಿಗೆ, ಅಸಂಖ್ಯಾತ ಸ್ನೇಹಿತರಿಗೆ ಯಾವಾಗಲೂ ಪತ್ರ ಬರೆಯುವ ಅಭ್ಯಾಸ ಅವನಿಗಿತ್ತು. ಅವನ ಸ್ನೇಹಿತರಲ್ಲಿ ಲೀ ಹಂಟ್, ಪರ್ಸಿ ಬಿಷೆ, ಶೆಲ್ಲಿ, ಜಾನ್ ಹ್ಯಾಮಿಲ್ಟನ್ ರೇನಾಲ್ಡ್ಸ್, ಬೆಂಜಾಮಿನ್ ರಾಬರ್ಟ್ ಹೇಡನ್ ಮತ್ತು ಜೋಸೆಫ್ ಸೆವೆರ್ನ್ ಮೊದಲಾದ ಸಾಹಿತಿಗಳೂ ಕಲಾವಿದರೂ, ಚಿತ್ರಕಾರರೂ ಸೇರಿದ್ದರು. ನಿಸರ್ಗ ಸೌಂದರ್ಯ ಮತ್ತು ಪರಿಶುದ್ಧ ಪರಿಸರಕ್ಕೆ ಹೆಸರಾಗಿದ್ದ, ಲಂಡನ್ನಿನ ಉತ್ತರ ಭಾಗದಲ್ಲಿರುವ ಹ್ಯಾಂಡ್‌ಸ್ಟೆಡ್ ಗ್ರಾಮದಲ್ಲಿ ವಾಸವಾಗಿದ್ದ ವಿಮರ್ಶಕ ಲೀ ಹಂಟನ ಮನೆಯಲ್ಲಿ ಇವರೆಲ್ಲ ಆಗಾಗ ಸೇರುತ್ತಿದ್ದರು; ಸಾಹಿತ್ಯಿಕ ಚರ್ಚೆ ನಡೆಸುತ್ತಿದ್ದರು.

ಕೀಟ್ಸ್ ಬದುಕಿದ್ದಾಗ, ಅವನ ಕಾವ್ಯ ವಿಮರ್ಶಕರ ಕಟುಟೀಕೆಗಳಿಗೆ ಒಳಗಾಗಿತ್ತು. ಆದರೆ ಅವನಿಗೆ ತನ್ನ 'ತಾಕತ್ತೇನೆಂಬುದು ತಿಳಿದಿತ್ತು. ತನ್ನ ಸೋದರ ಜಾರ್ಜ್‌ಗೆ ಬರೆದ ಪತ್ರವೊಂದರಲ್ಲಿ ಅವನು ಹೀಗೆಂದಿದ್ದಾನೆ: "ಬಹುಶಃ ನಿಧನದ ಅನಂತರವೇ ನನಗೆ ಇಂಗ್ಲೀಷ್ ಕವಿಗಳ ನಡುವೆ ಒಂದು ಸ್ಥಾನ ದೊರೆಯುತ್ತದೆ ಎಂದು ನನಗನಿಸುತ್ತಿದೆ."

ಆದದ್ದೂ ಹಾಗೆಯೇ. ಇಂಗ್ಲೆಂಡ್‌ನ ಉತ್ಕೃಷ್ಟ ರೊಮ್ಯಾಂಟಿಕ್ ಕವಿಗಳಲ್ಲಿ ಕೀಟ್ಸ್ ಒಬ್ಬನೆಂದು ಈಗ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಕಳೆದ ವರ್ಷ ಇಂಗ್ಲೆಂಡಿನಲ್ಲಿ ಅವನ ದ್ವಿ-ಶತಮಾನೋತ್ಸವ ವಿಜೃಂಭಣೆಯಿಂದ ನಡೆದಿದೆ; ಆ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳೂ, ಪ್ರದರ್ಶನಗಳೂ ನಡೆದಿವೆ.

ಕೀಟ್ಸ್ ಕವಿಯ ದ್ವಿ-ಶತಮಾನೋತ್ಸವದಲ್ಲಿ ಭಾಗವಹಿಸಲು ಹೋಗಿದ್ದ ನಾನು, ಅವನು ನಿಧನ ಹೊಂದಿದ ಸ್ಥಳವನ್ನು-ಅವನ ಮನೆ ಮತ್ತು ಸಮಾಧಿಗಳನ್ನು-ಸಂದರ್ಶಿಸಿದ್ದೆ. ಹ್ಯಾಂಪ್‌ಸ್ಟಡ್‌ನಲ್ಲಿರುವ ಕೀಟ್ಸ್‌ನ ಮನೆಗೆ ಹೋದಾಗ, ದೀರ್ಘಾವಧಿಯ ಅನಂತರ ಹಳೆಯ ಗೆಳೆಯನನ್ನು ಮತ್ತೆ ನೋಡಿದಂಥ ವಿಶಿಷ್ಟ ಅನುಭವ ನನಗಾಗಿತ್ತು. ಎತ್ತರವಾದ ವಿವಿಧ ಮರಗಳಿಂದ, ಲಾರೆಲ್ ಹಾಗೂ ಯೂ ಪೊದೆಗಳಿಂದ ತುಂಬಿದ ಉದ್ಯಾನ; ಸುತ್ತ ಭದ್ರವಾದ ಬೇಲಿ. ಒಳಗೆ ಪ್ರವೇಶಿಸಲು ನೀಲಿ ಬಣ್ಣ ಹಚ್ಚಿದ ಮರದ ಬಾಗಿಲು; ಉದ್ಯಾನದ ನಡುವೆ ಕವಿಯ ಮನೆ. ಸದ್ದುಗದ್ದಲವಿಲ್ಲದ ಪ್ರಶಾಂತ ವಾತಾವರಣ. 'ಕೀಟ್ಸನ ತೋಪು' ಎಂದೇ ಆ ಉದ್ಯಾನವನಕ್ಕೆ ಈಗಿನ ಹೆಸರು.

ಹ್ಯಾಂಪ್‌ಸ್ಟೆಡ್ ಕೀಟ್ಸ್‌ನಿಗೆ ತುಂಬ ಇಷ್ಟವಾಗಿದ್ದ ಸ್ಥಳವಾಗಿತ್ತು. ಎಂತಲೇ ತನ್ನ ಸೋದರರಾದ ಟಾಮ್ ಮತ್ತು ಜಾರ್ಜ್‌ರೊಂದಿಗೆ ಅವನು ಅಲ್ಲಿಗೆ ಹೋಗಿ ನೆಲಸಿದ. ಅಲ್ಲಿ ಕೀಟ್ಸ್‌ನಿಗೆ ರೆನಾಲ್ಡ್ಸ್, ಚಾರ್ಲ್ಸ್ ವೆಂಟ್‌ವರ್ತ್ ಡಿಲ್ಕೆ ಮತ್ತು ಚಾರ್ಲ್ಸ್ ಆರ್ಮಿಟೇಜ್ ಬ್ರೌನ್-ಇವರ ಪರಿಚಯ ಮಾಡಿಕೊಟ್ಟ. ಇವರಿಬ್ಬರೂ ವೆಂಟ್‌ವರ್ತ್ ಪ್ಲೇಸ್ ಎಂಬ ಹೆಸರಿನ ಎರಡು ಭಾಗಗಳಲ್ಲಿ ವಾಸಿಸಿದ್ದರು. (ಅದೇ ಈಗ 'ಕೀಟ್ಸ್ ಹೌಸ್' ಎನಿಸಿದೆ).

೧೮೧೮ರಲ್ಲಿ ಟಾಮ್ ನಿಧನ ಹೊಂದಿದಾಗ, ಜಾರ್ಜ್ ಅಮೆರಿಕಕ್ಕೆ ತೆರಳಿದ. ಆಗ ತನ್ನೊಂದಿಗೆ ಇರುವಂತೆ ಜಾನ್ ಕೀಟ್ಸ್‌ನಿಗೆ ಬ್ರೌನ್ ಸಲಹೆ ನೀಡಿದ. ಅದರಂತೆ ಕೀಟ್ಸ್ ಬ್ರೌನ್‌ನ ಮನೆಯನ್ನು ಸೇರಿಕೊಂಡ.

ಆ ವರ್ಷದ ವಸಂತ ಮತ್ತು ಗ್ರೀಷ್ಮ ಋತುಗಳು ಅತ್ಯಂತ ಸಂತೋಷದಾಯಕವಾಗಿದ್ದುವು ಅಷ್ಟೇ ಅಲ್ಲ; ಕೀಟ್ಸ್‌ನ ಅಲ್ಪಾವಧಿಯ ಜೀವನದಲ್ಲಿ ಆ ಕಾಲ ಅತ್ಯಂತ ಫಲಪ್ರದವಾಗಿತ್ತು. ವೆಂಟ್‌ವರ್ತ್ ಪ್ಲೇಸ್‌ನ ಒಂದು ಭಾಗವನ್ನು ಶ್ರೀಮತಿ ಬ್ರೌನ್ ಬಾಡಿಗೆಗೆ ಪಡೆದಿದ್ದಳು. ಬ್ರೌನ್ ಸತ್ತ ಮೇಲೆ ವಿಧವೆ ಬ್ರೌನ್ ತನ್ನ ಮೂವರು ಮಕ್ಕಳ ಜೊತೆ ಅಲ್ಲಿಯೇ ಉಳಿದಳು. ಅವಳ ಮಗಳು ಫ್ಯಾನಿಯನ್ನು ಕೀಟ್ಸ್ ಪ್ರೀಮಿಸಿದ. ಮದುವೆಯ ನಿಶ್ಚಿತಾರ್ಥವೂ ನಡೆಯಿತು. ಕೀಟ್ಸ್ ಫ್ಯಾನಿಗೆ ಬರೆದ ಪ್ರೇಮಪತ್ರಗಳು ಇಂಗ್ಲಿಷ್ ಪತ್ರ ಸಾಹಿತ್ಯಕ್ಕೆ ಅವನ ಶ್ರೇಷ್ಠ ಕೊಡುಗೆಗಳಾಗಿ ಉಳಿದಿವೆ.

ಬ್ರೌನ್‌ನ ಮನೆಯಲ್ಲಿ ಕೀಟ್ಸ್‌ನ ಪಾಲಿಗೆ ಬಂದಿದ್ದ ಭಾಗದಲ್ಲಿ ಮಹಡಿಯ ಮೇಲೆ ಮಲಗುವ ಕೋಣೆಯಿತ್ತು; ಕೆಳ ಅಂತಸ್ತಿನಲ್ಲಿ ಅತ್ಯಂತ ಚಿಕ್ಕ ಹಜಾರವಿತ್ತು. ಇವೆರಡು ಕೊಠಡಿಗಳನ್ನು, ಕೀಟ್ಸ್ ಜೀವಿಸಿದ್ದಾಗ ಅವು ಹೇಗಿದ್ದವೋ, ಬಹುಮಟ್ಟಿಗೆ ಹಾಗೆಯೇ ಈಗಲೂ ಇರಿಸಲಾಗಿದೆ ಎನ್ನಬಹುದು. ಇವನ್ನು ಸಂದರ್ಶಿಸಿದಾಗ, ಕೀಟ್ಸ್‌ನ ಚೈತನ್ಯ ಈಗಲೂ ಅಲ್ಲಿ ಸುಳಿದಾಡುತ್ತಿರುವಂತೆ ಅನಿಸುತ್ತದೆ.

ಕೀಟ್ಸ್‌ನ ಮಲಗುವ ಕೊಠಡಿಯಲ್ಲಿ ಈಗ, ಅವನು ಮಲಗಲು ಬಳಸುತ್ತಿದ್ದ, ಪರದೆಗಳಿಂದ ಕೂಡಿದ ಮಂಚ ಮತ್ತು ಹಾಸಿಗೆಗಳ ಪ್ರತಿಕೃತಿಗಳಿವೆ. ಗೋಡೆಯ ಮೇಲೆ ವರ್ಣಚಿತ್ರ ಕಲಾವಿದ ಸೆವೆರ್ನ್, ಕೀಟ್ಸ್ ಜೀವಂತವಿದ್ದಾಗ ರಚಿಸಿದ ಅವನ ಭಾವಚಿತ್ರವಿದೆ. ಕೀಟ್ಸ್ ಕುಳಿತುಕೊಳ್ಳುತ್ತಿದ್ದ ಹಜಾರದಲ್ಲಿಯೂ ಸೆವೆರ್ನ್ ಬಿಡಿಸಿದ, ಕೀಟ್ಸ್‌ನ ಚಿತ್ರವಿದೆ. ಆದರೆ ಇದು ಕೀಟ್ಸ್ ಮೃತನಾದ ಅನಂತರ, ಸೆವೆರ್ನ್ ರೋಮ್‌ನಲ್ಲಿ ಬರೆದದ್ದು. ಈ ಚಿತ್ರದ ಶೀರ್ಷಿಕೆ: 'ವೆಂಟ್‌ವರ್ತ್ ಪ್ಲೇಸ್‌ನಲ್ಲಿ ಕೀಟ್ಸ್'. ಹಜಾರದಲ್ಲಿ ಕುರ್ಚಿಯ ಮೇಲೆ ಕುಳಿತು, ಕಾಲುಗಳನ್ನು ಇನ್ನೊಂದು ಕುರ್ಚಿಯ ಮೇಲಿಟ್ಟುಕೊಂಡು ಪುಸ್ತಕ ಓದುತ್ತಿರುವ ಭಂಗಿಯಲ್ಲಿ ಕೀಟ್ಸ್‌ನ ಭಾವಚಿತ್ರವನ್ನು ಸೆವೆರ್ನ್ ರಚಿಸಿದ್ದಾನೆ. ಆ ಎರಡು ಕುರ್ಚಿಗಳು ಈಗಲೂ, ಕೀಟ್ಸ್ ಬದುಕಿದ್ದಾಗ ಇದ್ದ ಸ್ಥಾನದಲ್ಲಿಯೇ ಇವೆ. ಹೀಗಾಗಿ ಈಗ ಕೀಟ್ಸ್‌ನ ಆ ಅಧ್ಯಯನ ಕೊಠಡಿಗೆ ಭೇಟಿ ನೀಡುವವರಿಗೆ, ಇನ್ನೇನು, ಕೀಟ್ಸ್ ಅಲ್ಲಿಗೆ ಓದಲು ಬಂದೇಬಿಡುತ್ತಾನೆ

ಎಂಬ ಭಾವನೆ ಉಂಟಾಗುವಂತಿದೆ. ರೇಷ್ಮೆ ಬಟ್ಟೆಯಿಂದ ಆಚ್ಛಾದಿತವಾದ ಒಂದು ಸೋಫ ಕೂಡ ಆ ಕೊಠಡಿಯಲ್ಲಿದೆ. ಓದಲು-ಬರೆಯಲು ಸಾಧ್ಯವಾಗದಷ್ಟು ಆರೋಗ್ಯ ಕೆಟ್ಟು ಹೋದಾಗ, ಕೀಟ್ಸ್ ವಿಶ್ರಾಂತಿ ಪಡೆಯಲೋಸುಗ ಕುಳಿತುಕೊಳ್ಳುತ್ತಿದ್ದ ಸೋಫದ ಪ್ರತಿಕೃತಿ ಅದು. ಆ ಸೋಫವನ್ನು ಹಜಾರದ ಕಿಟಕಿಯ ಸಮೀಪ ಇಡಲಾಗಿದೆ. ಫ್ಯಾನಿ ಆಗಾಗ ಓಡಾಡುವ ಉದ್ಯಾನವನ್ನು ನೋಡಲು ಕೀಟ್ಸನಿಗೆ ಆ ಕಿಟಕಿಯಿಂದಾಗಿ ಸಾಧ್ಯವಾಗುತ್ತಿತ್ತು.

೧೮೨೦ರ ಶರತ್ಕಾಲದಲ್ಲಿ ಕೀಟ್ಸನ ಕ್ಷಯ ರೋಗ ಉಲ್ಬಣಗೊಂಡಿತು. ತಾನು ಇನ್ನೂ ಸ್ವಲ್ಪ ಕಾಲ ಬದುಕಿ ಉಳಿಯಬೇಕಾಗಿದ್ದರೆ, ಹಿತಕರ ಹವೆಯ ಬೇರಾವುದಾದರೂ ಸ್ಥಳಕ್ಕೆ ಹೋಗಬೇಕೆಂದು ಕೀಟ್ಸ್‌ನಿಗೆ ಖಚಿತವಾಯಿತು. ಆಗ ಶೆಲ್ಲಿ ಅವನನ್ನು ಇಟಲಿಗೆ ಆಹ್ವಾನಿಸಿದ. ಶೆಲ್ಲಿ ಹಾಗೂ ಕೀಟ್ಸ್ ಅಷ್ಟೇನೂ ನಿಕಟ ಸ್ನೇಹಿತರಾಗಿರಲಿಲ್ಲ. ಆದರೆ ಇಬ್ಬರಿಗೂ ಪರಸ್ಪರರ ಪ್ರತಿಭೆಯ ಬಗ್ಗೆ ಸ್ಥಿರವಾದ ಗೌರವ ಭಾವನೆಯಿತ್ತು.

ಫ್ಯಾನಿಯಿಂದ ದೂರ ಹೋಗುವುದು ಕೀಟ್ಸನಿಗೆ ತುಂಬ ದುಃಖದ ಸಂಗತಿಯಾಗಿತ್ತು. ಆದರೆ ಬೇರೆ ದಾರಿಯಿರಲಿಲ್ಲ. ಕೀಟ್ಸನ ಪ್ರಯಾಣಕ್ಕೆ ಫ್ಯಾನಿ ಸಕಲ ಸಿದ್ಧತೆಗಳನ್ನೂ ಮಾಡಿದಳು. ಅವನ ಬಟ್ಟೆ-ಬರೆ ಟೊಪ್ಪಿಗೆಗಳನ್ನು ಒಗೆದು ಇಸ್ತ್ರಿ ಮಾಡಿದಳು. ಅವನಿಗೆ ಧೈರ್ಯ ತುಂಬಿದಳು; ಅವನನ್ನು ಸಮಾಧಾನ ಪಡಿಸಿದಳು.

೧೮೨೦ನೆಯ ಸೆಪ್ಟೆಂಬರ್ ಹದಿನೇಳರಂದು, ಸೆವೆರ್ನ್ ಜೊತೆಯಲ್ಲಿ ಕೀಟ್ಸ್ ಹಡಗಿನಲ್ಲಿ ಇಂಗ್ಲೆಂಡಿನಿಂದ ಹೊರಟ. ಸೆವೆರ್ನ್ ಅವಿವಾಹಿತ; ಕೀಟ್ಸ್‌ನೊಂದಿಗೆ ಹೊರಡಲು ಅವನು ಕ್ಷಿಪ್ರಕಾಲದಲ್ಲಿ ಸಿದ್ಧನಾಗಿದ್ದ. ಜಲಪ್ರಯಾಣ ದೀರ್ಘಾವಧಿಯದಾಗಿತ್ತು. ಬಿರುಗಾಳಿ ಭೋರ್ಗರೆಯುತ್ತಿತ್ತು. ಹೀಗಾಗಿ ನೇಪಲ್ಸ್‌ಕೊಲ್ಲಿ ತಲುಪಲು ಅವರಿಗೆ ಹತ್ತಿರ ಹತ್ತಿರ ಐದುವಾರಗಳೇ ತಗುಲಿದವು.

ಮುಂದೆ ಅವರು ಬಾಡಿಗೆ ಗಾಡಿಯಲ್ಲಿ ರೋಮ್‌ಗೆ ಹೊರಟರು. ಅತ್ಯಂತ ಕೆಟ್ಟ ರಸ್ತೆಗಳು. ಸೆವೆರ್ನ್ ಹೆಚ್ಚು ದೂರ ನಡೆದುಕೊಂಡೇ ಹೋದ. ಕೀಟ್ಸನ ಮನಸ್ಸನ್ನು ಉಲ್ಲಾಸಗೊಳಿಸಲು ಅವನು ಆಗಾಗ ವನಪುಷ್ಪಗಳನ್ನು ಸಂಗ್ರಹಿಸಿ ಅವನಿಗೆ ಕೊಡುತ್ತಿದ್ದ. ರೋಮಿನಲ್ಲಿ ಅವರು ಡಾ|| ಜೇಮ್ಸ್ ಕ್ಲಾರ್ಕ್‌ರನ್ನು ಭೇಟಿಯಾದರು ಅವರು ಸುಪ್ರಸಿದ್ಧ ವೈದ್ಯರಾಗಿದ್ದರು, ಕ್ಲಾರ್ಕ್‌ರಿಗೆ ಮೊದಲೇ ಸಂದೇಶ ಬಂದದ್ದರಿಂದ. ಅವರು ಕೀಟ್ಸ್ ಹಾಗೂ ಸೆವೆರ್ನ್‌ರಿಗಾಗಿ ಪಿಯಾಜಾ ಡಿ· ಸ್ಪಗ್ನಾದ ೨೬ನೇ ಸಂಖ್ಯೆಯ ಮನೆಯನ್ನು ಕಾಯ್ದಿರಿಸಿದ್ದರು. ಆ ಮನೆ ಕಟ್ಟಡದ ಎರಡನೆಯ ಮಹಡಿಯ ಮೇಲಿತ್ತು.

ಅದೇ ವರ್ಷ ಡಿಸೆಂಬರ್ ಹತ್ತರಂದು ಕೀಟ್ಸ್‌ನ ಕಾಯಿಲೆ ತೀವ್ರಗೊಂಡಿತು. ಶ್ವಾಸಕೋಶದಿಂದ ರಕ್ತಸ್ರಾವವಾಗತೊಡಗಿತು. ಸ್ವತಃ ಡಾ|| ಕ್ಲಾರ್ಕರೇ ಅವನಿಗೆ ರಕ್ತದಾನ ಮಾಡಿದರು. ಅವನನ್ನು ಉಪವಾಸದಲ್ಲಿ, ಪಥ್ಯದಲ್ಲಿ ಇರಿಸಲಾಯಿತು. ತಾನೇನು ಸೇವೆ ಮಾಡಲು ಸಾಧ್ಯವಿತ್ತೋ ಅವೆಲ್ಲವನ್ನು ಮಿತ್ರ ಕೀಟ್ಸನಿಗಾಗಿ ಸೆವೆರ್ನ್ ಮಾಡಿದ. ಕೀಟ್ಸ್ ಯಾತನೆ ಪಡುತ್ತ

ಮಲಗಿದ್ದಾಗ, ಅವನಲ್ಲಿ ಸಂತೋಷ ತುಂಬಲು ಪಿಯಾನೋ ಬಾರಿಸಿದ, ಸಂಗೀತ ಹಾಡಿದ ಅವನೇ ಸ್ವತಃ ಮನೆಯನ್ನು ಸ್ವಚ್ಛ ಗೊಳಿಸುತ್ತಿದ್ದ, ಅಡುಗೆ ಮಾಡುತ್ತಿದ್ದ ಕೀಟ್ಸ್‌ನನ್ನು ಸಾಧ್ಯವಾದಷ್ಟು ಸಂತೋಷ ಸಮಾಧಾನಗಳಲ್ಲಿ ಇರಿಸಲು ಸೆವೆರ್ನ್ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದ ಎನ್ನಬಹುದು.

ಕೀಟ್ಸ್ ಕೃಶನಾಗುತ್ತ ಹೋದ. ಅತ್ಯಂತ ದೈಹಿಕ ಯಾತನೆ ಉಂಟಾಗುತ್ತಿದ್ದಾಗಲೂ ಕೀಟ್ಸ್ ಮಾನಸಿಕ ಸ್ಥೈರ್ಯವನ್ನು ಕಿಂಚಿತ್ತೂ ಕಳೆದುಕೊಳ್ಳಲಿಲ್ಲ. ತಾನು ಮದುವೆಯಾಗಲು ನಿರ್ಧರಿಸಿದ್ದವಳನ್ನು ಕಾಣಲು ಅವನಿಗೆ ಮುಂದೆಂದೂ ಸಾಧ್ಯವಾಗಲಿಲ್ಲ. "ನಾನು ಸಾವನ್ನಾದರೂ ಸಹಿಸಿಯೇನು, ಆದರೆ ಫ್ಯಾನಿಯಿಂದ ದೂರವಾಗಲು ನನಗೆ ಸಾಧ್ಯವೇ ಇಲ್ಲ." ಎಂದು ಅವನು ತನ್ನ ಮಿತ್ರನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾನೆ.

ಬೇಗ ಸತ್ತರೆ ತನಗೆ ಅಮರತ್ವ ಪ್ರಾಪ್ತಿಯಾಗದೋ ಏನೋ ಎಂಬ ಭಯ ಕೀಟ್ಸ್‌ನಿಗಿತ್ತು. ತನ್ನೊಂದು ಪತ್ರದಲ್ಲಿ ಅವನು ಫ್ಯಾನಿಗೆ ಹೀಗೆ ಬರೆದಿದ್ದಾನೆ: "ಸಾಯಲೇ ಬೇಕಾಗಿ ಬಂದರೆ, ಆಗ ಬಹುಶಃ, ನನ್ನ ಸ್ನೇಹಿತರು ನನ್ನನ್ನು ಸದಾ ಸ್ಮರಿಸಿಕೊಳ್ಳುವಂತೆ ಮಾಡಬಲ್ಲ ಯಾವ ಕೆಲಸವನ್ನು ಮುಗಿಸಿ ಹೋಗಲು ನನಗೆ ಸಾಧ್ಯವಾಗುವುದಿಲ್ಲ. ಆದರೆ ಎಲ್ಲ ವಿಷಯಗಳಲ್ಲಿಯೂ ಸೌಂದರ್ಯವನ್ನು ಕಾಣುವ ಜೀವನ ಸಿದ್ಧಾಂತ ನನ್ನದಾಗಿದೆ. ನನಗೆ ಇನ್ನಷ್ಟು ಕಾಲ ಬಾಳುವ ಅವಕಾಶ ಲಭಿಸಿದಲ್ಲಿ, ಮುಂದೆ ಜನರು ನನ್ನನ್ನು ಸ್ಮರಿಸಿಕೊಳ್ಳುವಂತಹ ಕೆಲಸವನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆ."

ನನ್ನ ರೋಮ್ ಪ್ರಯಾಣ, ಕೀಟ್ಸ್‌ನ ರೋಮ್ ಪ್ರಯಾಣದಷ್ಟೇನೂ ಕಷ್ಟಕರವಾಗಲಿಲ್ಲ. ಎರಡೇ ಗಂಟೆಗಳ ಅವಧಿಯಲ್ಲಿ ನನ್ನನ್ನು ಜೆಟ್ ವಿಮಾನ ಇಂಗ್ಲೆಂಡಿನಿಂದ ರೋಮ್‌ಗೆ ಕೊಂಡೊಯ್ದಿತು. ನಾನು ರೋಮ್‌ನಲ್ಲಿ ಮೊತ್ತಮೊದಲು ಹೋದದ್ದೇ, ಸಾಯುವ ಕಾಲದಲ್ಲಿ ಕೀಟ್ಸ್ ನೆಲಸಿದ್ದ 'ಪಿಯಾಜಾ ಡಿ ಸ್ಪಗ್ನಾ'ದ ೨೬ನೆಯ ಸಂಖ್ಯೆಯ ಮನೆಗೆ. ಅದೀಗ 'ಕೀಟ್ಸ್–ಶೆಲ್ಲಿ ಸ್ಮಾರಕ ಗೃಹ'ವೆಂದು ಪ್ರಸಿದ್ಧವಾಗಿದೆ.

ಆದರೆ ಈಗ ಅನೇಕ ಬದಲಾವಣೆಗಳಾಗಿವೆ. ಕೀಟ್ಸ್ ಜೀವಿಸಿದ್ದಾಗ ಇದ್ದ, ಆ ಹಿಂದಿನ ಬಾಗಿಲು ಕಿಟಕಿಗಳಾಗಲಿ, ಪೀಠೋಪಕರಣಗಳಾಗಲಿ ಈಗಿಲ್ಲ. ನೆಲಗಟ್ಟೂ ಮಾರ್ಪಟ್ಟಿದೆ. ಆದರೆ ತಾರಸಿಯ ಮೇಲಿನ ಗುಲಾಬಿಯ ಕೆತ್ತನೆ, ಈಗ ಸ್ವಲ್ಪ ಮಸುಕಾಗಿದ್ದರೂ, ಮೊದಲಿನಂತೆಯೇ ಇದೆ. ಈಗಲೂ ಕಿಟಕಿಯ ಸಮೀಪ ಕುಳಿತು ಹೊರಗಿನ ಉದ್ಯಾನವನ್ನು ವೀಕ್ಷಿಸಬಹುದು. ಉದ್ಯಾನದಲ್ಲಿನ ಕಾರಂಜಿ ಕೂಡ, ಕೀಟ್ಸ್ ಜೀವಿಸಿದ್ದಾಗ ಹೇಗಿತ್ತೋ ಹಾಗೆಯೇ ಈಗಲೂ ಇದೆ.

ಹಜಾರದ ಗೋಡೆ ಬೀರುವಿನಲ್ಲಿ ಪುಸ್ತಕಗಳನ್ನೂ ಪತ್ರಗಳನ್ನೂ ಹಸ್ತಪ್ರತಿಗಳನ್ನು ಜೋಡಿಸಿಡಲಾಗಿದೆ. ಅಲ್ಲದೆ ಕವಿ ಶೆಲ್ಲಿಯ ಎದೆಯ ಮೇಲ್ಭಾಗದ ಸುಂದರ ಅಮೃತಶಿಲಾ ವಿಗ್ರಹವಿದೆ. ಆದರೆ ಅವನ್ನೀಗ, ಸಾಯುವ ಹಿಂದಿನ ಮೂರು ತಿಂಗಳ ಕಾಲ ಕೀಟ್ಸ್ ಇದ್ದಂತಹ ಚಿಕ್ಕ ಮಲಗುವ

ಕೋಣೆಯಲ್ಲಿ ಇಡಲಾಗಿದೆ. ಕೀಟ್ಸ್–ಶೆಲ್ಲಿ ಸ್ಮಾರಕ ಗೃಹ'ಕ್ಕೆ ಭೇಟಿ ನೀಡಿದ ಯಾವ ವ್ಯಕ್ತಿಗೇ ಆಗಲಿ, ಸುಮಾರು ೧೭೫ ವರ್ಷಗಳ ಹಿಂದೆ ಸಂಭವಿಸಿದ ದುರಂತ ಘಟನೆಗಳೆಲ್ಲ ನೆನಪಿಗೆ ಬಂದು ಕಣ್ಣು ಮಂಜಾಗುತ್ತದೆ. ಕೀಟ್ಸ್‌ನ ಕೊನೆಯ ದಿನಗಳ ಯಾತನೆ ಮತ್ತು ಭೀಕರತೆಗಳು ನೆನಪಿಗೆ ಬಂದು ಅವನ ಬಗ್ಗೆ ಮರುಕವುಂಟಾಗುತ್ತದೆ.

೧೮೨೧ನೆಯ ಫೆಬ್ರವರಿ ಇಪ್ಪತ್ತಮೂರರ ವರೆಗೆ ಕೀಟ್ಸ್ ಹೇಗೋ ಜೀವಧರಿಸಿದ್ದ. ಅವನ ಬದುಕಿನ ಕೊನೆಯ ಕೆಲವು ಗಂಟೆಗಳ ವರದಿಯನ್ನು ಸೆವೆರ್ನ್ ಹೀಗೆ ನೀಡಿದ್ದಾನೆ: "ಸೆವೆರ್ನ್, ಸೆವೆರ್ನ್, ನನ್ನನ್ನು ಮೇಲೆತ್ತು. ನಾನು ಸಾಯುತ್ತಿದ್ದೇನೆ. ನಾನು ನಿರಾಯಾಸವಾಗಿ ಸಾಯುತ್ತೇನೆ ಹೆದರಬೇಡ; ಧೃತಿಗೆಡಬೇಡ ನನಗೆ ಇಂಥ ಸಾವನ್ನು ಕೊಡುತ್ತಿರುವ ದೇವರಿಗೆ ಕೃತಜ್ಞರಾಗಿರೋಣ." ತನ್ನ ತೋಳುಗಳ ಮೇಲೆಯೇ ಕೊನೆಯುಸಿರೆಳೆದ ಕೀಟ್ಸ್ ಕವಿಯ ಬಗ್ಗೆ ಸೆವೆರ್ನ್ ಹೀಗೆಂದಿದ್ದಾನೆ: "ಕೀಟ್ಸ್ ನಿಧಾನವಾಗಿ ಮರಣದೇವತೆಯ ಮಡಿಲು ಸೇರಿದ; ಮರಣಕಾಲದಲ್ಲಿ ಅವನೆಷ್ಟು ಪ್ರಶಾಂತನಾಗಿದ್ದನೆಂದರೆ, ಈಗಲೂ ನನಗೆ ಅವನು ಸಾಯಲಿಲ್ಲ; ನಿದ್ರಿಸಿದನಷ್ಟೇ ಎಂದೇ ಅನಿಸುತ್ತಿದೆ."

ಕೀಟ್ಸನ ಶ್ವಾಸಕೋಶಗಳು ಸಂಪೂರ್ಣವಾಗಿ ಹಾಸಿಗೊಂಡಿದ್ದುವು ಎಂದು ಅವನ ಶವಪರೀಕ್ಷೆಯಿಂದ ತಿಳಿದುಬಂತು. ಮೂರು ದಿನಗಳ ಅನಂತರ ಪ್ರೊಟೆಸ್ಟಂಟ್ ಶ್ಮಶಾನದಲ್ಲಿ ಅವನ ಹೆಣವನ್ನು ಹೂಳಲಾಯಿತು.

ಪಿರಾಮ್ಯಿಡ್ ನಿಲ್ದಾಣದವರೆಗೆ ರೈಲಿನಲ್ಲಿ ಪ್ರವಾಸಮಾಡಿದ ನಾನು ಅನಂತರ ನಡೆದುಕೊಂಡೇ ಕೀಟ್ಸನ ಸಮಾಧಿಸ್ಥಳಕ್ಕೆ ಸಾಗಿದೆ, ಎತ್ತರವಾದ ಇಟ್ಟಿಗೆಗೋಡೆಗಳಿಂದ ಸುತ್ತುವರಿದಿರುವ ಶ್ಮಶಾನ. ಅದರ ಒಂದು ಮೂಲೆಯಲ್ಲಿತ್ತು ಕೀಟ್ಸನ ಭವ್ಯಸಮಾಧಿ. ಕೀಟ್ಸ್ ಬಯಸಿದ್ದಂತೆ, ಸಮಾಧಿಯ ಮೇಲೆ ಅವನ ಹೆಸರನ್ನು ಕೆತ್ತಲಾಗಿರಲಿಲ್ಲ. ಬದಲಾಗಿ ಒಂದು 'ಲೈರ್' ತಂತಿವಾದ್ಯದ ಉಬ್ಬುಚಿತ್ರವನ್ನು ಕೆತ್ತಲಾಗಿತ್ತು. ಅದರ ಕೆಳಗೆ ಇದ್ದ ಸಮಾಧಿಲೇಖ ಹೀಗಿದೆ: "ಯಾರ ಹೆಸರನ್ನು ಜಲಲಿಪಿಯಲ್ಲಿ ಬರೆಯಲಾಗಿದೆಯೋ ಅವನು ಇಲ್ಲಿದ್ದಾನೆ." ಜಲಲಿಪಿಯಲ್ಲಿ ಬರೆಯಲಾದ ಹೆಸರು ನಿರರ್ಥಕತೆ ಹಾಗೂ ಅಶಾಶ್ವತತೆಗಳಿಗೆ ಸಂಕೇತವಾಗಿದೆ. ಮರಣಾನಂತರ ತನ್ನನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ; ಅಷ್ಟೊಂದು ವಿಫಲ ತನ್ನ ಬದುಕು ಎಂದು ಕೀಟ್ಸ್ ಭಾವಿಸಿದ್ದಂತೆ ಕಾಣುತ್ತದೆ.

ಕೀಟ್ಸ್ ಸತ್ತಮೇಲೆ ಮತ್ತೆ ಹಲ ವರ್ಷಗಳ ಕಾಲ ಸೆವೆರ್ನ್ ಜೀವಿಸಿದ್ದ. ಅವನ ಸಮಾಧಿಯೂ ಕೀಟ್ಸನ ಸಮಾಧಿಯ ಸಮೀಪವೇ ಇದೆ.

ಕೀಟ್ಸನ ಅಕಾಲ ಹಾಗೂ ದುರಂತ ಸಾವಿನಿಂದ ಶೆಲ್ಲಿ ಅಸಾಧಾರಣ ಸಂಕಟಪಟ್ಟ. ಕೀಟ್ಸನ ನೆನಪಿನಲ್ಲಿ ಶೆಲ್ಲಿ ಬರೆದ 'ಅಡೊನಾಯಿಸ್' ಎಂಬ ಶೋಕಗೀತೆ, ಒಬ್ಬ ಕವಿ ಇನ್ನೊಬ್ಬ ಕವಿಗೆ ನೀಡಿದ ಹೃತ್ಪೂರ್ವಕ ಶ್ರದ್ಧಾಂಜಲಿಗೊಂದು ಅಪೂರ್ವನಿದರ್ಶನವಾಗಿದೆ. ಶೆಲ್ಲಿಕೂಡ ಬಹಳಕಾಲ ಬದುಕಲಿಲ್ಲ. ಕೀಟ್ಸ್ ಸತ್ತ ಮರುವರ್ಷವೇ, ದೋಣಿ ಅಪಘಾತವೊಂದು ಇಪ್ಪತ್ತೊಂಬತ್ತು ವರ್ಷ ಪ್ರಾಯದ ಶೆಲ್ಲಿಯ ಬಲಿ ತೆಗೆದುಕೊಂಡಿತು. ಅವನ ಸಮಾಧಿಯನ್ನು ನಾವು ಕೀಟ್ಸ್ ಮತ್ತು ಸೆವೆರ್ನರ ಸಮಾಧಿಯ ಸಮೀಪವೇ ನೋಡಬಹುದಾಗಿದೆ.

ಶ್ಮಶಾನದ ಬೆಂಚೊಂದರಲ್ಲಿ ಕ್ಷಣಕಾಲ ಕುಳಿತ ನನಗೆ ಕೀಟ್ಸನ ಅಲ್ಪಾವಧಿ ಜೀವನದ ಮಹಾಸಾಧನೆಯ ಬಗ್ಗೆ ಬೆರಗುಂಟಾಯಿತು. ನಾನು ಹೊಸಲೋಕವೊಂದರಲ್ಲಿದ್ದಂತೆ ಅನಿಸಿತು. ಸದ್ದುಗದ್ದಲವಿಲ್ಲದ ಶಾಂತ ಪ್ರದೇಶ, ಹಿತವಾಗಿ ಬೀಸುವ ತಂಗಾಳಿ. ಸೈಪ್ರೆಸ್, ಪೈನ್, ಮರ್ಟಲ್, ಲಾರೆಲ್ ಮೊದಲಾದ ವೃಕ್ಷಗಳು, ನಿರಂತರವಾಗಿ ಕೇಳಿಬರುವ ಪಕ್ಷಿಗಾನ. ದುಃಖಿತರನ್ನು ಸಂತೈಸುವಂಥ ಪರಿಸರ. ಕಲ್ಪನೆಯಲ್ಲಿ ನಾನು ಹಿಂದುಹಿಂದೆ ಸಾಗಿದೆ. ನಾನೊಬ್ಬ ಕವಿಯಾಗಿದ್ದರೆ.... ಹ್ಯಾಂಪ್ ಸ್ಟೆಡ್ ಉದ್ಯಾನದಲ್ಲಿ ಓಡಾಡುವ ಸದವಕಾಶ ನನಗಿದ್ದಿದ್ದರೆ....

ಕವಿಗಳು ಕವಿಗಳಾಗಿಯೇ ಜನಿಸುತ್ತಾರೆ; ಅವರನ್ನು ತರಬೇತಿ ನೀಡಿ ಸೃಷ್ಟಿಸಲಾಗುವುದಿಲ್ಲ ಎಂಬುದಕ್ಕೆ ಕೀಟ್ಸನೇ ನಿದರ್ಶನ. ಅವನೇ ಒಂದೆಡೆ ಹೇಳಿದಂತೆ, "ಸಸ್ಯದಲ್ಲಿ ಎಲೆಗಳು ಮೂಡಿದಷ್ಟು ಸಹಜವಾಗಿ, ಕಾವ್ಯ ಸೃಷ್ಟಿಯಾಗಬೇಕು; ಪ್ರಯತ್ನಪೂರ್ವಕವಾಗಿ ರಚಿಸಲಾದ ಕಾವ್ಯ ಕಾವ್ಯವೇ ಅಲ್ಲ." ನಾನೂ ಒಂದು ಕವನ ಸಂಕಲನ ಪ್ರಕಟಿಸಿದ್ದೇನೆ. ಅದು ಕಾವ್ಯವಲ್ಲ ಎಂಬುದು ನನಗೆ ತಿಳಿದಿದೆ. ಆದ್ದರಿಂದಲೇ ಕವಿಯಾಗುವ ವ್ಯರ್ಥ ಯತ್ನ ಮಾಡದೆ ನಾನು ಪ್ರವಾಸ ಕಥನಕಾರನಾದೆ.

ಸಂಜೆ ಐದೂವರೆ ಗಂಟೆ ವೇಳೆಗೆ ಕೀಟ್ಸನ ಸಮಾಧಿಸ್ಥಳವನ್ನು ಬಿಟ್ಟು ಹೊರಡಬೇಕಾಗಿತ್ತು. ಕೀಟ್ಸನಿಗೆ ಕೊನೆಯ ವಿದಾಯ ಹೇಳಲೆಂದು ನಾನು ಮತ್ತೆ, ವೈಒಲೆಟ್ ಸಸ್ಯಗಳಿಂದ ಸುತ್ತುವರಿದ ಅವನ ಸಮಾಧಿಯತ್ತ ಸಾಗಿದೆ. ಅಂಥ ಸುಂದರ ಸ್ಥಳದಲ್ಲಿ ಮರಣಾನಂತರ ಶೆಲ್ಲಿ ಮತ್ತು ಕೀಟ್ಸ್ ಪ್ರೀತಿಯಿಂದ ಒಂದುಗೂಡಿದ್ದಾರೆ ಎಂದು ಆಗ ನನಗನಿಸಿತು.



ಆರೋಗ್ಯವು ಒಳ್ಳೇ ಲಾಭವಾಗಿದೆ. ಸಂತೋಷವು ಒಳ್ಳೇ ಧನವಾಗಿದೆ. ವಿಶ್ವಾಸವು ಒಳ್ಳೆಯ ಬಾಂಧವನಾಗಿದೆ, ನಿರ್ವಾಣವು ನಿಜವಾದ ಸುಖವಾಗಿದೆ.

—ಮಹಾವೀರ

ವಿಜ್ಞಾನ ಪರಿಚಾರಕ-ಅಡ್ಯನಡ್ಕ ಕೃಷ್ಣಭಟ್

ಡಾ|| ಎ. ಪಿ. ರಾಧಾಕೃಷ್ಣ

ಸುಮಾರು ನಾಲ್ಕು ದಶಕಗಳಿಂದ ವಿಜ್ಞಾನ ಬರಹ, ಉಪನ್ಯಾಸ, ಸಂವಾದ ಹಾಗೂ ಜಾಥಾಗಳ ಮೂಲಕ ಜನಸಮುದಾಯದಲ್ಲಿ ವಿಜ್ಞಾನದ ಬಗ್ಗೆ ಅರಿವು ಮೂಡಿಸಿ ವೈಜ್ಞಾನಿಕ ಮನೋಭಾವವನ್ನು ಪ್ರಸರಿಸುವುದರಲ್ಲಿ ನಿರತರಾದ ಮಹನೀಯರ ಪಟ್ಟಿ ಮಾಡಲು ಹೇಳಿದರೆ, ಆ ಎಲ್ಲ ಪಟ್ಟಿಗಳಲ್ಲಿ ಇರುವ ಮತ್ತು ಇರಲೇಬೇಕಾದ ಒಂದು ಹೆಸರು ಪ್ರೊ|| ಅಡ್ಯನಡ್ಕ ಕೃಷ್ಣಭಟ್, ಮೂಲ್ಕಿ ವಿಜಯಾ ಕಾಲೇಜಿನ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರು.

ವಿಜ್ಞಾನವನ್ನು ಜನಪ್ರಿಯಗೊಳಿಸಲು ಕೃಷ್ಣಭಟ್ಟರು ನಡೆಸುತ್ತಿರುವ ಪ್ರಯತ್ನಗಳನ್ನು ಗಮನಿಸಿದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರವಿದ್ಯಾ ಸಂವಹನ ಸಮಿತಿ ರಾಷ್ಟ್ರಮಟ್ಟದ ಅತ್ಯುನ್ನತ ಪ್ರಶಸ್ತಿಯನ್ನು ತೀರ ಇತ್ತೀಚೆಗೆ ಪ್ರಧಾನಿಸಿ ಗೌರವಿಸಿತು. (೨೯-೨-೧೯೯೬) ಕೃಷ್ಣಭಟ್ಟರು ಪ್ರಶಸ್ತಿಗೆ ಆಯ್ಕೆಯಾದ ಸುದ್ದಿ ಅವರನ್ನು ತಿಳಿದ ಮಂದಿಗೆ ಅಚ್ಚರಿ ಹುಟ್ಟಿಸಲಿಲ್ಲ. ಪ್ರಶಸ್ತಿಯನ್ನು ಪಡೆಯಲೇಬೇಕಾದ ವ್ಯಕ್ತಿಗೆ ಪ್ರಶಸ್ತಿ ಬಂದರೆ ಆಶ್ಚರ್ಯವಾದರೂ ಏನು? ವಾಸ್ತವವಾಗಿ ಇಂದು ಬೆಲೆ ಬಂದಿರುವುದು ಆ ಪ್ರಶಸ್ತಿಗೆ!

–ಸಂಪಾದಕ

ಬಾಲ್ಯದ ಪ್ರಭಾವ

ಕೃಷ್ಣಭಟ್ಟರು ೧೯೩೮ರ ಮಾರ್ಚ್ ೧೫ ರಂದು ದಕ್ಷಿಣ ಕನ್ನಡ ಜಿಲ್ಲೆಯ ಅಡ್ಯನಡ್ಕದಲ್ಲಿ ಜನಿಸಿದರು. ಇವರ ತಂದೆ-ತಿಮ್ಮಣ್ಣ ಭಟ್ ಮತ್ತು ತಾಯಿ-ಲಕ್ಷ್ಮಿ ಅಮ್ಮ. ವಿಟ್ಲ-ಕಾಸರಗೋಡು ದಾರಿಯಲ್ಲಿ ವಿಟ್ಲದಿಂದ ಹದಿನೈದು ಕಿಲೋಮೀಟರುಗಳಷ್ಟು ದೂರದಲ್ಲಿರುವ ಅಡ್ಯನಡ್ಕದ ಪರಿಸರ ಬಲು ಸುಂದರ. ಕೃಷ್ಣಭಟ್ಟರೇ ಹೇಳುತ್ತಾರೆ "ಅಡ್ಯನಡ್ಕ ಒಂದು ಪ್ರಸ್ಥಭೂಮಿಯಂತಿದೆ. ಬೆಟ್ಟಗುಡ್ಡಗಳು, ಹಸುರು ಚಿಮ್ಮುವ ಕಣಿವೆಗಳು. ಈ ಗಾಢ ಸೌಂದರ್ಯ ನನ್ನಲ್ಲಿ 'ಏನು ವಿಸ್ಮಯ ಸೃಷ್ಟಿ' ಭಾವವನ್ನು ಮೂಡಿಸುತ್ತಿತ್ತು. ಅಡ್ಯನಡ್ಕದ ಸರಳ, ಸುಂದರ ಮತ್ತು ಸ್ವಚ್ಛ ಪರಿಸರ ನನ್ನ ಬಾಲ್ಯದ ಮೇಲೆ ಬಹಳಷ್ಟು ಪ್ರಭಾವ ಬೀರಿದೆ."

ಕೃಷ್ಣಭಟ್ಟರ ಪ್ರಾಥಮಿಕ ವಿದ್ಯಾಭ್ಯಾಸವೆಲ್ಲ ಅಡ್ಯನಡ್ಕದಲ್ಲಿ. ಆ ಶಾಲೆಯನ್ನು

ಸ್ಥಾಪಿಸಿದವರು ಕೃಷ್ಣಭಟ್ಟರ ತಂದೆ ಶಿವಮ್ಮಣ್ಣ ಭಟ್ಟರು. ಇಂದು ಅದು ಪದವಿ ಪೂರ್ವ ಕಾಲೇಜಾಗಿ ಅಭಿವರ್ಧನೆಯಾಗಿದೆ. ಶಿವಮ್ಮಣ್ಣ ಭಟ್ಟರು ಆ ಕಾಲದಲ್ಲಿ ಮೆಡಿಕಲ್ ಕಾಲೇಜಿಗೆ ಸೇರಿ, ಅನಿವಾರ್ಯ ಕಾರಣಗಳಿಂದ ಓದು ಮುಂದುವರಿಸಲಾಗದೆ ಊರಿಗೆ ಮರಳಿ ಕೃಷಿ ಹಿಡಿದರು; ಶಾಲೆ ಕಟ್ಟಿದರು ಮತ್ತು ಅದರಲ್ಲಿ ಅಧ್ಯಾಪನ ಮಾಡಿದರು. ತನ್ನಲ್ಲಿ ಓದುವ ಆಸಕ್ತಿಯನ್ನು ಮೂಡಿಸಿದ್ದು ತಂದೆಯವರೆಂದು ಕೃಷ್ಣಭಟ್ಟರು ಈಗಲೂ ನೆನೆಸಿಕೊಳ್ಳುತ್ತಾರೆ.

ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದ ತರುವಾಯ ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಇಂಟರ್ಮೀಡಿಯೆಟ್ ವ್ಯಾಸಂಗ (೧೯೫೫). ಕಾಲೇಜಿನ ಸುಸಜ್ಜಿತ ಗ್ರಂಥ ಭಂಡಾರ ಜ್ಞಾನ ಪಿಪಾಸು ಕೃಷ್ಣಭಟ್ಟರಿಗೆ ಗ್ರಾಸವಾಯಿತು. ಅವರು ಹೇಳುತ್ತಾರೆ "ಎಂ.ಜಿ.ಎಂ. ಕಾಲೇಜಿನ ಗ್ರಂಥಭಂಡಾರ ನನ್ನಲ್ಲಿ ವಿಜ್ಞಾನದ ಬಗ್ಗೆ ತೀವ್ರ ಆಸಕ್ತಿ ಮೂಡಿಸಿತು. ಎಡಿಂಗ್ಟನ್, ಜೇಮ್ಸ್ ಜೀನ್ಸ್ ಮೊದಲಾದವರ ಜನಪ್ರಿಯ ವಿಜ್ಞಾನ ಕೃತಿಗಳನ್ನು ಓದಿದ್ದು ಎಂ.ಜಿ.ಎಂ.ನ ಗ್ರಂಥ ಭಂಡಾರದಲ್ಲಿ. ಅವು ನನ್ನೆದರು ನೂತನ ಲೋಕವನ್ನು ತೆರೆದುವು. ಕಾರಂತರ ಬಾಲಪ್ರಪಂಚದ ಲೇಖನಗಳು — ಅವರಲ್ಲೂ ಮುಖ್ಯವಾಗಿ ಭೂಗೋಲಕ್ಕೆ ಸಂಬಂಧಿಸಿದ ಲೇಖನಗಳು ನನಗೆ ಪ್ರಿಯವಾಗಿತ್ತು. ಅಲ್ಲಿ ಉಪನ್ಯಾಸಕರಾಗಿದ್ದ ಶ್ರೀ ಯು.ಎಲ್. ಆಚಾರ್ ಮತ್ತು ಶ್ರೀ ಕು.ಶಿ. ಹರಿದಾಸಭಟ್ಟರು ಸಂಘಟಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಬೇಂದ್ರೆ, ಅಡಿಗ, ಪುಟ್ಟಪ್ಪ, ರಾಜರತ್ನಂ ಮೊದಲಾದವರ ಸಾಹಿತ್ಯ ಮತ್ತು ಆ ಸಾಹಿತ್ಯ ದಿಗ್ಗಜಗಳು ಬಂದು ಕಾಲೇಜಿನಲ್ಲಿ ನೀಡುತ್ತಿದ್ದ ಉಪನ್ಯಾಸಗಳು ಸಾಹಿತ್ಯದಲ್ಲಿ ನನಗಿದ್ದ ಅಭಿರುಚಿಗೆ ಮತ್ತಷ್ಟು ಪೂರಣ ಒದಗಿಸಿದುವು."

ಇಂಟರ್ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಕೃಷ್ಣಭಟ್ಟರು ಮದ್ರಾಸಿಗೆ ತೆರಳಿದರು—ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎಸ್‌ಸಿ. ಆನರ್ಸ್ ಮತ್ತು ಎಂ.ಎ. ವ್ಯಾಸಂಗಕ್ಕೆ. ಪ್ರತಿಷ್ಠಿತ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರತಿಭಾನ್ವಿತರಿಗಷ್ಟೆ ಅವಕಾಶ. ನೊಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿಗಳಾದ ಸಿ.ವಿ. ರಾಮನ್ ಮತ್ತು ಎಸ್. ಚಂದ್ರಶೇಖರ್ ಕಾಲೇಜು ವಿದ್ಯಾಭ್ಯಾಸ ಪೂರೈಸಿದ್ದು ಪ್ರೆಸಿಡೆನ್ಸಿಯಲ್ಲಿ. ಪ್ರೆಸಿಡೆನ್ಸಿಯ ತಮ್ಮ ದಿನಗಳ ಬಗ್ಗೆ ಕೃಷ್ಣಭಟ್ ಹೇಳುತ್ತಾರೆ. "ಆ ಕಾಲೇಜಿಗೆ ಸೇರಿದಾಗ ನಾನು ಭಾವಾವೇಶಗೊಂಡಿದ್ದೆ. ಚಂದ್ರಶೇಖರ್, ಸಿ.ವಿ. ರಾಮನ್ ಓಡಾಡಿದ ತಾಣವದು. ಅವರು ಪ್ರಯೋಗಗಳನ್ನು ಮಾಡಿದ ಪ್ರಯೋಗಾಲಯದಲ್ಲಿ ನಾವೂ ಪ್ರಯೋಗ ಮಾಡುತ್ತಿದ್ದೇವೆ ಎನ್ನುವ ಕಲ್ಪನೆಯೆ ನಮ್ಮಲ್ಲಿ ಉತ್ಸಾಹ ತುಂಬುತ್ತಿತ್ತು. ಪ್ರೆಸಿಡೆನ್ಸಿಯಲ್ಲಿ ಅವರಿಬ್ಬರೂ ಅಂದು, ಇಂದು ಪ್ರಾಯಶಃ ಎಂದೆಂದೂ ತರುಣರೆ! ಅಲ್ಲಿ ನಾನು ಸಿ. ವಿ. ರಾಮನ್ನರ ಅಮೋಘ ಉಪನ್ಯಾಸ ಕೇಳಿ ಬೆರಗಾಗಿದ್ದೆ. ನೊಬೆಲ್ ಪುರಸ್ಕೃತ ಭೌತ ವಿಜ್ಞಾನಿ ನೀಲ್ಸ್‌ಬೋರ್ ನೀಡಿದ

ಉಪನ್ಯಾಸವಿನ್ನೂ ನೆನಪಿನಲ್ಲಿದೆ. ವಿಜ್ಞಾನ ನನ್ನ ಕೈಂಕರ್ಯವಾಗಲು ಪ್ರೆಸಿಡೆನ್ಸಿಯ ದಿನಗಳು ಕಾರಣ."

ಅಧ್ಯಾಪಕ ವೃತ್ತಿಗೆ

ಭೌತ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಮರಳಿದ ಕೃಷ್ಣಭಟ್ಟರು ಎಂ.ಜಿ.ಎಂ. ಕಾಲೇಜಿನಲ್ಲಿ ಅಧ್ಯಾಪಕನಾಗಿ ವೃತ್ತಿ ಜೀವನ ಪ್ರಾರಂಭಿಸಿದರು (೧೯೫೯). ಎರಡು ವರ್ಷಗಳ ಕಾಲ (೧೯೬೧-೬೩) ಪುತ್ತೂರಿನ ಸಂತಫಿಲೋಮಿನ ಕಾಲೇಜಿನಲ್ಲೂ ಅಧ್ಯಾಪಕರಾಗಿದ್ದರು. ಕೃಷ್ಣಭಟ್ಟರು ಹೇಳುವಂತೆ "ಪತ್ರಿಕೆಯ ಸಂಪಾದಕತ್ವದ ಸಣ್ಣ ಅನುಭವವನ್ನು ಪ್ರಥಮಬಾರಿಗೆ ನಾನು ಗಳಿಸಿದ್ದು ಪುತ್ತೂರಿನಲ್ಲಿ. ಶಿವರಾಮ ಕಾರಂತರು ಪ್ರಾರಂಭಿಸಿ ಅರ್ಧದಲ್ಲಿ ಸ್ಥಗಿತಗೊಂಡಿದ್ದ 'ವಿಚಾರವಾಣಿ' ಪತ್ರಿಕೆಗೆ ನಾವು ಕೆಲವು ಸ್ನೇಹಿತರು—ಎಂ.ಬಿ. ಮರಕ್ಕಿಣಿ, ಶಂಪಾದೈತೋಟ, ಮುಳಿಯ ಕೃಷ್ಣಭಟ್ ಮೊದಲಾದವರು–ಜೀವ ಕೊಟ್ಟೆವು. ಅದರಲ್ಲಿ ನಾನು ವಿಜ್ಞಾನ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಬರೆದೆ."

ಮಣಿಪಾಲದ ಮಾಂತ್ರಿಕರೆಂದೇ ಖ್ಯಾತರಾದ ಡಾ॥ ತೋನ್ಸೆಮಾಧವ ಅನಂತ ಪೈ (ಟಿ.ಎಂ.ಎ.ಪೈ) ಮೂಲ್ಕಿಯಲ್ಲಿ–ಮೂಲ್ಕಿ ಹೊಳೆಯ ಸಮೀಪದ ಪ್ರಶಾಂತ ಸ್ಥಳದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದರು. ೧೯೬೩ರಲ್ಲಿ ಪೈಗಳುದ್ದೇಶಿಸಿದ 'ವಿಜಯಾ ಕಾಲೇಜು' ಪ್ರಾರಂಭವಾಯಿತು. ಆ ಸಮಯದಲ್ಲಿ ಸ್ವಯಂ ಪೈಗಳಿಂದಲೆ ಕೃಷ್ಣಭಟ್ಟರಿಗೆ ಕರೆ ಹೋಯಿತು—ನೂತನ ಕಾಲೇಜಿನಲ್ಲಿ ಭೌತವಿಜ್ಞಾನ ವಿಭಾಗದ ಗುರುತರ ಜವಾಬ್ದಾರಿ ಹೊರಲು. ಅವರಿಗೆ ತಿಳಿದಿತ್ತು—ಇಪ್ಪತ್ತೈದರ ತರುಣ ಕೃಷ್ಣಭಟ್ಟರ ಕಾರ್ಯಕ್ಷಮತೆ ಬಗ್ಗೆ. ಅಂದು ಮೂಲ್ಕಿ ವಿಜಯಾ ಕಾಲೇಜನ್ನು ಸೇರಿದ ಕೃಷ್ಣಭಟ್ಟರು ಇಂದಿನತನಕ ೧೯೯೬—ಮೂವತ್ತಮೂರು ವರ್ಷಗಳ ಸುದೀರ್ಘ ಸಾರ್ಥಕ ಸೇವೆ ಸಲ್ಲಿಸಿ ಮಾರ್ಚ್ ತಿಂಗಳ ಕೊನೆಯಲ್ಲಿ ನಿವೃತ್ತರು. ಇಂದು ವಿಜಯಾ ಕಾಲೇಜಿನ ಭೌತವಿಜ್ಞಾನ ವಿಭಾಗ ದಕ್ಷಿಣ ಕನ್ನಡದ ಕಾಲೇಜುಗಳ ಅತ್ಯುತ್ತಮ ಭೌತವಿಜ್ಞಾನ ವಿಭಾಗಗಳಲ್ಲೊಂದು. ಈ ಬೆಳವಣಿಗೆಯ ಹಿಂದೆ ಕೃಷ್ಣಭಟ್ ಮತ್ತವರ ಸಹದ್ಯೋಗಿಗಳಾದ ಡಾ॥ ಯು. ಎಸ್. ಮಯ್ಯ, ಡಾ॥ ತಲ್ಲೂರ್, ಪ್ರೊ॥ ವೆಂಕಟೇಶ್‌ರಾವ್ ಮೊದಲಾದವರ ಅವಿರತ ಪರಿಶ್ರಮವಿದೆ.

ಉಪನ್ಯಾಸಕ ವರ್ಗದಲ್ಲಿ ಕೃಷ್ಣಭಟ್ಟರ ಬಗ್ಗೆ ಅಪಾರ ಗೌರವ, ಆದರ ಮತ್ತು ಅಭಿಮಾನವನ್ನು ನೀವು ಸ್ಪಷ್ಟವಾಗಿ ಗುರುತಿಸಬಹುದು. ಇವರ ಸಲಹೆ ಸೂಚನೆಗಳಿಗೆ ಹೆಚ್ಚಿನ ಬೆಲೆ ಇದೆ. ಮಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳ ಭೌತವಿಜ್ಞಾನ ಅಧ್ಯಾಪಕರ ಸಂಘದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸಂಘದ ಚಟುವಟಿಕೆಗಳಿಗೆ ಹೊಸ ಉತ್ಸಾಹ ತುಂಬಿದ್ದಾರೆ. ಇಂಥ ತರತರೆಯ ಹೊರೆ ಹೊರಲು ಕೃಷ್ಣಭಟ್ಟರು ಸಿದ್ಧವಾದದ್ದೆ ಕಾಲೇಜಿನಲ್ಲಿ ಭೌತವಿಜ್ಞಾನದ ಶಿಕ್ಷಣದ ಬಗ್ಗೆ ಇವರಿಗಿರುವ ನಿಜ ಕಾಳಜಿಯ ದ್ಯೋತಕ.

ವಿಜಯಾ ಕಾಲೇಜಿನಲ್ಲಿ ತನ್ನ ಸ್ನೇಹಿತರನ್ನು ಸೇರಿಸಿಕೊಂಡು 'ರಿಸರ್ಚ್ ಎಂಡ್

ಪಬ್ಲಿಕೇಶನ್' ಎಂಬ ಖಾಸಗಿ ಒಕ್ಕೂಟವನ್ನು ಕೃಷ್ಣಭಟ್ಟರು ಪ್ರಾರಂಭಿಸಿದರು. ಪ್ರತಿ ಹದಿನೈದು ದಿನಗಳಿಗೊಮ್ಮೆ ಒಕ್ಕೂಟದ ಸದಸ್ಯರೆಲ್ಲ ಒಂದೆಡೆ ಕಲೆಯುತ್ತಿದ್ದರು. ಅಲ್ಲಿ ಸಾಹಿತ್ಯ, ವಿಜ್ಞಾನ, ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಪ್ರಬಂಧವನ್ನು ಮಂಡಿಸಿ ಅದರ ಮೇಲೆ ಚರ್ಚೆ ನಡೆಯುತ್ತಿತ್ತು. ಭೌತವಿಜ್ಞಾನಿಗಳಾದ ಲಾರ್ಡ್ ರುದರ್‌ಫರ್ಡ್, ನೀಲ್ಸ್‌ಬೋರ್ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದುದು ಕೂಡ ಇದೇ ಬಗೆಯಲ್ಲಿ—ಸಾಮೂಹಿಕ ಚರ್ಚೆಯ ಮೂಲಕ. ಕೃಷ್ಣಭಟ್ಟರ ಕಾರ್ಯವೈಖರಿಯೇ ಹೀಗೆ—ಹಲವರನ್ನು ಒಟ್ಟೈಸಿ, ಎಲ್ಲರೊಡನೆ ಒಂದಾಗಿ ಚಟುವಟಿಕೆಯಲ್ಲಿ ಪೂರ್ಣ ತಾದಾತ್ಮ್ಯ ಹೊಂದುವ ಪ್ರವೃತ್ತಿ. ೧೯೬೪ರಲ್ಲಿ ತಮ್ಮ ಒಕ್ಕೂಟದ ಮೂಲಕ 'ಗಗನಯುಗ'ವೆಂಬ ಕಿರು ಹೊತ್ತಗೆಯನ್ನು ಕೂಡ ಪ್ರಕಟಿಸಿದರು. ರಷ್ಯಾದ ಖಗೋಳಯಾನಿ ಯುರಿಗಾಗರಿನ್ ಬಾಹ್ಯಾಕಾಶಕ್ಕೇರಿ ವಿಕ್ರಮ ಸ್ಥಾಪಿಸಿದ ಬಗ್ಗೆ ವಿವರಗಳನ್ನು ಒಳಗೊಂಡಿರುವ ಆ ಹೊತ್ತಗೆ ಅಂದಿಗೆ ಬಹಳಷ್ಟು ಪ್ರಸ್ತುತವಾಗಿತ್ತು.

ಕೃಷ್ಣಭಟ್ ಮತ್ತು ಸ್ನೇಹಿತರು ೧೯೬೬ರಲ್ಲಿ 'ವಿಜ್ಞಾನ ಪ್ರತಿಷ್ಠಾನ' ಎಂಬ ಹೊಸ ಸಂಸ್ಥೆಯೊಂದನ್ನು ಪ್ರಾರಂಭಿಸಿದರು—ವಿಜ್ಞಾನದ ವಿಸ್ತೃತ ಪ್ರಚಾರಕ್ಕಾಗಿ. ಕೃಷ್ಣಭಟ್ಟರು ದಕ್ಷಿಣಕನ್ನಡದ ಶಾಲೆ, ಕಾಲೇಜುಗಳಿಗೆ ತೆರಳಿದರು—ವಿಜ್ಞಾನದ ಬಗ್ಗೆ ಉಪನ್ಯಾಸ, ಸಂವಾದ, ಪ್ರಾತ್ಯಕ್ಷಿಕೆ ನೀಡಲು.

ಇನ್ನೂ ಒಂದು ಹೆಜ್ಜೆ ಮುಂದೆ ಹೋದ ವಿಜ್ಞಾನ ಪ್ರತಿಷ್ಠಾನ ಜನಸಾಮಾನ್ಯರಿಗೆ, ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ತಿಳುವಳಿಕೆ ನೀಡುವ ದೃಷ್ಟಿಯಲ್ಲಿ 'ವಿಜ್ಞಾನಲೋಕ' ಎಂಬ ಪತ್ರಿಕೆಯನ್ನು ಪ್ರಕಟಿಸಲು ನಿಶ್ಚಯಿಸಿತು. ಆ ಪತ್ರಿಕೆಯ ಪ್ರಧಾನ ಸಂಪಾದಕರು ಬೇರಾರು? - ಅಧ್ಯನಡ್ಕರೇ! ನಿಮಗೆ ಆಶ್ಚರ್ಯವಾಗಬಹುದು—ಆಗಿನ್ನೂ ಅವರ ವಯಸ್ಸು ಇಪ್ಪತ್ತೇಳು! ಮೊದಲಿಗೆ ತ್ರೈಮಾಸಿಕವಾಗಿದ್ದ 'ವಿಜ್ಞಾನಲೋಕ' ತನ್ನ ಹೂರಣದಿಂದಾಗಿ ನಿಧಾನವಾಗಿ ಜನಪ್ರಿಯವಾಗುತ್ತ ಮಾಸಪತ್ರಿಕೆಯಾಯಿತು. ನನಗಿನ್ನೂ ನೆನಪಿದೆ. ನಾನು ಶಾಲೆ ಮತ್ತು ಕಾಲೇಜುಗಳಲ್ಲಿದ್ದಾಗ 'ವಿಜ್ಞಾನಲೋಕ'ಕ್ಕೆ ಕಾತರದಿಂದ ಕಾಯುತ್ತಿದ್ದುದು. ವಿಜ್ಞಾನಕ್ಕೆ ಮೀಸಲಾದ ಕನ್ನಡ ಪತ್ರಿಕೆ ಇಲ್ಲವೆನ್ನುವ ಕೊರತೆಯನ್ನು 'ವಿಜ್ಞಾನಲೋಕ' ಸಮರ್ಥವಾಗಿ ತುಂಬಿದ್ದು ನಿಜ. ಅದರಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು, ಪ್ರಶ್ನೋತ್ತರ ವಿಭಾಗ, ವಿಜ್ಞಾನ ವಾರ್ತೆ, ಸಂಪಾದಕೀಯ ಓದುಗರಲ್ಲಿ ಆಸಕ್ತಿ ಹುಟ್ಟಿಸುವಂತಿದ್ದುವು. ಸರಕಾರದ ಆರ್ಥಿಕ ಸಹಾಯವಿಲ್ಲದೆ ಈ ಪತ್ರಿಕೆ ಸುಮಾರು ೧೩ ವರ್ಷಗಳ ಕಾಲ ನಿರಂತರ ಪ್ರಕಟವಾದದ್ದು ಒಂದು ಪವಾಡ. ವಿಜ್ಞಾನಲೋಕದ ಹಲವು ಪುಟಗಳನ್ನು ಕೃಷ್ಣಭಟ್ಟರೊಬ್ಬರೆ ತುಂಬುತ್ತಿದ್ದರು—ಎ.ಕೆ.ಬಿ, ಅಕೃಭ, ಅನಾಮಿಕ ಇತ್ಯಾದಿ ಹೆಸರುಗಳಲ್ಲಿ—ಕೆಲವೊಮ್ಮೆ ಯಾವುದೇ ಹೆಸರಿಲ್ಲದೆ! ಸೂರ್ಯನಿಗೇಕೆ ಹಣೆ ಚೀಟಿ!

೧೯೬೫ರಲ್ಲಿ ಕಾಲೇಜಿಗೆ ೪ ಇಂಚ್‌ನ ಅತ್ಯುತ್ತಮ ದೂರದರ್ಶಕವನ್ನು ತರಿಸಿದ ಕೃಷ್ಣಭಟ್ಟರು ಹವ್ಯಾಸಿ ಖಗೋಳವಿಜ್ಞಾನಿಗಳ ಸಂಘವನ್ನು ಸ್ಥಾಪಿಸಿದರು. ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಆಕಾಶವೀಕ್ಷಣೆ, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಉಪನ್ಯಾಸ ಕಾರ್ಯಕ್ರಮಗಳನ್ನು ಆಗಾಗ ಏರ್ಪಡಿಸುತ್ತ ಬಂದಿರುವ ಈ ಸಂಘ ಮೂಲ್ಕಿ ಸುತ್ತಮುತ್ತಲಿನ ಜನರಲ್ಲಿ ಖಗೋಳ ವಿಜ್ಞಾನದ ಬಗ್ಗೆ ಆಸಕ್ತಿಯನ್ನು ಕುದುರಿಸುವಲ್ಲಿ ಯಶಸ್ಸು ಪಡೆದಿದೆ. ಧೂಮಕೇತುಗಳಾದ ಇಕೆಯಾ ಸೆಕಿ (೧೯೬೫), ಕೊಹುಟೆಕ್ (೧೯೭೩) ಮತ್ತು ಹ್ಯಾಲಿ (೧೯೮೫) ಬಂದಾಗ ಜನರು ವಿಜಯಾ ಕಾಲೇಜಿನ ದೂರದರ್ಶಕದ ಬಳಿ ಜಮಾಯಿಸಿದರು—ಕೃಷ್ಣಭಟ್ಟರ ಮನೋಜ್ಞ ವಿವರಣೆಯನ್ನು ಆಲಿಸಲು; ವಿಶಾಲಾಕಾಶದಲ್ಲಿ ಸಾಗುತ್ತಿರುವ ವಿಚಿತ್ರಾಕಾರದ ಆಗುಂತಕನನ್ನು ನೋಡಲು. ಹ್ಯಾಲಿಯ ವೀಕ್ಷಣೆಗೆ ನಾನು ಮತ್ತು ನನ್ನ ಸ್ನೇಹಿತರು ಹೋದದ್ದು ವಿಜಯಾ ಕಾಲೇಜಿಗೆ. ಅಂದು ಕೃಷ್ಣಭಟ್ಟರು ನಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರಿಸಿದರು; ಹೊಸ ಲೋಕಕ್ಕೆ ಕರೆದೊಯ್ದರು.

ಜ್ಞಾನಗಂಗೋತ್ರಿಯ ಸಾಹಸ

೧೯೬೯. ಅದೊಂದು ದಿನ ಬೆಂಗಳೂರಿನಿಂದ ನಿರಂಜನರ ಕರೆ. ಸರಕಾರದ ಸಹಾಯದೊಂದಿಗೆ ಏಳು ಸಂಪುಟಗಳಲ್ಲಿ ಕಿರಿಯರ ಕನ್ನಡ ವಿಶ್ವಕೋಶ 'ಜ್ಞಾನಗಂಗೋತ್ರಿ'ಯನ್ನು ಪ್ರಕಟಿಸುವ ಬೃಹತ್ ಯೋಜನೆಯನ್ನು ನಿರಂಜನರು ಕೈಗೊಂಡಿದ್ದರು. ಇದರಲ್ಲಿ ಮೂರು ಸಂಪುಟಗಳು ವಿಜ್ಞಾನಕ್ಕಾಗಿಯೆ ಮೀಸಲು. ಈ ವಿಜ್ಞಾನ ಸಂಪುಟಗಳ ಸಂಪಾದನೆಯ ಜವಾಬ್ದಾರಿ ಹೊರುವ ಸಾಮರ್ಥ್ಯವಿದ್ದರೆ ಅದು ಮೂವತ್ತೊಂದರ ತರುಣ ಕೃಷ್ಣಭಟ್ಟರಿಗೆಂದು ನಿರಂಜನರಿಗೆ ಚೆನ್ನಾಗಿ ಅರಿವಿತ್ತು. ಎಂದೇ ಕೃಷ್ಣಭಟ್ಟರಿಗೆ ಬುಲಾವ್.

ವಿಜ್ಞಾನದ ಯಾವ ಚಟುವಟಿಕೆಗೂ ಕೃಷ್ಣಭಟ್ಟರು 'ಇಲ್ಲ' ಎನ್ನಲಾರರು. ಎರಡು ವರ್ಷಗಳ ಕರಾರು ರಜೆಯಲ್ಲಿ ಬೆಂಗಳೂರಿಗೆ ಹೋದರು. ಆದರೆ ನಿರಂಜನರ ಆರೋಗ್ಯ ಹದಗೆಟ್ಟಾಗ ಯೋಜನೆಯ ಹೆಚ್ಚಿನ ಹೊಣೆ ಹೆಗಲೇರಿತು: ರಜೆಯನ್ನು ಮತ್ತೆರಡು ವರ್ಷ ಮುಂದುವರಿಸಬೇಕಾಯಿತು.

ಜ್ಞಾನಗಂಗೋತ್ರಿಯ ಮೂರು ವಿಜ್ಞಾನ ಸಂಪುಟಗಳಾದ ಭೌತ ಜಗತ್ತು, ಜೀವ ಜಗತ್ತು ಮತ್ತು ಯಂತ್ರ ಜಗತ್ತಿನ ಪ್ರತಿ ಪುಟದಲ್ಲೂ ನೀವು ಕೃಷ್ಣಭಟ್ಟರ ಛಾಪನ್ನು ಗಮನಿಸಬಹುದು. ಸಂಪುಟಗಳಿಗೆ ವಿಷಯದ ಆಯ್ಕೆ, ಲೇಖಕರ ಆಯ್ಕೆ, ಲೇಖನದ ಪರಿಷ್ಕರಣೆ, ಚಿತ್ರಗಳ ಜೋಡಣೆ, ಕರಡುಪ್ರತಿ ತಯಾರಿ—ಹೀಗೆ ಪ್ರತಿ ಸಂಪುಟಕ್ಕೂ ಹಂತದಲ್ಲೂ ಅಗಾಧ ಪರಿಶ್ರಮ. ಇವರದು ಶಾಂತ ಸ್ವಭಾವ: ಗದ್ದಲ ಗಡಿಬಿಡಿಗಳಿಲ್ಲದೆ ಕೆಲಸ ಮಾಡುವ ಜಾಯಮಾನ. ಹಾಗಾಗಿಯೆ ಜ್ಞಾನಗಂಗೋತ್ರಿಯ ಸಂಪುಟಗಳು ಕ್ಲುಪ್ತ ಕಾಲದಲ್ಲಿ ಅಚ್ಚುಕಟ್ಟಾಗಿ ಪ್ರಕಟಗೊಂಡುವು. ವಿದ್ಯಾರ್ಥಿಗಳ ಪಾಲಿಗೆ ಜ್ಞಾನಗಂಗೋತ್ರಿ, ಅಮೂಲ್ಯ ಆಕರ ಗ್ರಂಥಗಳು—ಪ್ರತಿ ಶಾಲೆ, ಕಾಲೇಜುಗಳಲ್ಲಿ ಇರಬೇಕಾದಂಥವು. ಇಂಥ ಗ್ರಂಥಗಳು ಕಿರ

ಇತ್ತೀಚೆಗಿನ ವರ್ಷಗಳಲ್ಲಿ ಮತ್ತೆ ಪ್ರಕಟಗೊಂಡಿಲ್ಲ ಎನ್ನುವುದು ಗಮನಿಸಬೇಕಾದ ಅಂಶ. ಕೃಷ್ಣಭಟ್ಟರು ಈ ಬಗ್ಗೆ ಭಾರ ಹೃದಯದಿಂದ ಹೇಳುತ್ತಾರೆ "೭೦–೮೦ ರ ದಶಕದಲ್ಲಿ ಜ್ಞಾನಗಂಗೋತ್ರಿ, ವಿಶ್ವಕೋಶಗಳು ಪ್ರಕಟವಾಗುವಾಗ ಅಲ್ಲಿ ಅದಮ್ಯ ಉತ್ಸಾಹವಿತ್ತು. ಕನ್ನಡದ ಜನಗಳಿಗೆ ಹೊಸದನ್ನು ನೀಡಬೇಕೆನ್ನುವ ಕಾಳಜಿ ಇತ್ತು. ಇತ್ತೀಚೆಗಿನ ವರ್ಷಗಳಲ್ಲಿ ಅಂಥ ಉತ್ಸಾಹ ಬತ್ತಿದಂತೆ ಕಾಣುತ್ತಿದೆ. ಸರಕಾರಕ್ಕಂತೂ ಈ ಬಗೆಯ ಕೆಲಸಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ. ವಿಶ್ವಕೋಶ, ಜ್ಞಾನಗಂಗೋತ್ರಿಯ ಪರಿಷ್ಕೃತ ಆವೃತ್ತಿಗಳು ಬರುತ್ತಿರಬೇಕು - ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾದಂತೆ. ಏಕೆಂದರೆ ವಿಜ್ಞಾನ ನಿಂತ ನೀರಲ್ಲ. ಹೊಸ ಮಾಹಿತಿಗಳು ಬಂದಂತೆ ಅವನ್ನು ಗ್ರಂಥಗಳಲ್ಲಿ ಅಳವಡಿಸಬೇಕು, ಹಳೆಯ ಮಾಹಿತಿಗಳನ್ನು ಪರಿಷ್ಕರಿಸಬೇಕು. ಇಲ್ಲದೇ ಹೋದರೆ ಆ ಗ್ರಂಥಗಳ ಪ್ರಸ್ತುತತೆ ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸರಕಾರ, ವಿಶ್ವವಿದ್ಯಾಲಯಗಳು ಗಮನ ಹರಿಸಬೇಕು. ಆದರೂ ಕನ್ನಡದಲ್ಲಿ ವಿಜ್ಞಾನ ಗ್ರಂಥಗಳು ಸರಕಾರದ ಅನುದಾನವಿಲ್ಲದೆ ಖಾಸಗಿಯಾಗಿ ಪ್ರಕಟಗೊಳ್ಳುತ್ತಿವೆ ಮತ್ತು ಇವುಗಳಿಗೆ ಸಾಕಷ್ಟು ಬೇಡಿಕೆ ಇರುವುದು ತುಸು ನೆಮ್ಮದಿ ತರುವ ಅಂಶ"

೧೯೭೭ ರಲ್ಲಿ ಟಿ.ಎಂ.ಎ. ಪೈಯವರಿಗೆ ೮೦ ವರ್ಷ ತುಂಬಿದ ನೆನಪಿಗೆ ಅಭಿನಂದನ ಗ್ರಂಥವನ್ನು ಸಮರ್ಪಿಸಲು ಅವರ ಅಭಿಮಾನಿಗಳು ನಿರ್ಧರಿಸಿದರು. ಗ್ರಂಥದ ಸಂಪಾದಕತ್ವದ ಹೊಣೆ ಸಹಜವಾಗಿಯೇ ಬಂದದ್ದು ಕೃಷ್ಣಭಟ್ಟರ ಪಾಲಿಗೆ. ಕೃಷ್ಣಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾದ ಈ ಅಭಿನಂದನ ಗ್ರಂಥ ಎಲ್ಲ ಅಭಿನಂದನ ಗ್ರಂಥಗಳಂತೆ ವ್ಯಕ್ತಿಯನ್ನು ಅಭಿನಂದಿಸುವ ಲೇಖನಗಳನ್ನಷ್ಟೇ ಹೊಂದಿಲ್ಲ. ಸುಮಾರು ಐನೂರು ಪುಟಗಳ ಗ್ರಂಥದಲ್ಲಿ ಟಿ. ಎಂ. ಎ. ಪೈಯವರ ಬಗ್ಗೆ (ಜೀವನ ದರ್ಶನ) ಕೆಲವು ಲೇಖನಗಳಿವೆ. ಉಳಿದವು —ದಕ್ಷಿಣ ಕನ್ನಡದ ಪ್ರಾಕೃತಿಕ ಸಂಪತ್ತು, ಜನಜೀವನ, ಸಂಸ್ಕೃತಿಗಳ ಬಗ್ಗೆ ಒಳನೋಟ ಕೊಡುವಂಥವು. ಸಂಪಾದಕರಾಗಿ ಅಡ್ಯನಡ್ಕರು ಬರೆಯುತ್ತಾರೆ 'ವಿವಿಧ ಸ್ತರಗಳಲ್ಲಿ —ಜನಸಾಮಾನ್ಯರ ಅನಿವಾರ್ಯ ಆರ್ಥಿಕ ಚಟುವಟಿಕೆಗಳಿಂದ ಹಿಡಿದು ಉದಾತ್ತ ಶೈಕ್ಷಣಿಕ ಚಟುವಟಿಕೆಗಳವರೆಗೆ—ಡಾ॥ ಪೈಯವರ ಬದುಕಿನ ಪ್ರಭಾವವನ್ನು ಕಾಣಬಹುದು. ಅದೂ ಮುಖ್ಯವಾಗಿ ದಕ್ಷಿಣ ಕನ್ನಡದಲ್ಲಿ. ಈ ವಿದ್ಯಮಾನಕ್ಕೆ ಕಾರಣವಾದ ದಕ್ಷಿಣ ಕನ್ನಡತ್ವವೋ ವಿಶಿಷ್ಟ ರಾಷ್ಟ್ರೀಯ ಹಿನ್ನೆಲೆಯೋ ಇದ್ದರೆ ಅದು ಅಧ್ಯಯನ ಯೋಗ್ಯವಾದದ್ದು. ಆದ್ದರಿಂದ ಡಾ. ಪೈಯವರ ಜೀವನ ಸಾಧನೆ, ದಕ್ಷಿಣ ಕನ್ನಡದ ಪ್ರಕೃತಿ—ಪರಂಪರೆ—ಪ್ರವೃತ್ತಿ —ಮುನ್ನೋಟಗಳ ಚಿತ್ರಣ ಹಾಗೂ ಬೇರೆ ಬೇರೆ ಕ್ಷೇತ್ರಗಳ ಹಿನ್ನೆಲೆ—ಮುನ್ನೆಲೆಗಳ ಪರಿಚಯವನ್ನು ಈ ಗ್ರಂಥದ ಮೂರು ಭಾಗಗಳು ಒಳಗೊಂಡಿವೆ. ಇವೆಲ್ಲ ಒಟ್ಟಾಗಿ ಪ್ರಾದೇಶಿಕ ಅಧ್ಯಯನದ ಆನಂದವನ್ನು ಒದಗಿಸಬಲ್ಲವು ; ಅದರ ಮಹತ್ವವನ್ನು ತೋರಬಲ್ಲವು' ಈ ಅಭಿನಂದನ ಗ್ರಂಥಕ್ಕೆ ೧೯೭೮ ರಲ್ಲಿ ರಾಷ್ಟ್ರಮಟ್ಟದ ಬಹುಮಾನ ಬಂತು.

ಪರಮೋತ್ಸಾಹಿ

ವಿಜ್ಞಾನದ ಪ್ರಚಾರಕ್ಕಾಗಿ ಸ್ಥಾಪಿಸಲಾದ ಸ್ವಾಯತ್ತ ಸಂಸ್ಥೆಯೇ 'ಕರ್ನಾಟಕ

ರಾಜ್ಯ ವಿಜ್ಞಾನ ಪರಿಷತ್ತು' (ಕರಾವಿಪ) ಕೃಷ್ಣಭಟ್ಟರು ಕರಾವಿಪದ ಸ್ಥಾಪಕ ಸದಸ್ಯರು. ಇಂದು ಈ ಸಂಸ್ಥೆಯು ಎಂಬತ್ತಕ್ಕೂ ಹೆಚ್ಚು ಘಟಕಗಳು ರಾಜ್ಯಾದ್ಯಂತ ವಿಜ್ಞಾನ ಚಟುವಟಿಕೆಗಳಲ್ಲಿ ನಿರತವಾಗಿವೆ. ಈ ಅಭಿವರ್ಧನೆಯಲ್ಲಿ ಕೃಷ್ಣಭಟ್ಟರ ಸಕ್ರಿಯ ಪಾತ್ರವಿದೆ. ೧೯೮೩ ರಲ್ಲಿ ಕರಾವಿಪ 'ಬಾಲ ವಿಜ್ಞಾನ'ವೆಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿತು. ಬಾಲವಿಜ್ಞಾನದ ಬೆನ್ನೆಲುಬು ಕೃಷ್ಣಭಟ್ಟರೆಂದರೆ ಅತಿಶಯೋಕ್ತಿಯಾಗದು. ೧೯೮೯ ರಿಂದ ಪತ್ರಿಕೆಯ ಪ್ರಧಾನ ಸಂಪಾದಕರಿವರು. ೧೯೯೩ ರಿಂದ ಕರಾವಿಪದ ಉಪಾಧ್ಯಕ್ಷತ್ವದ ಹೊಣೆ ಹೊತ್ತಿದ್ದಾರೆ.

ಕರಾವಿಪದ ವತಿಯಿಂದ ಕೃಷ್ಣಭಟ್ಟರು ತಮ್ಮ ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮುಖ್ಯವಾಗಿ 'ಗ್ರಹಣ' ಮತ್ತು 'ಬೆಳ್ಳಿಚುಕ್ಕೆ.' ೧೯೮೦ ರಲ್ಲಿ ದಕ್ಷಿಣ ಭಾರತದ ಮಂದಿಗೆ ಪೂರ್ಣ ಸೂರ್ಯಗ್ರಹಣವನ್ನು ವೀಕ್ಷಿಸುವ ಅಪೂರ್ವ ಅವಕಾಶ ಒದಗಿತು. ಕೃಷ್ಣಭಟ್ಟರು ಸುಮ್ಮನುಳಿದಾರೆ? ಕರ್ನಾಟಕದ ಉದ್ದಗಲಕ್ಕೆ ಸಂಚರಿಸಿದರು—ಗ್ರಹಣವೆಂಬ ನೈಸರ್ಗಿಕ ವಿದ್ಯಮಾನದ ಬಗ್ಗೆ ಮಾಹಿತಿ ನೀಡಿದರು, ವೀಕ್ಷಣೆಯ ವಿಧಾನವನ್ನು ಹೇಳಿಕೊಟ್ಟು ಜನರ ಬುದ್ಧಿಗೆ ಬಡಿದ ಗ್ರಹಣವನ್ನು ಬಿಡಿಸುವ ಪ್ರಯತ್ನ ಮಾಡಿದರು. ಹದಿನೈದು ವರ್ಷಗಳ ತರುವಾಯ, ೧೯೯೫ರ ಅಕ್ಟೋಬರ್ ೨೪ರಂದು, ಮತ್ತೊಮ್ಮೆ ಪೂರ್ಣ ಸೂರ್ಯಗ್ರಹಣವನ್ನು ವೀಕ್ಷಿಸುವ ಅವಕಾಶ—ಈ ಬಾರಿ ಉತ್ತರಭಾರತದಲ್ಲಿ, ವರ್ಷಗಳುರುಳಿ ಕೃಷ್ಣಭಟ್ಟರು ಉದ್ಯೋಗದಿಂದ ನಿವೃತ್ತರಾಗಿರುವುದು ನಿಜ. ಆದರೆ ನಿಸರ್ಗ ವಿದ್ಯಮಾನದ ಬಗ್ಗೆ ಅವರ ಕುತೂಹಲ ಒಂದಿಷ್ಟೂ ಬತ್ತಿಲ್ಲ; ಜನರಿಗೆ ಆ ಬಗ್ಗೆ ವಿವರಿಸಬೇಕೆನ್ನುವ ಉತ್ಸಾಹ ಒಂದಿನಿತೂ ಹಿಂಗಿಲ್ಲ. ಕೃಷ್ಣಭಟ್ಟರು ಮತ್ತೊಮ್ಮೆ ಕರ್ನಾಟಕಾದ್ಯಂತ ಸಂಚರಿಸಿದರು—ಗ್ರಹಣವನ್ನು ವಿವರಿಸುತ್ತ. ಲೇಖನಗಳನ್ನೂ, ಪುಸ್ತಕವನ್ನೂ ಪ್ರಕಟಿಸಿದರು. ಕರ್ನಾಟಕದಿಂದ ಉತ್ಸಾಹಿಗಳ ಒಂದು ತಂಡ ಗ್ರಹಣ ವೀಕ್ಷಣೆಗಾಗಿ ತೆರಳಿತು—ಕೃಷ್ಣಭಟ್ಟರ ನೇತೃತ್ವದಲ್ಲಿ!

ಕನ್ನಡ ವಿಜ್ಞಾನ ಲೇಖಕರ ಬಲು ದೊಡ್ಡ ಹುಯಿಲು–ಇಂಗ್ಲಿಷ್‌ನ ತಾಂತ್ರಿಕ ಪದಕ್ಕೆ ಸಂವಾದೀ ಕನ್ನಡಪದ–ಅರ್ಥಾತ್ ಪಾರಿಭಾಷಿಕ ಪದ–ದೊರೆಯದಿರುವ ಬಗ್ಗೆ. ಇಂಥ ಪಾರಿಭಾಷಿಕ ಪದಕೋಶದ ಅಗತ್ಯ ಕಂಡು ಇಂಗ್ಲಿಷ್–ಕನ್ನಡ ವಿಜ್ಞಾನ ಶಬ್ದಕೋಶವನ್ನು ಕೃಷ್ಣಭಟ್ಟರು ರಚಿಸಿದ್ದಾರೆ—ಕನ್ನಡದ ಇನ್ನೊಬ್ಬ ಹಿರಿಯ ವಿಜ್ಞಾನ ಲೇಖಕರಾದ ಜೆ. ಆರ್. ಲಕ್ಷ್ಮಣರಾಯರ ಸಹಯೋಗದೊಂದಿಗೆ. ಕೃಷ್ಣಭಟ್ಟರಿಗೆ ಸಂದ ರಾಷ್ಟ್ರಪ್ರಶಸ್ತಿ ಕಳೆದಬಾರಿ (೯೪–೯೫ ರಲ್ಲಿ) ಲಕ್ಷ್ಮಣರಾಯರಿಗೆ ಬಂದಿತ್ತು. ಹೀಗೆ ಪಾರಿಭಾಷಿಕ ಪದಕೋಶದ ಇಬ್ಬರು ಲೇಖಕರೂ ಇಂದು ರಾಷ್ಟ್ರಪ್ರಶಸ್ತಿಯಿಂದ ಪುರಸ್ಕೃತರು!

ಇವಲ್ಲದೆ ಹಲವು ವಿಜ್ಞಾನ ಪುಸ್ತಕಗಳನ್ನು ಕೃಷ್ಣಭಟ್ಟರು ಪ್ರಕಟಿಸಿದ್ದಾರೆ. ಮುಖ್ಯವಾಗಿ ಸಿ.ವಿ. ರಾಮನ್ (೧೯೭೩), ಮನುಷ್ಯನ ಕಥೆ (೧೯೭೭), ಐಸಾಕ್ ನ್ಯೂಟನ್ (೧೯೭೮), ಮನುಷ್ಯ ವಂಶಾವಳಿ (೧೯೮೦), ಇಂಟ್ರಡಕ್ಟರಿ ಫಿಸಿಕ್ಸ್

(೧೯೮೭). 'ಮನುಷ್ಯನ ಕಥೆ' ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಹಲವು ಇಂಗ್ಲಿಷ್ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಸಜ್ಜನಿಕೆಯ ಸಾಕಾರ

ಕೃಷ್ಣಭಟ್ಟರು ನಡೆ, ನುಡಿಯಲ್ಲಿ ಬಲು ಸರಳ, ಸಜ್ಜನ. ಇವರ ಒಡನಾಟ ಆಪ್ಯಾಯಮಾನ. ಭೌತವಿಜ್ಞಾನಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇವರಲ್ಲಿಗೆ ಒಯ್ದರೆ ಪರಿಹಾರ ಸಿಗುತ್ತದೆ. ಕರಾವಿಪ ಪ್ರತಿ ವರ್ಷ ನಡೆಸುವ ವಿಜ್ಞಾನ ಬರಹಗಾರರ ತರಬೇತಿ ಶಿಬಿರಗಳ ಮುಖ್ಯ ರೂವಾರಿ ಇವರು. ಇಂದು ಕನ್ನಡ ಜನಪ್ರಿಯ ವಿಜ್ಞಾನ ವಾಙ್ಮಯದಲ್ಲಿ ನಿರತರಾಗಿರುವ ಹಲವರು ಈ ಶಿಬಿರಗಳಿಂದ ಮೂಡಿ ಬಂದವರು.

"ನಾನು ವಿಜ್ಞಾನಕ್ಕೆ ಕಿಂಚಿತ್ತು ನೀಡಲು ಸಾಧ್ಯವಾಗಿದ್ದರೆ ಅದು ನನ್ನ ಸ್ನೇಹಿತರ, ಸಹದ್ಯೋಗಿಗಳ ಮತ್ತು ಕುಟುಂಬದ ಸಹಕಾರದಿಂದ ಯು. ಎಲ್. ಆಚಾರ್, ಡಾ|| ಮಯ್ಯ, ವರದರಾಯ ಪೈ, ಪಾ. ದೇವರಾವ್, ಜೆ. ಆರ್. ಲಕ್ಷ್ಮಣರಾವ್, ಜಿ. ಟಿ. ನಾರಾಯಣರಾವ್ ಮೊದಲಾದ ಸ್ನೇಹಿತರ ಪ್ರೀತಿ, ವಿಶ್ವಾಸಗಳಿಂದ ನಾನು ಬೆಳೆದೆ, ಮುಖ್ಯವಾಗಿ ಜಿ. ಟಿ. ನಾರಾಯಣರಾಯರ ನಿರಂತರ ಪ್ರೋತ್ಸಾಹದಿಂದ ವಿಜ್ಞಾನ ವಾಙ್ಮಯದಲ್ಲಿ ನಿರತನಾಗಲು ಸಾಧ್ಯವಾಯಿತು" ಇದು ಕೃಷ್ಣಭಟ್ಟರ ಸಜ್ಜನಿಕೆ.


ವಿಜ್ಞಾನ ಸಂವಹನ ಕಾರ್ಯಕ್ರಮಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರೂ, ಕಾಲೇಜಿನ ಅಧ್ಯಾಪನವನ್ನು ಕೃಷ್ಣಭಟ್ಟರೆಂದೂ ಕಡೆಗಣಿಸಿಲ್ಲ, ಅವರೇ ಹೇಳುವಂತೆ "ಅಧ್ಯಾಪನ ವೃತ್ತಿ ಕೆಲವೊಮ್ಮೆ ನನ್ನ ಹವ್ಯಾಸಕ್ಕೆ ತೊಂದರೆ ಕೊಟ್ಟಿದೆಯಾದರೂ, ವಿದ್ಯಾರ್ಥಿಗಳ ಸಾಹಚರ್ಯದಲ್ಲಿ ನಾನು ಬೆಳೆದೆ. ಮೂವತ್ತು ವರ್ಷಗಳ ಅಧ್ಯಾಪನ ನನಗೆ ಬೇಸರ ಹುಟ್ಟಿಸದೆ ಇರುವುದಕ್ಕೆ ನನ್ನ ಬರವಣಿಗೆಯ ಮತ್ತು ವಿಜ್ಞಾನದ ನಿರಂತರ ಚಟುವಟಿಕೆಗಳು ಕಾರಣ. ಕೆಲವೊಮ್ಮೆ ಹೇಳುವುದುಂಟು—ಅಧ್ಯಾಪಕರೆಂದರೆ ವಿದ್ಯಾರ್ಥಿಗಳನ್ನು ಕೆಳಸ್ತರದಿಂದ ಮೇಲ್‌ಸ್ತರಕ್ಕೆ ಒಯ್ಯುವ ಏಣಿಯ ಹಾಗೆ. ಆದರೆ ನಾನು ನನ್ನನ್ನೇ ಕೇಳಿಕೊಳ್ಳುತ್ತೇನೆ—ಅಧ್ಯಾಪಕರೇಕೆ ಸ್ಥಿರ ಏಣಿಯಾಗಬೇಕು? ಹಾಗೆ ಆದದ್ದಾದರೆ ಲಾಭಕ್ಕಿಂತ ನಷ್ಟವೇ ಅಧಿಕ."

ಕೃಷ್ಣಭಟ್ಟರ ಬರವಣಿಗೆ ಅತ್ಯಂತ ಸತ್ವಶಾಲಿ; ಭಾವ-ಭಾಷೆಗಳ ಅಪೂರ್ವ ಸಮ್ಮಿಲನ. ಶೈಲಿಯ ಬಿಗಿ ಅವರ ಮಾತಿಗಿಂತಲೂ ಹೆಚ್ಚು ಪರಿಣಾಮಕಾರಿ! ಎಕ್ಸ್ ಕಿರಣಗಳ ಆವಿಷ್ಕಾರದ ಶತಮಾನೋತ್ಸವದ ನೆನಪಿಗಾಗಿ ಮಂಗಳೂರು ಆಕಾಶವಾಣಿಗೆ ರಚಿಸಿದ ರೂಪಕದ ಪ್ರಾರಂಭದಲ್ಲಿ ಬರುವ ಕವನದ ಸಾಲುಗಳು ಅವರ ಸೃಜನಶೀಲ ಬರವಣಿಗೆಗೆ ನಿದರ್ಶನ.

ದೃಶ್ಯಲೋಕದ ಅದೃಶ್ಯ ಕಿರಣಗಳೆ
ಇರುವಿರಿ ಎಂದಿಂದ?
ಮಾನವನರಿವಿಗೆ ಬಂದುದು ಮಾತ್ರ ವರ್ಷ
ನೂರರಿಂದ
ಅಂತರಂಗ ಬಹಿರಂಗವಾಯ್ತು ನೀವ್
ಹರಿಯುವ ದಾರಿಯಲಿ
ಆವಿಷ್ಕರ್ತರ ಸರಣಿಯೆ ಹೊರಟಿತು
ಕ್ರಾಂತಿಯ ಗುಂಗಿನಲಿ

ಪರಿಕಲ್ಪನೆಯ ಸ್ಪಷ್ಟತೆಯೊಂದಿಗೆ ಕಾವ್ಯದ ಜೀವಂತಿಕೆ ಇರುವ ಕೃಷ್ಣಭಟ್ಟರ ಕೃತಿಗಳ ಹಿಂದಿನ ಸೂತ್ರಗಳೇನಿರಬಹುದು? ಕೃಷ್ಟಭಟ್ಟರೇ ಹೇಳುತ್ತಾರೆ "ನಾನು ಬರಹಕ್ಕೆ ವಿಷಯವನ್ನು ಆಯ್ದುಕೊಳ್ಳುತ್ತೇನೆ. ವಿಜ್ಞಾನ ಬರಹಕ್ಕೆ ವಿಷಯದ ಕೊರತೆ ಎಂದೂ ಇಲ್ಲ. ನಿಸರ್ಗದ ಅಸಂಖ್ಯ ವಿದ್ಯಮಾನಗಳು–ಸುರಿಯುವ ಮಳೆ, ಬೀಸುವ ಗಾಳಿ, ಕೋರೈಸುವ ಮಿಂಚು, ಹರಿಯುವ ಹೊಳೆ–ಎಲ್ಲವೂ ಬರಹಕ್ಕೆ ವಸ್ತುವಾಗಬಹುದು. ನಿಸರ್ಗವೇ ಬರಹದ ಬಂಡವಾಳ. ವಿಷಯದ ಆಯ್ಕೆಯಾದ ಮೇಲೆ ಅದಕ್ಕೆ ಸಂಬಂಧಿಸಿದ ಟಿಪ್ಪಣಿ ಮಾಡುತ್ತೇನೆ; ಆಕರ ಗ್ರಂಥಗಳ ಮೊರೆ ಹೋಗುತ್ತೇನೆ. ನನ್ನ ಪರಿಕಲ್ಪನೆಗಳೆಲ್ಲ ಸ್ಪಷ್ಟವಾದ ಮೇಲೆ ನಿಧಾನವಾಗಿ ಲೇಖನದ ಶಿಲ್ಪವನ್ನು ಕಟ್ಟುತ್ತೇನೆ. ಬರೆದದ್ದನ್ನು ತಿದ್ದಿ, ತೀಡಿ ಕೊನೆಯ ರೂಪ ಕೊಡುತ್ತೇನೆ. ಒಂದು ಉತ್ತಮ ವಿಜ್ಞಾನ ಬರಹಕ್ಕೆ ಈ ಎಲ್ಲ ಹಂತಗಳು ಅನಿವಾರ್ಯ. ಆದುದರಿಂದ ವಿಜ್ಞಾನ ಬರಹ ಕೂಡ ಸೃಜನಶೀಲವೆ. ಸೃಜನಶೀಲತೆ ಇಲ್ಲದ ಯಾವುದೇ ಬರಹ ಸಾಹಿತ್ಯವಾಗದು."

ಪ್ರತಿ ಹೊತ್ತೂ ವಿಜ್ಞಾನದ ಬಗ್ಗೆ ಚಿಂತಿಸುತ್ತ, ವಿಜ್ಞಾನ ಪ್ರಚಾರದಲ್ಲಿ ನಿರತರಾಗಿರುವ ವಿಜ್ಞಾನ ಪರಿಚಾರಕ ಅಡ್ಯನಡ್ಕ ಕೃಷ್ಣಭಟ್ಟರಿಗೆ ಇಂದು ಪ್ರಶಸ್ತಿ ನೀಡುವ ಮೂಲಕ, ನಿಸ್ವಾರ್ಥ ಸೇವೆ ಸಲ್ಲಿಸಿದ ಹಿರಿಯರನ್ನು ಗೌರವಿಸುವ 'ಮೌಲ್ಯ' ಇನ್ನೂ ಮಾಯವಾಗಿಲ್ಲ ಎಂದು ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರವಿದ್ಯಾ ಸಮಿತಿ ಶ್ರುತಪಡಿಸಿದೆ. ಎಲ್ಲ ಹಾಳಾಗದಂತೆ ಅನಿಸುವ ಈ ಕಾಲದಲ್ಲಿ ಕೃಷ್ಣಭಟ್ಟರಂಥವರು ನಮಗೆ ಸರಿ ದಾರಿ ತೋರುವ ದೀಪಸ್ತಂಭ. ಅವರು ತೋರಿದ ದಾರಿಯಲ್ಲಿ ಹೆಜ್ಜೆ ಇಕ್ಕುವುದೆ ಅವರಿಗೆ ಸಲ್ಲಿಸಬಹುದಾದ ಯುಕ್ತ ಗೌರವ.



ಜಗತ್ತಿನಲ್ಲಿ ಪ್ರಿಯವಾದದ್ದು ಜೀವ. ಹಿಂಸೆಯನ್ನು ಯಾವನು ತ್ಯಜಿಸುವನೋ ಅವನೇ ನಿಜವಾದ ಜ್ಞಾನಿ, ಜಗತ್ತಿನಲ್ಲಿ ಅಹಿಂಸೆಗಿಂತ ದೊಡ್ಡ ವಸ್ತು ಇನ್ನೊಂದಿಲ್ಲ.

—ಮಹಾವೀರ

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿತ್ರ   ಅನು: ಡಿ. ಎನ್. ಶ್ರೀನಾಥ್

(ಮುಂದುವರಿದುದು)

ಅಟಲ್ ದಾರವರ ಹೆಂಡತಿ ಆ ಕೂಡಲೇ ರೇಗಿದಳು. "ನನಗೇನೂ ಗೊತ್ತಿಲ್ಲ ಅಂತ ಹೇಳೋದಕ್ಕೆ ನೀವಿಷ್ಟಪಡ್ತಿದ್ದೀರಾ? ಆದರೆ, ಹೀಗೆ ಮಾಡುವುದರಿಂದ ನಿಮಗೇನೂ ಸಿಗಲ್ಲ. ಅದೆಷ್ಟೋ ದಿನಗಳಿಂದ ನಾನಿವರನ್ನು ನಿಮ್ಮೆಲ್ಲರಿಂದ ಬಚಾವು ಮಾಡ್ತಾ ಅಲೀತಿದ್ದೇನೆ. ಇವರಲ್ಲಿರುವ ಗುಣಗಳನ್ನೆಲ್ಲಾ ನಾನು ಹಾಳು ಮಾಡಿಯೇ ತೀರ್ತೀನಿ."

"ಅಂದ್ರೆ?"

"ಅಂದ್ರೇನು ಅಂತ ನಿಮಗೆ ಚೆನ್ನಾಗಿ ಗೊತ್ತಿರಬೇಕು. ನಾನು ಕಷ್ಟ ಅನುಭವಿಸಿ-ಅನುಭವಿಸಿ ಸತ್ತ ಕೂಡ್ಲೆ ಇವರನ್ನು, ಆವಳ ವಶಕ್ಕೆ ಒಪ್ಪಿಸಿಬಿಡಬಹುದೆಂದು ನೀವು ಯೋಚಿಸಿರಬೇಕು. ಆದರೆ, ನಾನು ಬದುಕಿರುವಂತೆಯೇ, ಹೀಗಾಗಲು ಅವಕಾಶ ಕೊಡಲಾರೆ."

"ಇದೇನು ನೀವು ಮಾತಾಡ್ತಿರೋದು?"

"ನಾನು ಹೇಳ್ತಿರೋದು ಸರಿಯಾಗಿದೆ. ನಾನು ಯಾರಿಗೂ ಹೆದರುವವಳಲ್ಲ. ನನಗೇನು ಹೆದರ್ಕೆ? ನಾನು ಬಡವಿ, ನನಗೇನೂ ತಿಳಿಯಲ್ಲ ಅಂತ ತಿಳಿದುಕೊಂಡಿದ್ದೀರ?"

"ಸ್ವಲ್ಪ ತಡೆದು ಮತ್ತೆ ಹೇಳಿದಳು, "ನೀವಿಲ್ಲಿಂದ ಈ ಕೂಡ್ಲೆ ಹೊರಟು ಹೋಗಿ. ನಿಮ್ಮ ಕಾಲಿಗೆ ಬೀಳ್ತೀನಿ. ನನಗಿನ್ನು ಸತಾಯಿಸಬೇಡಿ. ಹೋಗಿ!"

"ನಾನು ಹೋಗ್ಲಾ?"

"ಹೌದು, ನೀವೀಗಲೇ ಹೊರಟು ಹೋಗಬೇಕಾಗುತ್ತೆ. ಒಂದು ರಾತ್ರಿ ಊಟ ಮಾಡದಿದ್ರೆ ನೀವೇನು ಸತ್ತು ಹೋಗಲ್ಲ. ಇವರ ತಂದೆಯೂ ಇಲ್ಲಿಗೆ ಬಂದಿದ್ರು. ಅವರನ್ನೂ ನಾನು ಮನೆಯಿಂದ ಹೊರಗೆ ಹಾಕಿದೆ. ನಾನಿವರನ್ನು ಮದುವೆಯಾಗಿದ್ದೇನೆ. ನಾನೇನು ಮಹಾ ಪಾಪದ ಕಾರ್ಯ ಮಾಡಿಲ್ಲ."

"ನಿಮ್ಮ ಮದುವೆ ಬಗ್ಗೆ ನಾನೇನೂ ಹೇಳೇ ಇಲ್ಲ. ಯಾಕೆ ಈ ವಿಷಯಗಳನ್ನೆಲ್ಲಾ ಎತ್ತುತ್ತಿದ್ದೀರಿ? "ಅವಳು ಅಳುತ್ತಿದ್ದಾಳೆಂದು ನನಗನ್ನಿಸಿತು.

ಅವಳೇ ಮತ್ತೆ ಹೇಳಿದಳು, "ಅಪರಾಧ ಮಾಡಿದ್ದು ನಾನೇ? ಒಂದು ವೇಳೆ ಅಪರಾಧವೆಸಗಿದ್ದರೂ ನಾನು ಯಾರ ಎದುರೂ ಉತ್ತರಿಸುವುದಿಲ್ಲ. ಅವರಿಗೆ ಪರಿಚಿತರಿರುವ ಯಾರ ಮುಖವನ್ನೂ ನೋಡಲು ನಾನಿಷ್ಟಪಡುವುದಿಲ್ಲ. ನನ್ನ ಮಾವನ ಮನೆಯ ಯಾರೊಬ್ಬರೂ ಇಲ್ಲಿಗೆ ಬರಬಾರದೆಂಬುದು ನನ್ನಾಸೆ. ಅತ್ತೆ-ಮಾವ

ಅಂತೂ ಸತ್ತು ಹೋದರು. ಇನ್ನು ನೀವೇಕೆ ಬಂದು ಹೊಟ್ಟೆ ಉರಿಸುತ್ತೀರಾ?"

"ಅಟಲ್ ದಾರವರ ತಂದೆ-ತಾಯಿ, ತಮ್ಮ ಮಗನ ದುಃಖದಲ್ಲಿಯೇ ಸತ್ತು ಹೋದರು."

"ಒಳ್ಳೆಯದೇ ಆಯ್ತು! ಸದ್ಯ ಪೀಡೆಗಳು ತೊಲಗಿದವು! ಅವಳು ಸಮಾಧಾನದ ಉಸಿರು ಬಿಟ್ಟಳು.

"ಲೇ, ಎಲ್ಲಿಗೆ ಹೋದೆ! ಅವರಿಗೆ ಕೈ ಕಾಲು ತೊಳೆಯೋದಕ್ಕೆ ನೀರು ಕೊಟ್ಟೆಯೋ ಇಲ್ವೋ?" ಒಳಗಿನಿಂದ ಅಟಲ್ ದಾರವರ ಧ್ವನಿ ಕೇಳಿಸಿತು.

"ಅಟಲ್ ದಾ ಬಹುಶಃ ನಮ್ಮ ಮಾತುಗಳನ್ನು ಕೇಳಿರಬೇಕು." ನಾನು ಅವಳನ್ನೇ ಗಮನಿಸಿದೆ.

"ಅವರಿಗೆ ನಾನು ಹೇಳ್ತೀನಿ. ಈಗ ನೀವಂತೂ ಹೊರಟು ಹೋಗಿ! ಹೋಗಿ ಇಲ್ಲಿಂದ!" ಹೀಗೆಂದು ಅವಳು ನನ್ನನ್ನು ಹೊರ ಹಾಕಿದಳು.

"ಅಟಲ್ ದಾರವರಿಗೆ ಸಿಟ್ಟು ಬರುತ್ತೆ, ಅತ್ತಿಗೆ" ಹೊರಡುವಾಗ ಹೇಳಿದೆ.

"ಅವರ ಬಗ್ಗೆ ನೀವೇನೂ ಯೋಚ್ನೆ ಮಾಡಬೇಕಾಗಿಲ್ಲ. ಅವರಿಗೆ ನಾನಿದ್ದೇನೆ. ನೀವು ಹೋಗಿ!" ಅವಳು ದಢಾರನೆ ಬಾಗಿಲು ಮುಚ್ಚಿಕೊಂಡಳು. ಆ ಅಂಥಕಾರದಲ್ಲಿ ನಾನು ಹತಪ್ರಭನಾಗಿ ಅಟಲ್ ದಾರವರ ಮನೆಯ ಹೊರಗೆ ಸ್ವಲ್ಪ ಹೊತ್ತು ನಿಂತಿದ್ದೆ.

ಕಡೆಗೆ ಅಲ್ಲಿಂದ ಹೇಗೆ ಕಲ್ಕತ್ತೆಗೆ ಬಂದೆನೋ–ನನಗಂತೂ ನೆನಪಿಲ್ಲ. ಅಟಲ್ ದಾರವರ ಬಗ್ಗೆ ನನಗೆಷ್ಟು ಶ್ರದ್ಧೆಯಿತ್ತು, ಪ್ರೀತಿಯಿತ್ತು. ಆದರೆ ಇದೆಲ್ಲಾ ಎಲ್ಲಿ ಹೋಯಿತು?

ಕಲ್ಕತ್ತೆಕ್ಕೆ ಮರಳಿ ಬಂದ ಮೇಲೆ ಈ ವಿಷಯವನ್ನು ಬೇರೆಯವರಿಗೂ ಹೇಳಬೇಕೆಂದು ಪದೇ ಪದೇ ಮನಸ್ಸಾಗಿತ್ತು. ಆದರೆ ಯಾರಿಗೆ ಹೇಳುವುದು? ನಾನು ಪ್ರೀತಿಯಿಂದ ಕಾಣುತ್ತಿದ್ದ ವ್ಯಕ್ತಿ ಒಂದು ವಿಧದಲ್ಲಿ ಸತ್ತು ಹೋಗಿದ್ದ!

ವಿವಾಹದ ರಾತ್ರಿಯಂದೇ ಅಟಲ್ ದಾರವರ ಹೊಸ ಹೆಂಡತಿ ಅಟಲ್ ದಾರವರೊಂದಿಗೆ ಯಾವುದೇ ಸಂಬಂಧವಿಟ್ಟುಕೊಳ್ಳಲಿಲ್ಲವೆಂಬ ವಿಷಯ ತಿಳಿಯಿತು.

ಕಡೆಗೆ, ಬದುಕಿನ ಏರಿಳಿತಗಳಲ್ಲಿ ಯಾರು, ಎಲ್ಲಿಗೆ ಹೋದರೆಂಬ ವಿಷಯ ತಿಳಿಯಲಿಲ್ಲ. ಈ ಬಗ್ಗೆ ತಿಳಿಯಲು ಬಿಡುವೂ ಸಿಗಲಿಲ್ಲ.

ಇಂದು ಇಷ್ಟು ದಿನಗಳ ನಂತರ ಅರ್ಜಿಯಲ್ಲಿ ವಿಳಾಸ ಓದಿ ಆಶ್ಚರ್ಯಗೊಂಡಿದ್ದೆ.

"ನಿಮಗೆ ಉಚಿತವೆನಿಸಿದರೆ ಅವಳನ್ನು ನೇಮಿಸಲು ನನ್ನದೇನೂ ಅಡ್ಡಿಯಿಲ್ಲ" ಭುವನ ಬಾಬುಗಳು ನನ್ನ ಮೇಲೇ ಭಾರ ಹಾಕಿದರು.

ಶಾಲೆಯ ಜವಾನನ ಮೂಲಕ ಇಂದು ಲೇಖಾ ದೇವಿಗೆ ಒಂದು ಪತ್ರ ಕಳುಹಿಸಿದೆ. ಪತ್ರದಲ್ಲಿ, 'ದಯವಿಟ್ಟು ಒಂದು ದಿನ ಶಾಲೆಗೆ ಬನ್ನಿ. ಅಗತ್ಯವಾದ ವಿಷಯ ತಿಳಿದುಕೊಳ್ಳಬೇಕಾಗಿದೆ. ಎಂದು ಬರೆದಿದ್ದೆ.

ಶ್ರೀಮಂತ ತಂದೆಯ ಏಕಮಾತ್ರ ಪುತ್ರಿಗೆ ನೌಕರಿ ಮಾಡುವ ಅಗತ್ಯವೇನು? ಈ ವಿಷಯ ತಿಳಿಯುವ ಕುತೂಹಲವಿತ್ತು. ಪತಿಯನ್ನು ತ್ಯಜಿಸಿದ ಪತ್ನಿ ಅಧ್ಯಯನದಲ್ಲಿ ಮಗ್ನಳಾಗಿದ್ದ ವಿಷಯ ತಿಳಿದಿತ್ತು. ಆದರೆ,

ಅವಳು ಬಿ.ಎ. ಪಾಸು ಮಾಡಿದ್ದ ವಿಷಯ ನನಗೆ ತಿಳಿದಿರಲಿಲ್ಲ.

ಅಂದೇ ಸಂಜೆ ಶ್ಯಾಮ್-ಬಜಾರ್‌ಗೆ ಹೋದೆ. ಅಲ್ಲಿ ನನ್ನ ಹಳೆಯ ಮಿತ್ರ ಅಧೀರ್ ಬೋಸ್‌ನ ಮನೆಯಿತ್ತು.

"ಅಟಲ್ ದಾರವರ ಬಗ್ಗೆ ನಿನಗೇನಾದರೂ ವಿಷಯ ಗೊತ್ತಾ ಅಧೀರ್" ಮಾತಿನ ಮಧ್ಯೆ ಪ್ರಶ್ನಿಸಿದೆ.

ಅಧೀರನಿಗೆ ತನ್ನ ಸುತ್ತ-ಮುತ್ತಲಿನ ವಿಷಯದ ಬಗ್ಗೆ ಆಸಕ್ತಿಯಿತ್ತು. ಆರೋಗ್ಯ ವಂತನಾದ ಅವನಿಗೆ ಬಿಡುವೂ ಇತ್ತು.

"ಅಟಲ್ ದಾರವರ ಯಾವ ವಿಷಯ ?" ಅಧೀರ್ ನನ್ನನ್ನೇ ನೋಡಿದ.

"ಅಟಲ್ ದಾರವರ ಶ್ರೀಮಂತ ಪತ್ನಿ ನಮ್ಮ ಮೊಹಲ್ಲಾದ ಶಾಲೆಗೆ ನೌಕರಿಯ ಸಂದರ್ಶನಕ್ಕಾಗಿ ಬಂದಿದ್ದಳು. ಅವಳ ಬಗ್ಗೆ, ನಿನಗೇನಾದರೂ ಗೊತ್ತಾ ?"

"ಯಾಕೆ, ನಿನಗೇನೂ ಗೊತ್ತಿಲ್ವಾ ?" ನನ್ನ ಮಾತಿನಿಂದ ಅಧೀರನಿಗೆ ಆಶ್ಚರ್ಯ ವಾಗಲಿಲ್ಲ.

"ಅವಳ ತಂದೆ ತುಂಬಾ ಶ್ರೀಮಂತರಾಗಿದ್ದರು. ಭವ್ಯ ಬಂಗ್ಲೆಯಿತ್ತು...."

"ಎಲ್ಲವನ್ನು ಅಟಲ್ ದಾನೇ ಹಾಳು ಮಾಡಿದ"

"ಏನ್ ಹೇಳ್ತಿದ್ದೀಯಾ, ಅಧೀರ್ ?" ನನಗೆ ಆಕಾಶವೇ ಕಳಚಿ ಬಿದ್ದಂತಾಯಿತು.

"ಫಾಟ್‌ಶಿಲೆಯ ಶಾಲೆಯ ಸಮೀಪ ಒಂದು ಪುಸ್ತಕದಂಗಡಿ ತೆರೆಯೋಣವೆಂದು ಹೋಗಿದ್ದೆ. ಆಗ ಈ ವಿಷಯ ತಿಳೀತು"

ಅಧೀರ ಪುಸ್ತಕದ ವ್ಯಾಪಾರಿಯಾಗಿದ್ದ. ವಿಭಿನ್ನ ಪತ್ಯ-ಪುಸ್ತಕಗಳನ್ನು ಮುದ್ರಿಸಿ ಅವನ್ನೆಲ್ಲಾ ಶಾಲೆಗೆ ಹಾಕಲು ಪ್ರಯತ್ನಿಸುತ್ತಿದ್ದ. ಈ ಕೆಲಸಕ್ಕಾಗಿ ಅವನು ಅನೇಕ ಹಳ್ಳಿಗಳು ಮತ್ತು ನಗರಗಳಿಗೆ ಹೋಗಬೇಕಾಗುತ್ತಿತ್ತು. ಮೊದಲು, ಫಾಟ್‌ಶಿಲೆಯ ಶಾಲೆಯಲ್ಲಿ ಅಟಲ್ ದಾ ಇರುವ ವಿಷಯ ಅವನಿಗೆ ತಿಳಿದಿರಲಿಲ್ಲ. ಆದರೆ, ನಂತರ ಫಾಟ್‌ಶಿಲೆಗೆ ಹೋದಾಗಲೆಲ್ಲಾ ಅಟಲ್ ದಾರವರ ಬಗ್ಗೆ ಒಂದಲ್ಲ ಒಂದು ವಿಷಯ ಸಂಗ್ರಹಿಸುತ್ತಿದ್ದ.

ಅಧೀರ ತಿಳಿಸಿದ್ದ ಸುದ್ದಿ ರಹಸ್ಯ ವಾಗಿತ್ತು, ಹೀಗಾಗಿ ಇಷ್ಟು ದಿನಗಳ ನಂತರ ಆ ಬಗ್ಗೆ ಕಥೆ ಬರೆಯುತ್ತಿರುವೆ. ಅಂದು, ವಿಷಯ ತಿಳಿದಿದ್ದರೆ ಎಲ್ಲರಿಗೂ ವ್ಯಥೆಯಾಗುತ್ತಿತ್ತು. ಆದರೆ ಇಂದು ವ್ಯಥೆಪಡುವವರು ಯಾರೂ ಉಳಿದಿಲ್ಲ. ಆ ನಾಟಕಕ್ಕೆ ಅಂತಿಮ ಪರದೆ ಬಿದ್ದಿದೆ. ಹೀಗಾಗಿ ಆ ಬಗ್ಗೆ ಬರೆಯುತ್ತಿರುವೆ.

ನಮ್ಮ ಹಾಗೆಯೇ ಇಂದುಲೇಖಾ ದೇವಿಯೂ ಅಟಲ್ ದಾರವರನ್ನು ಹುಡುಕುತ್ತಿದ್ದಳು. ಅವರ ಸುಳಿವು ಸಿಗದೆ ದಣಿದಳು, ನಿರಾಶಳಾದಳು. ಆದರೂ, ಬಿಡದೆ ತನ್ನ ಶೋಧವನ್ನು ಮುಂದುವರಿಸಿದಳು.

ಅದೊಂದು ದಿನ ಅವಳು ಅಟಲ್ ದಾರವರ ಮನೆಯೆದುರು ಬಂದು ನಿಂತಳು !

"ಯಾರು ?" ಒಳಗಿನಿಂದ ಧ್ವನಿ ಬಂತು.

"ನಾನು ?"

"ನಾನು ಅಂದ್ರೆ ?" ಹೀಗೆಂದು ಹೊರ ಬಂದ ಮಹಿಳೆಯನ್ನು ಇಂದುಲೇಖಾ ದೇವಿ ತಕ್ಷಣ ಗುರುತಿಸಿದಳು. ಆದರೆ, ಕುಂತಿ ದೇವಿಯ ಪ್ರಶ್ನೆಗೆ ಉತ್ತರಿಸುವುದಕ್ಕೂ ಮೊದಲೇ ಅವಳು ಒಳಗೆ ನುಗ್ಗಿದಳು. ನೇರವಾಗಿ ಅಟಲ್ ದಾರವರು ಮಲಗಿದ್ದಲ್ಲಿಗೆ ಬಂದಳು. ರಗ್ಗು ಹೊದ್ದು ಪುಸ್ತಕ

ವೊಂದನ್ನು ಓದುತ್ತಿದ್ದ ಅಟಲ್ ದಾ ತಲೆಯೆತ್ತಿ "ನೀನು?" ಎಂದರು.

"ಹೌದು, ನಾನು!"

"ಹೀಗೆ, ಇದ್ದಕ್ಕಿದ್ದಂತೆ ಬಂದದ್ದು ಯಾಕೆ?"

"ನಮ್ಮಪ್ಪ ಸತ್ತು ಹೋಗಿ ಆರು ತಿಂಗಳಾಯ್ತು."

"ವಯಸ್ಸಾಗಿತ್ತು. ಸತ್ತು ಹೋದರು. ನಾನೇನು ತಾನೇ ಮಾಡಲು ಸಾಧ್ಯವಿತ್ತು, ಹೇಳು?"

"ಹೌದು, ನೀವೇನು ತಾನೇ ಮಾಡಬಹುದಿತ್ತು! ನಿಮಗೂ ನನಗೂ ಏನು ಸಂಬಂಧ!"

"ಇದನ್ನ ಹೇಳೋದಕ್ಕೆ ಅಷ್ಟು ದೂರದಿಂದ ಬಂದೆಯಾ?"

"ನನಗೆ ತಲೆ ಕೆಟ್ಟಿಲ್ಲ"

"ಮತ್ತೆ ಯಾಕೆ ಬಂದೆ? ಹೇಳು!"

"ಖಂಡಿತಾ ಹೇಳ್ತೀನಿ. ಹೇಳದಿದ್ರೆ, ನೀವು ಗೆದ್ದು ಬಿಡ್ತೀರಿ. ನೀವು ನನ್ನನ್ನು ಸೋಲಿಸಿ ಜಗತ್ತಿನ ಜನರಿಂದ ಶಬಾಶ್‌ಗಿರಿ ಪಡೆಯಬೇಕಂತ ಇದ್ದೀರ!"

"ಆ ಶಬಾಶ್‌ಗಿರಿ ಮಾತು ಬಿಡು"

"ನಾನಾಗ ಚಿಕ್ಕವಳಾಗಿದ್ದೆ. ನನಗೇನೂ ತಿಳೀತಿರಲಿಲ್ಲ. ಆದ್ರೆ ಈಗ ದೊಡ್ಡವಳಾಗಿದ್ದೀನೆ. ನಿಮ್ಮ ಉದ್ದೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆ.

ಕೋಣೆಯ ವಾತಾವರಣ ಗಂಭೀರವಾಗಿತ್ತು. ಕಿಟಕಿಯಿಂದ ಗುಬ್ಬಚ್ಚಿಯೊಂದು ಹಾರಿಬಂತು. ಆದರೆ, ಅಲ್ಲಿಯ ಭಯಾನಕ ಮೌನಕಂಡು, ಸಹಿಸದೆ, ಅದೂ ಮತ್ತೆ ಹೊರ ಹಾರಿಹೋಯಿತು.

ನಮ್ಮ ಆಸ್ತಿ–ಐಶ್ವರ್ಯದ ಬಗ್ಗೆ ನಿಮಗೆ ಕಣ್ಣಿತ್ತು. ಇದನ್ನು ಬಿಟ್ಟರೆ, ನಿಮ್ಮ–ನನ್ನ ಸಂಬಂಧವೇನಿರಲು ಸಾಧ್ಯ, ಹೇಳಿ?"

"ಈಗ, ನಿನಗೆ ಈ ವಿಷಯ ಹೊಳೀತಾ?"

"ನಾಚಿಕೆಗೆಟ್ಟವರಂತೆ ಈ ವಿಷಯ ಒಪ್ಕೋತಿದ್ದೀರಲ್ಲಾ?"

"ನಿನ್ನ ಜೊತೆ ಮದುವೆ ಮಾಡಿಕೊಳ್ಳೋದಕ್ಕೆ ಬಂದಿದ್ದೇ ದೊಡ್ಡ ನಾಚಿಕೆಗೇಡಿನ ವಿಷಯ ಅನ್ನೋದು ಯಾರಿಗೆ ತಾನೇ ಗೊತ್ತಿಲ್ಲ, ಹೇಳು!"

"ಆದ್ರೆ, ಈಗ ಅದನ್ನು ತೋರ್ಪಡಿಸಿಕೊಳ್ಳಬಾರದೆಂದಿದ್ದೀರ. ನೀವು ನನಗೇನೂ ಗೊತ್ತಿಲ್ಲ ಅಂತ ತಿಳ್ಕೊಂಡಿದ್ದೀರ?"

"ನಾನೆಷ್ಟೇ ಕಷ್ಟದಲ್ಲಿದ್ದರೂ, ನಿನ್ನೆದುರಂತೂ ಕೈಚಾಚಲು ಬರಲಿಲ್ಲ."

"ನೀವು ಭಿಕ್ಷೆ ಬೇಡುವ ಸ್ಥಿತಿಯಲ್ಲೇ ಇರುವುದನ್ನು ನೋಡ್ತಿದ್ದೀನಿ. ಆದ್ರೆ, ನೀವೇಕೆ ಭಿಕ್ಷೆ ಬೇಡಲಿಲ್ಲ ಅನ್ನೋದೂ ನನಗ್ಗೊತ್ತಿದೆ."

"ಏನು ಗೊತ್ತಿದೆ, ಹೇಳು?"

"ಅದನ್ನೇ ಹೇಳೋದಕ್ಕೆ ಬಂದಿರೋದು. ಅಲ್ಲದೆ, ಇಷ್ಟು ದಿನ ಯಾಕೆ ಬರಲಿಲ್ಲ ಅಂತ್ಲೂ ಹೇಳ್ತೀನಿ. ಯಾವ ಐಶ್ವರ್ಯದ ಲೋಭಕ್ಕಾಗಿ ನೀವು ನನ್ನನ್ನು ಮದುವೆಯಾದಿರೋ, ಆ ಐಶ್ವರ್ಯವನ್ನು ತಿರಸ್ಕರಿಸಿ ನೀವು ಗೆದ್ದು ಬಿಡ್ತೀರಿ ಅಂತ ತಿಳಿದುಕೊಂಡಿದ್ದೀರ?"

"ಅಂದ್ರೆ?" ಅಟಲ್ ದಾ ಇಂದು ಲೇಖಾಳನ್ನೇ ನೋಡಿದರು.

"ನಿಮಗೆ ತುಂಬಾ ಸೊಕ್ಕು, ಅಲ್ವಾ?"

"ಹೇಳಬೇಕೆಂದಿರುವುದನ್ನು ಸ್ಪಷ್ಟವಾಗಿ ಹೇಳಿಬಿಡು."

"ಸ್ಪಷ್ಟವಾಗಿಯೇ ಹೇಳ್ತೀನಿ, ನಾನು ನಿಮಗೆ ಅನೇಕ ಕಾಗದಗಳನ್ನು ಬರೆದರೂ ನೀವು ಉತ್ತರಿಸಲಿಲ್ಲ. ನೀವೇನು ತಿಳಿದು ಕೊಂಡಿದ್ದೀರಿ? ನೀವು ಉಪವಾಸವಿದ್ದು, ರೋಗದಿಂದ ನರಳಿ ಸತ್ತರೆ, ನಾನು ನಿಮ್ಮ ದುಃಖದಿಂದಾಗಿ ವ್ಯಥೆ ಪಡ್ತೀನಿ ಅಂತ ನೀವು ತಿಳಿದುಕೊಂಡಿದ್ದೀರಿ, ತಾನೇ?"

"ನಿನ್ನ ಒಂದೂ ಕಾಗದ ನನಗೆ ಸಿಕ್ಕ ನೆನಪಿಲ್ಲ. ಹೋಗ್ಲಿ ಬಿಡು ಆ ವಿಷಯ. ಆ ಕಾಗದಗಳಲ್ಲಿ ನೀನು ಏನೇನು ಬರೆದಿದ್ದೆ?"

"ನೋಡಿ!" ಅಕಸ್ಮಾತ್ ಹಿಂದಿನಿಂದ ಮಹಿಳೆಯ ಧ್ವನಿ ಕೇಳಿಸಿತು.

ಇಂದು ಲೇಖಾದೇವಿ ಹಿಂದಕ್ಕೆ ಹೊರಳಿದಳು. ಬಾಗಿಲ ಬಳಿ ಕುಂತಿ ನಿಂತಿದ್ದಳು.

"ಏನು?" ಇಂದು ಲೇಖಾ ಕುಂತಿಯನ್ನು ನೋಡಿದಳು.

"ಒಂದು ವರ್ಷದಿಂದ ಅವರು ರಾಶಿಗೆ ಹಿಡಿದಿದ್ದಾರೆ. ನೀವಿನ್ನು ನೋಡಿಯೂ ಅವರ ಮನನೋಯ್ಯುವಂತೆ ಮಾತಾಡ್ತಿದ್ದೀರ?"

"ಯಾಕೆ? ಅಷ್ಟು ಕಾಹಿಲೆಯಿರುವಾಗ ಡಾಕ್ಟರನ್ನು ಯಾಕೆ ಕರೆಸಲಿಲ್ಲ? ನಿಮ್ಮ ಹತ್ರ ಹಣವಿಲ್ಲದಿದ್ರೆ ನನ್ನ ಹತ್ರ ಕೇಳಬಹುದಿತ್ತಲ್ಲ?" ಇಂದುಲೇಖಾ ಅಟಲ್ ದಾರೆಡೆಗೆ ಹೊರಳಿದಳು, "ಹಣಕ್ಕಾಗಿಯೇ ನಿಮ್ಮ ತಂದೆ ನನ್ನೊಂದಿಗೆ ನಿಮ್ಮ ಮದುವೆ ಮಾಡಿದ್ದರು. ಆ ಹಣ ಕೇಳಲು ನಿಮಗೇಕೆ ನಾಚಿಕೆಯಾಯ್ತು?"

"ಬಾಯ್ಮುಚ್ಚು!" ಅಟಲ್ ದಾ ತಮ್ಮ ಶಕ್ತಿಮೀರಿ ಕಿರುಚಿದರು. ಅವರಲ್ಲಿನ್ನೂ ಇಷ್ಟು ಶಕ್ತಿ, ಸಾಮರ್ಥ್ಯ ಮತ್ತು ಆ ವೇಗವಿದೆಯೆಂಬುದನ್ನು ಕಲ್ಪಿಸಲೂ ಸಾಧ್ಯವಿರಲಿಲ್ಲ.

ಆದರೆ, ಇಂದುಲೇಖಾ ಇಷ್ಟು ಸುಲಭವಾಗಿ ಸೋಲುವವಳಾಗಿರಲಿಲ್ಲ. ಅವಳೂ ಗಟ್ಟಿಯಾಗಿ, "ಬಾಯಿಮುಚ್ಚಿಕೊಳ್ಳಲು ನನಗೆ ಹೇಳ್ತಿದ್ದೀರ?" ಎಂದಳು.

"ಹೌದು, ನಿನಗೇ ಹೇಳ್ತಿದ್ದೀನಿ."

"ಸುಮ್ಮನಿರಲು ನಾನಿಲ್ಲಿಗೆ ಬಂದಿಲ್ಲ. ಹಾಗೆ ಸುಮ್ಮನಿರುವುದು ಈಗ ನನ್ನ ಸರದಿಯಲ್ಲ. ನಾನಿವತ್ತು, ಇಲ್ಲಿಗೆ ನನ್ನ ಅಧಿಕಾರ-ಹಕ್ಕುಗಳನ್ನು ಹೇಳಲು ಬಂದಿದ್ದೇನೆ–ಅದನ್ನು ಕೂಗಿ-ಕೂಗಿ ಹೇಳ್ತೀನಿ."

"ಸರಿ ಹಾಗಿದ್ರೆ, ಅದೇನೂಂತ ಹೇಳಿ ಹೊರಟು ಹೋಗು."

"ಅಷ್ಟೇ ಅಲ್ಲ, ಒಂದು ವ್ಯವಸ್ಥೆಯನ್ನೂ ಮಾಡ್ತೀನಿ."

"ಹೇಳು-ಹೇಳು!"

"ನೀವಿಬ್ಬರೂ ಸೇರಿ ಹೀಗೆಯೇ ನನ್ನ ಬದುಕನ್ನು ಹಾಳು ಮಾಡ್ತೀರಾ? ನನಗೂ ನಿಮಗೂ ಯಾವ ಸಂಬಂಧವಿಲ್ಲ ಅಂತ ತಿಳಿದುಕೊಂಡಿದ್ದೀರಾ? ಅಗ್ನಿ-ಸಾಕ್ಷಿಯಾಗಿ ನೀವು ನನ್ನ ಮದುವೆಯಾಗಿರಲಿಲ್ವಾ?

"ಅದು ನನ್ನ ನಾಚಿಕೆಗೇಡಿತನವಾಗಿತ್ತು ಅಂತು ಆಗಾಗಲೇ ಹೇಳಿದೆ."

"ಆದ್ರೆ, ಇದರಲ್ಲಿ ನನ್ನ ತಪ್ಪೇನು? ನಿಮ್ಮ ನಾಚಿಕೆಗೇಡಿತನದ ಪರಿಣಾಮವನ್ನು ನಾನೇಕೆ ಅನುಭವಿಸಲಿ? ಇವತ್ತು, ಈ ಪ್ರಶ್ನೆಗೆ ನಿಮ್ಮಿಂದ ನನಗೆ ಉತ್ತರಬೇಕು."

ಅಟಲ್ ದಾ ಸ್ವಲ್ಪ ತಡೆದು ಹೇಳಿದರು, "ನನಗೆ ನಿನ್ನಿಂದ ಮುಕ್ತಿ ಬೇಕು. ಅದಕ್ಕಾಗಿ ನೀನು ಹೇಳುವ ಬೆಲೆಯನ್ನು ತೆತ್ತುವೆ."

"ಥೂ, ನೀವು ಹೇಡಿಗಳು! ಯಾವ ಬಾಯಿಯಿಂದ ಮುಕ್ತಿಯನ್ನು ಬೇಡುತ್ತಿದ್ದೀರಿ? ನಿಮಗೇನಾದರೂ ಮುಕ್ತಿ ಸಿಕ್ಕ

ಬಿಟ್ಟರೆ, ಜಗತ್ತಿನಲ್ಲಿರುವುದೆಲ್ಲಾ ಸುಳ್ಳಾಗಿ ಬಿಡುತ್ತೆ. ದೇವರು ಸುಳ್ಳಾಗುತ್ತಾನೆ, ಚಂದ್ರ-ಸೂರ್ಯರು ಸುಳ್ಳಾಗುತ್ತಾರೆ. ಇಡೀ ಜಗತ್ತೇ...."ಇಂದುಲೇಖಾ ಗರ್ಜಿಸಿದಳು.

"ನೀನೇನು ಇಷ್ಟಪಡ್ತಿದ್ದೀಯಾ, ಹೇಳು? ನನ್ನ ಆರೋಗ್ಯ ತುಂಬಾ ಹದಗೆಟ್ಟಿದೇ"

"ನಿಮ್ಮ ಚಿಕಿತ್ಸೆಯನ್ನು ನಾನು ಮಾಡಿಸಬೇಕೆಂದಿದ್ದೇನೆ. ನೀವು ಆರೋಗ್ಯದಿಂದ ಇರೋದನ್ನು ನಾನು ನೋಡಬೇಕು."

"ಚಿಕಿತ್ಸೆ?" ಕುಂತಿದೇವಿಗೆ ತುಂಬಾ ಆಶ್ಚರ್ಯವಾಯಿತು. ಸಿಡಿಲು ಬಡಿದಿದ್ದರೂ, ಅವಳಿಗೆ ಅಷ್ಟು ಆಶ್ಚರ್ಯವಾಗುತ್ತಿರಲಿಲ್ಲ.

ವಾಚಾಳಿ ಕುಂತಿಗೆ ಯಾರೋ ಬಾಯಿ ಕಟ್ಟಿಹಾಕಿದಂತಾಯಿತು. ಇಂದುಲೇಖಾಳ ಮಾತಿನಿಂದಾಗಿ ಕುಂತಿಯ ಬಾಯಿಯಿಂದ ಮಾತೇ ಹೊರಡಲಿಲ್ಲ.

"ನಾನೇಕೆ ನಿಮಗೆ ಚಿಕಿತ್ಸೆ ಮಾಡಿಸುವೆ. ನಿಮ್ಮ ಆರೋಗ್ಯ ಮರಳಿ ಬರುವುದರಿಂದ ನನಗೇನು ಲಾಭ ಅಂತ ನೀವು ಕೇಳಬಹುದು. ಆದರೆ, ನೀವು ಆರೋಗ್ಯವಂತರಾಗಿದ್ದರೆ, ನನಗೆ ಖಂಡಿತಾ ಲಾಭವಿದೆ. ನೀವು ರೋಗಿಯಾಗಿಯೇ ಇದ್ದರೆ, ನನಗೆ ಮುಕ್ತಿಯೇ ಇಲ್ಲ!"

"ಅಂದ್ರೆ?"

"ಇದರರ್ಥ ನೀವು ತಿಳಿಯುವ ಅಗತ್ಯವಿಲ್ಲ" ಈಗ,ಅಟಲ್ ದಾ ತುಂಬಾ ದುರ್ಬಲರಾಗಿ ಕಾಣುತ್ತಿರುವುದನ್ನು ಇಂದುಲೇಖಾ ಗಮನಿಸಿದಳು. ಇದುವರೆಗೂ ದಿಂಬಿಗೆ ಒರಗಿಕೊಂಡಿದ್ದ ಅವರು, ಈಗ ಸೆಟ್ಟಗೆ ಮಲಗಿದರು. ಅಟಲ್ ದಾರವರ ಬಾಯಿಯಿಂದ ರಕ್ತ ಒಸರುತ್ತಿರುವುದನ್ನು ಇಂದುಲೇಖಾ ಮತ್ತು ಕುಂತಿ—ಇಬ್ಬರೂ ಗಮನಿಸಿದರು.

"ಹೀಗೆ ನಿಂತು ಏನ್ ನೋಡ್ತಿದ್ದೀರಿ? ಯಾರಾದರೂ ಡಾಕ್ಟರನ್ನು ಕರ್ಕೊಂಡ್ ಬನ್ನಿ" ಇಂದುಲೇಖಾ ಕುಂತಿಯೆಡೆಗೆ ನೋಡಿದಳು.

"ಇದೇನು ಅವರ ಹೊಸ ಕಾಹಿಲೆಯಲ್ಲ" ಕುಂತಿ ಸಹಜತೆಯಿಂದ ಹೇಳಿದಳು.

"ಹೀಗೆ ಸುಮ್ನೆ ನಿಂತುಕೊಂಡ್ರೆ ಏನಾಗುತ್ತೆ? ಇವರು ಉಗುಳಲು ಒಂದು ಪಾತ್ರೆಯನ್ನಾದರೂ ತನ್ನಿ. ಹೀಗೇ ಕೆಮ್ಮುತ್ತಿದ್ದರೆ, ಇವರು ಸತ್ತೇ ಹೋಗ್ತಾರೆ"

"ನೀವು ಎದುರಿಗಿದ್ದರೆ, ನಾವಿವರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಹೊರಟು ಹೋಗಿ" ಕುಂತಿ ನಿಂತಲ್ಲಿಂದ ಮಿಸುಕಾಡಲಿಲ್ಲ.

"ಹೋಗೋದಕ್ಕೆ, ನಾನಿಲ್ಲಿಗೆ ಬಂದಿಲ್ಲ"

"ಇವರ ಒಳಿತನ್ನು ನೀವು ಬಯಸುತ್ತಿದ್ದರೆ, ನೀವಿಲ್ಲಿರೋದು ಸರಿಯಲ್ಲ"

"ಇವರನ್ನು ಇಂಥಾ ಸ್ಥಿತೀಲಿ ಬಿಟ್ಟು ಹೋಗಲಾರೆ".

"ಹಾಗಾದ್ರೆ, ನಿಮ್ಮ ಕಣ್ಣೆದುರೇ ಇವರ ಸಾವನ್ನು ನೋಡಬೇಕೆಂದಿದ್ದೀರ?"

"ನಾನೇನು ಇಷ್ಟಪಡ್ತಿದ್ದೀನಿ, ಏನು ಇಷ್ಟಪಡ್ತಿಲ್ಲ ಅಂತ ನೀವು ಯೋಚಿಸಬೇಕಾಗಿಲ್ಲ. ಇವರ ಒಳಿತು ಕೆಡಕು ನನ್ನ ಒಳಿತು ಕೆಡಕೂ ಆಗಬಹುದು. ನೀವು ನನಗೆ ಸಹಕರಿಸದಿದ್ದರೆ, ನಾನೇ ಎಲ್ಲಾ ನೋಡಿಕೋಬೇಕಾಗುತ್ತೆ" ಇಂದುಲೇಖಾ ಆ ಕೂಡಲೇ ಅಟಲ್‌ದಾರವರ ಬಳಿ ಬಂದು ಅವರ ತಲೆಯನ್ನು ತನ್ನ ಮಡಿಲಲ್ಲಿಟ್ಟುಕೊಂಡು ಕೂತಳು. ತನ್ನ ಸೆರಗಿನಿಂದ ಅವರ ಮುಖ

ವನ್ನು ಮೃದುವಾಗಿ ಒರೆಸಿ ಗಾಳಿ ಹಾಕ ಲಾರಂಭಿಸಿದಳು. ನೋಡು-ನೋಡುತ್ತಿದ್ದಂತೆಯೇ ಇಂದುಲೇಖಾ ದೇವಿ ಒಂದು ಆಶ್ಚರ್ಯದ ಮೂರ್ತಿಯಾಗಿ ಬಿಟ್ಟಿದ್ದಳು.

ಇಂದುಲೇಖಾಳ ವರ್ತನೆ ಕಂಡು ಕಾಂತಿ ಗರಬಡಿದವಳಂತೆ ನಿಂತುಬಿಟ್ಟಳು. ಅಂದಿನಿಂದಲೇ, ರೋಗಿ, ಸವತಿ ಹಾಗೂ ಆ ಗೃಹಸ್ಥ ಬದುಕಿನ ಭಾರವೆಲ್ಲಾ ಇಂದುಲೇಖಾ ದೇವಿಯ ಹೆಗಲ ಮೇಲೆ ಬಿತ್ತು.

"ಆಮೇಲೆ?" ನಾನು ಪ್ರಶ್ನಿಸಿದೆ.

ಅಧೀರ್ ಬೋಸ್ ಕಥೆಯನ್ನು ಪೂರ್ಣ ಗೊಳಿಸಿದ :

"ನಂತರ ನಮ್ಮ ಹೀರೋ ಅಟಲ್‌ದಾ ತಮ್ಮ ಶ್ರೀಮಂತ ಹೆಂಡತಿಯ ಹಣದಿಂದಲೇ ಜೀವನ ಸಾಗಿಸಲಾರಂಭಿಸಿದರು. ಔಷಧಿಗೆ ಹಣ; ಮನೆಬಾಡಿಗೆ ಎಲ್ಲವನ್ನೂ ಅವರ ಎರಡನೇ ಹೆಂಡತಿಯೇ ಭರಿಸುತ್ತಿದ್ದಳು. ಇಂದುಲೇಖಾ ದೇವಿಯ ತಂದೆ ಸ್ವರ್ಗಸ್ಥರಾದ ಮೇಲೆ ಕಬ್ಬಿಣದ ವ್ಯಾಪಾರ ನಿಂತಿತ್ತು. ಬ್ಯಾಂಕಿನಲ್ಲಿದ್ದ ಹಣದಿಂದಲೇ ಅವಳು ಖರ್ಚನ್ನು ನಿಭಾಯಿಸುತ್ತಿದ್ದಳು. ಅಟಲ್ ದಾರವರು ಈ ಪರಿಸ್ಥಿತಿಗೆ ಬರುತ್ತಾರೆಂದು ಕನಸಿನಲ್ಲೂ ಯೋಚಿಸಲು ಸಾಧ್ಯವಿರಲಿಲ್ಲ. ಈಗಂತೂ ಅವಳು ದಾರವರ ಸಂಸಾರ ಅವರ ಎರಡನೆಯ ಹೆಂಡತಿಯ ಹಣದಿಂದಲೇ ಸಾಗುತ್ತಿದೆ".

ಅಧೀರನ ಮಾತುಗಳಲ್ಲಿ ಸತ್ಯಾಂಶವಿರಬಹುದು. ಅಟಲ್ ದಾರವರಿಗಾಗಿ ಅವಳ ಹಣವೆಲ್ಲಾ ಖರ್ಚಾಗಿವೆ ; ಹೀಗಾಗಿ ಈಗ ಬಹುಶಃ ಇಂದುಲೇಖಾ ದೇವಿಗೆ ನೌಕರಿಯ ಅಗತ್ಯವುಂಟಾಗಿರಬಹುದೆಂದು ನಾನು ಮನಸ್ಸಿನಲ್ಲೇ ಯೋಚಿಸಿದೆ.

"ಅವಳನ್ನು ಸೆಲೆಕ್ಟ್ ಮಾಡಿದೆಯಾ ?" ಅಧೀರ ಪ್ರಶ್ನಿಸಿದ.

"ನಾಳೆ ಬರೋದಕ್ಕಂತೂ ಹೇಳಿದ್ದೇನೆ. ನೋಡೋಣ, ಏನು ಹೇಳ್ತಾಳೆ ಅಂತ. ನೌಕರಿಯ ಅಗತ್ಯ ನಿಮಗೇಕೆ ಅಂತ ಅವಳನ್ನು ಕೇಳಬೇಕೆಂದಿದ್ದೇನೆ" ಎಂದೆ.

ನನ್ನ ಪತ್ರ ಕಂಡು ಇಂದುಲೇಖಾದೇವಿ ಮಾರನೆಯ ದಿನವೇ ಬರುತ್ತಾಳೆಂದು ಕೊಂಡಿದ್ದೆ.

ಆದರೆ ನಿಶ್ಚಿತ ವೇಳೆಗೆ ಅವಳು ಬರಲೇ ಇಲ್ಲ. ಮಧ್ಯಾಹ್ನ ಒಂದು ಗಂಟೆಯಾಯಿತು. ಕಡೆಗೆ ಎರಡು ಗಂಟೆಯೂ ಆಯಿತು. ಆದರೂ ಇಂದುಲೇಖಾ ದೇವಿ ಬರುವ ಸೂಚನೆ ಕಂಡುಬರಲಿಲ್ಲ.

ಮೂರು ಗಂಟೆಗೆ ಅವಳು ಒಮ್ಮೆಲೆ ಬಂದಳು. ಆದರೆ, ತುಂಬಾ ಉದಾಸೀನಳಾಗಿದ್ದಳು ; ಹಿಂದಿನ ರಾತ್ರಿಯೆಲ್ಲಾ ಎಚ್ಚರಗೊಂಡಂತಿದ್ದಳು.

"ಯಾಕೆ ಆರೋಗ್ಯ ಸರಿಯಿಲ್ವಾ ? ಎಂದೆ.

"ಇಲ್ಲ"

"ಈ ಹುದ್ದೆಗೆ ನಿಮ್ಮನ್ನೇ ಆರಿಸಿದ್ದೇವೆ. ಸರಿಯಾದ ವೇಳೆಗೆ ನಿಮಗೆ ಅಪಾಯಿಂಟ್‌ಮೆಂಟ್—ಲೆಟರ್ ಸಿಗುತ್ತೆ"

"ನಿಮ್ಮ ಉಪಕಾರವನ್ನು ಮರೆಯಲಾರೆ" ಇಂದುಲೇಖಾ ದೇವಿಯ ಮುಖದಲ್ಲಿ ಕೃತಜ್ಞತಾ ಭಾವನೆ ಮೂಡಿತು. ಅವಳು ಕೈಜೋಡಿಸಿ ನಮಸ್ಕರಿಸಿ,ಅಲ್ಲಿಂದ ಹೊರಟು ಹೋದಳು.

ನನ್ನ ಪಾಲಿನ ಕೆಲಸವನ್ನಂತೂ ಮಾಡಿಕೊಟ್ಟಿದ್ದೆ. ಶಾಲೆಯೊಂದಿಗೆ ನನ್ನ ವೈಯಕ್ತಿಕ ಸಂಪರ್ಕವಂತೂ ಇರಲಿಲ್ಲ.

ಹೀಗಾಗಿ, ನನ್ನ ಕೆಲಸಗಳಲ್ಲಿ ಮಗ್ನನಾಗಿ ಬಿಟ್ಟೆ.

ಅದೊಂದು ದಿನ ಶಾಲೆಯ ಕಾರ್ಯದರ್ಶಿಗಳಾದ ಭುವನ್‌ಬಾಬುರವರು ನನ್ನನ್ನು ಭೇಟಿಯಾಗಲು ಬಂದರು.

"ನನ್ನ ಆಯ್ಕೆ ಹೇಗಿದೆ? ಹೊಸ ಶಿಕ್ಷಕಿ ಇಂದು ಲೇಖಾದೇವಿ ಹೇಗಿದ್ದಾರೆ?" ನನ್ನ ಕುತೂಹಲವನ್ನು ವ್ಯಕ್ತಪಡಿಸಿದೆ.

"ತುಂಬಾ ಉತ್ತಮ ಶಿಕ್ಷಕಿ. ಅಷ್ಟು ಉತ್ತಮ ಶಿಕ್ಷಕಿ ನಮ್ಮ ಶಾಲೆಯಲ್ಲಿ ಬೇರ್‍ಯಾರೂ ಇಲ್ಲ"

"ಅದು ಹ್ಯಾಗೆ?"

"ಇಂದುಲೇಖಾದೇವಿ ತುಂಬಾ ಶಿಸ್ತಿನ ಅಧ್ಯಾಪಕಿ. ಇದುವರೆಗೆ ಅವಳು ಒಂದು ದಿನವೂ ರಜೆ ಪಡೆದಿಲ್ಲ."

"ಆದ್ರೆ, ನಾನೊಂದು 'ರಿಸ್ಕ್' ತಗೊಂಡಿದ್ದೆ!"

"ಅದೇನು?"

"ಇಂದುಲೇಖಾದೇವಿ ತನ್ನ ಪತಿಯನ್ನು ತ್ಯಜಿಸಿದ್ದಾಳೆ. ಹೀಗಾಗಿ ನನಗೆ ಭಯವಿತ್ತು"

"ಎಂಥಾ ಭಯ?"

"ಇದರ ಪ್ರಭಾವ ನಿಮ್ಮ ಶಾಲೆಯ ವಿದ್ಯಾರ್ಥಿನಿಯರ ಮೇಲೆ...."

"ಇಲ್ಲ, ಇಲ್ಲ. ವಿಷಯ ನೀವು ತಿಳಿದುಕೊಂಡಂತಿಲ್ಲ ಅಂಥಾ ಆದರ್ಶ ಉಪಾಧ್ಯಾಯನಿಯನ್ನು ಈ ಮೊದಲು ನಾನು ನೋಡೇ ಇಲ್ಲ."

ನನಗಾಶ್ಚರ್ಯವಾಯಿತು. ಶಾಲೆಯಲ್ಲಿ ಅಷ್ಟು ಅಧ್ಯಾಪಕರಿರುವಾಗ ಇಂದುಲೇಖಾದೇವಿಯೇ ಭುವನ್‌ಬಾಬುರವರಿಗೆ ಆದರ್ಶ ಉಪಾಧ್ಯಾಯನಿ ಹೇಗಾದಳು? ನನಗರ್ಥವಾಗಲಿಲ್ಲ.

"ಕಾರಣ ಹೇಳ್ತೀರಾ?"

"ಅವಳ ಉಡುಗೆ–ತೊಡಿಗೆ ತುಂಬಾ ಸರಳ. ಕಾಫಿ–ಚಹಾದ ಅಭ್ಯಾಸವೇ ಅವಳಿಗಿಲ್ಲ. ಇಂದುಲೇಖಾದೇವಿ ವಿದ್ಯಾರ್ಥಿನಿಯರಿಗೆ ತುಂಬಾ ಆಸಕ್ತಿಯಿಂದ ಪಾಠ ಬೋಧಿಸುತ್ತಾಳೆ. ನಮ್ಮ ಮುಖ್ಯೋಪಾಧ್ಯಾಯನಿಯವರೂ ಅವಳನ್ನು ತುಂಬಾ 'ಲೈಕ್' ಮಾಡ್ತಾರೆ. ವಿದ್ಯಾರ್ಥಿನಿಯರಿಗೂ ಅವಳು ಅಚ್ಚುಮೆಚ್ಚಾಗಿದ್ದಾಳೆ."

"ಸದ್ಯ, ನನ್ನ ಆಯ್ಕೆ ಚೆನ್ನಾಗಿದೆಯಂತ ಆಯ್ತು. ನನಗೆ ತುಂಬಾ ಸಂತೋಷ."

ಕೆಲವೇ ದಿನಗಳಲ್ಲಿ ಇಂದುಲೇಖಾದೇವಿಯ ಪ್ರಸಿದ್ಧಿ ಸುತ್ತ-ಮುತ್ತ ಹಬ್ಬಿತು. ಅವಳು ಕೆಲವು ವಿದ್ಯಾರ್ಥಿನಿಯರಿಗೆ ಮನೆಯಲ್ಲೂ ಪಾಠ ಹೇಳಲಾರಂಭಿಸಿದಳು. ಅವಳಿಂದಾಗಿ, ಶಾಲೆಗೂ ಹೆಸರು ಬಂದಿತು. ಭುವನ್‌ಬಾಬುರವರು ಅವಳ ವೇತನವನ್ನೂ ಹೆಚ್ಚಿಸಿದರು.

ಅಂದು ಇಂದುಲೇಖಾದೇವಿಯ ಭೇಟಿಯಾಯಿತು. ಶಾಲೆಗೆ ಹೋಗುತ್ತಿದ್ದ ಅವಳು ತಲೆಗೆ ಸೆರಗು ಹೊದ್ದಿದ್ದಳು. ಇಂದುಲೇಖಾದೇವಿ. ಅಕ್ಕ-ಪಕ್ಕ ನೋಡದೆ, ತಲೆ ತಗ್ಗಿಸಿಕೊಂಡು ಹೋಗುತ್ತಿದ್ದಳು. ಅವಳನ್ನು ತಡೆದು ಮಾತನಾಡಲು ಮನಸ್ಸಾದರೂ, ಹೀಗೆ ಮಾತನಾಡುವುದು ಸರಿಯಲ್ಲವೆಂದು ಸುಮ್ಮನಾದೆ. ಅನಾತ್ಮೀಯ ಮಹಿಳೆಯೊಂದಿಗೆ ರಸ್ತೆಯಲ್ಲಿ ನಿಂತು ಮಾತನಾಡುವುದು ಸಭ್ಯತೆಯಲ್ಲ. ಇಂದುಲೇಖಾ ದೇವಿ ಒಂದು ಸಾಮಾನ್ಯ ಸೀರೆಯುಟ್ಟು, ಕಾಲಿಗೆ ಒಂದು ಸಾಧಾರಣ ಚಪ್ಪಲಿ ಹಾಕಿಕೊಂಡಿದ್ದಳು. ಕೈಯಲ್ಲಿ ಒಂದು ಸಣ್ಣ ಛತ್ರಿಯೂ ಇತ್ತು.

'ಅಟೆಲ್'ದಾರವರ ಸಮಾಚಾರವೇನು? ಅವರು ಹೇಗಿದ್ದಾರೆ?' ಎಂದು ಕೇಳಲು ಮನಸ್ಸಾಯಿತು. ಆದರೆ, ಈ ಪ್ರಶ್ನೆಗಳನ್ನು ಇಂದುಲೇಖಾದೇವಿ ಸಹಜವಾಗಿ ಪರಿಗಣಿಸದಿರಬಹುದೆಂದು ಯೋಚಿಸಿ, ನನ್ನ ಪಾಡಿಗೆ ನಾನು ಮುಂದುವರಿದೆ.

ಒಂದು ದಿನ ಭುವನ್‌ಬಾಬುರವರೇ ನನ್ನ ಬಳಿ ಬಂದು ಕೇಳಿದರು, "ನಿಮಗೆ ಇಂದುಲೇಖಾದೇವಿಯ ವಿಷಯ ತಿಳಿತಾ?"

"ಏನ್ ವಿಷಯ?"

"ಅವಳು ಮನುಷ್ಯಳಲ್ಲ, ಅವಳೊಬ್ಬಳು ದೇವತೆ" ಹೀಗೆಂದು ಹೇಳಿ, ಇಂದುಲೇಖಾದೇವಿ ಎಂಥಾ ಕಠಿಣ ಪರಿಸ್ಥಿತಿಯಲ್ಲಿ ತನ್ನ ಜೀವನಸಾಗಿಸುತ್ತಿದ್ದಾಳೆ, ತನ್ನ ಗಂಡನ ಅವಹೇಳನ ಮತ್ತು ತಿರಸ್ಕಾರಗಳನ್ನು ಸಹಿಸುತ್ತಿದ್ದಾಳೆ ಎಂಬುವರ ಬಗ್ಗೆಯೂ ಹೇಳುತ್ತಾ ಕಡೆಗೆ ಹೀಗೆಂದರು, "ಆ ರೋಗಿ ಗಂಡನಿಗಾಗಿ ತನ್ನ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ಕರಗಿಸುತ್ತಿದ್ದಾಳೆ. ಮದುವೆಯಾದ ರಾತ್ರಿಯಂದೇ ತ್ಯಜಿಸಿದ ಗಂಡನಿಗಾಗಿ ತನ್ನೆಲ್ಲಾ ಸುಖ-ಸಂಪತ್ತು, ಯೌವನ, ಆರೋಗ್ಯ ಎಲ್ಲವನ್ನೂ ಹಾಳುಮಾಡಿಕೊಂಡಳು. ಆ ಗಂಡನ ಆರೋಗ್ಯ ಸುಧಾರಣೆಗಾಗಿ ಅವನನ್ನು ದುಬಾರಿ ಸ್ಥಳಗಳಿಗೆ ವಾಯುಗುಣದ ಬದಲಾವಣೆಗಾಗಿ ಕಳುಹಿಸಿದ್ದಾಳೆ. ಪ್ರಸಿದ್ಧ ವೈದ್ಯರುಗಳಿಂದ ಚಿಕಿತ್ಸೆ ಮಾಡಿಸಿದ್ದಾಳೆ ದುಬಾರಿ ಔಷಧಿಗಳನ್ನು ತರಿಸಿಕೊಟ್ಟಿದ್ದಾಳೆ... ನಿಜ ಹೇಳಬೇಕೆಂದರೆ, ಇಂದಿನ ಸಮಾಜದಲ್ಲಿ ಇಂಥಾ ಪತಿಪರಾಯಣೆ ಸ್ತ್ರೀ ಸಿಗುವುದು ತುಂಬಾ ಕಷ್ಟ. ಖಂಡಿತವಾಗಿಯೂ ಅವಳು ದೇವತೆಯೇ."

"ನನಗೆ ಈ ವಿಷಯ ತಿಳಿದಿದೆ"

"ನಿಮಗೆ ಗೊತ್ತಾ?" ಭುವನಬಾಬುರವರಿಗೆ ಆಶ್ಚರ್ಯವಾಯಿತು.

"ಅದಕ್ಕೆ ನಾನು ಅವಳನ್ನು ಆಯ್ಕೆ ಮಾಡಿದ್ದು."

"ಕಳೆದ ಹದಿನೈದು ವರ್ಷಗಳಿಂದ ಹೀಗೆ ಗಂಡನನ್ನು ರೋಗದಿಂದ ಉಳಿಸಿಕೊಳ್ಳೋದು ಸಾಮಾನ್ಯ ವಿಷಯವಲ್ಲ! ಇವತ್ತು ಯಾರು ತಾನೇ ಇಷ್ಟೆಲ್ಲಾ ಮಾಡ್ತಾರೆ, ಹೇಳಿ!"

"ನಿಮ್ಮ ಮಾತೂ ಒಪ್ಪುತಕ್ಕದ್ದೇ...."

"ಇಂಥಾ ಪತಿ-ಪರಾಯಣೆಗೆ ಒಂದು ಸನ್ಮಾನ ಸಮಾರಂಭ ಏರ್ಪಡಿಸಬೇಕೆಂದಿದ್ದೇನೆ. ನೀವೇನು ಹೇಳ್ತೀರಾ?"

"ಖಂಡಿತಾವಾಗಿಯೂ ಸನ್ಮಾನಿಸಬೇಕಾದದ್ದೇ. ನನ್ನಿಂದೇನೂ ಅಭ್ಯಂತರವಿಲ್ಲ."

"ಆದ್ರೆ, ಇಂದುಲೇಖಾದೇವಿ ಅಡ್ಡಿ ಮಾಡ್ತಿದ್ದಾಳೆ. ನನ್ನ ಪತಿಸೇವೆ ಮಾಡೋದು ನನ್ನ ಧರ್ಮ, ಇದಕ್ಕೆಲ್ಲಾ ಸನ್ಮಾನವೇಕೆ, ಅಂತಾಳೆ. ನೀವು ಅವಳನ್ನು ಒಪ್ಪಿಸಲು ಸಾಧ್ಯವೇ?"

"ಅವಳ ಪತಿ ನನಗೆ ಪರಿಚಿತರು. ಆದರೆ, ಈ ಬಗ್ಗೆ ನಾನು ಅವಳಿಗೆ ಹೇಳಲಾರೆ."

"ಹಾಗಾದ್ರೆ, ಒಂದು ಕೆಲಸ ಮಾಡಿ." ಭುವನಬಾಬುಗಳು ಒಂದು ಪ್ರಸ್ತಾಪವನ್ನು ನನ್ನೆದುರಿಗಿಟ್ಟರು, "ನಾವು ಅವರ ಪತಿಯ ಶುಶ್ರೂಷೆಗಾಗಿ ಸ್ವಲ್ಪ ಚಂದಾಹಣವನ್ನು ಕೂಡಿಸಿಕೊಟ್ಟರೆ, ಹೇಗಿರುತ್ತೆ?"

"ಇದು ಒಳ್ಳೇದು" ನನ್ನ ಸಂತೋಷ ವ್ಯಕ್ತಪಡಿಸಿದೆ. ಕೆಲವೇ ದಿನಗಳಲ್ಲಿ ಭುವನ್ ಬಾಬುರವರ ಪ್ರಯತ್ನದಿಂದಾಗಿ ಒಂದು ಸಾವಿರ ರೂಪಾಯಿಗಳ ಸಂಗ್ರಹವಾಯಿತು.

ಸನ್ಮಾನ ಸಮಾರಂಭವನ್ನು ಸರಳವಾಗಿ ಆಚರಿಸಲಾಯಿತು. ಇಂದುಲೇಖಾದೇವಿ ಆಡಂಬರವನ್ನು ಬಯಸುತ್ತಿರಲಿಲ್ಲ. ಹಣ ಪಡೆದು ಅವಳು ಭುವನ್ ಬಾಬುಗಳಿಗೆ ಧನ್ಯವಾದಗಳನ್ನರ್ಪಿಸಿದಳು.

"ನನ್ನ ಪತಿ ಆದಷ್ಟು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿ" ಹೊರಡುವಾಗ ಇಂದುಲೇಖಾದೇವಿ ಭುವನಬಾಬುರವರಲ್ಲಿ ಕೋರಿಕೊಂಡಳು.

ಹಾಗಾದ್ರೆ ಅಟಲ್ ದಾ ಗುಣಮುಖರಾಗಿರಬಹುದು" ಎಂದೆ.

"ಇಲ್ಲ. ಅವರ ಆರೋಗ್ಯ ಸುಧಾರಿಸಿದ್ದರೆ ಅವರು ಕಲ್ಕತ್ತೆಗೆ ಬರುವ ಅಗತ್ಯವೇನಿತ್ತು ?"

"ಅಧೀರ್, ನಿನಗೆ ಅವರ ವಿಳಾಸ ಗೊತ್ತಿದೆಯಾ ?" ಅಟಲ್ ದಾರವರ ವಿಳಾಸ ಹಿಡಿದು ನಾನು 'ಬಹು ಬಜಾರ್'ನಲ್ಲಿದ್ದ ಅವರ ಮನೆಗೆ ಹೋದೆ.

ಕಲ್ಕತ್ತೆಯಲ್ಲಿ ಮನೆಗಳಿಗೆ ಕೊರತೆಯಿಲ್ಲ. ಆದರೆ ಅಟಲ್ ದಾ ಈ ಕಗ್ಗತ್ತಲು ಮನೆಯನ್ನೇ ಯಾಕೆ ಬಾಡಿಗೆಗೆ ಹಿಡಿದರು ? ಗಾಳಿ ಬೆಳಕಿರುವ ಮನೆ ಅವರಿಗೆ ಸಿಗಲಿಲ್ಲವೇ?

ಕತ್ತಲೆಯ ಹಾಗೂ ಉಸಿರುಗಟ್ಟಿಸುವ ಅವರ ಮನೆಯ ಆ ಕೋಣೆಯಲ್ಲಿ ತುಂಬಾ ದಿನಗಳ ನಂತರ ಅಟಲ್ ದಾರವರನ್ನು ಈ ಮೊದಲಿನಂತೆಯೇ ನಾನು ದಂಗಾದೆ.

ಬಾಗಿಲನ್ನು ಕುಂತಿದೇವಿಯೇ ತೆರೆದಳು. ಅವಳ ಮುಖದಲ್ಲಿ ತುಂಬಾ ಪರಿವರ್ತನೆಯಾದದ್ದನ್ನು ಗಮನಿಸಿದೆ.

"ನಿಮಗೆ ನನ್ನ ಗುರುತು ಸಿಕ್ಕಿರಬಹುದು."

ನನ್ನ ಈ ಮಾತಿಗೆ ಅವಳು ಉತ್ತರಿಸಲಿಲ್ಲ. ನಾನೇ ಮತ್ತೆ ಹೇಳಿದೆ, "ತುಂಬಾ ವರ್ಷಗಳಾಯ್ತು, ಘಾಟ್‌ಶಿಲೆಯಲ್ಲಿದ್ದ ನಿಮ್ಮ ಮನೆಗೆ ನಾನು ಬಂದಿದ್ದೆ."

"ಈಗ, ನೀವ್ಯಾಕೆ ಇಲ್ಲಿಗೆ ಬಂದಿರಿ ?" ಒಮ್ಮೆಲೆ ಕುಂತಿದೇವಿ ಪ್ರಶ್ನಿಸಿದಳು.

"ಅಟಲ್ ದಾ ಇಲ್ಲಿರೋ ವಿಷಯ ತಿಳೀತು. ಅವರನ್ನ ಒಂದ್ಸಲ ನೋಡ್ಕೊಂಡು ಹೋಗೋಣಾಂತ ಬಂದೆ."

"ನೀವು ಅವರನ್ನ ಯಾಕೆ ನೋಡ್ಬೇಕು?"

"ಯಾಕೆ, ಅವರನ್ನು ನೋಡಬಾರದಾ ?"

"ಇಲ್ಲ. ಹಾಗೇನಿಲ್ಲ. ಅವರನ್ನ ನೀವು ನೋಡಿದರೆ ಬಹುಶಃ ಅವರಿನ್ನೂ ಹೆಚ್ಚು ದಿನ ಬದುಕಬಹುದು."

ಕುಂತಿದೇವಿಯ ಮಾತು ಕೇಳಿ ನನಗೆ ತುಂಬಾ ಆಶ್ಚರ್ಯವಾಯಿತು. ಅವಳ ಮಾತಿನ ಅರ್ಥವೇನು ?

"ಅಂದ್ರೆ, ನೀವು ಹೇಳೋದೇನು ?"

"ಅವರು ಎಷ್ಟು ಬೇಗ ಸಾಯ್ತಾರೋ ಅಷ್ಟು ಅವರಿಗೇ ಒಳ್ಳೇದು."

"ಯಾಕೆ ?"

"ಸತ್ತಮೇಲೇ ಅವರಿಗೆ ಶಾಂತಿ."

"ನಿಮ್ಮ ಮಾತು ಅರ್ಥವಾಗುತ್ತಿಲ್ಲ."

"ಅವರು ಬೇಗ ಸಾವನ್ನ ಕಾಣಲೆಂದೇ ನಾನು ಹಗಲು ರಾತ್ರಿ ದೇವರಲ್ಲಿ ಪ್ರಾರ್ಥಿಸುತ್ತಿದ್ದೇನೆ. ಅವರು ಪಡುವ ಕಷ್ಟವನ್ನು ನನ್ನಿಂದ ನೋಡಲು ಸಾಧ್ಯವಿಲ್ಲ."

"ಅತ್ತಿಗೆ, ನೀವೇನು ಹೇಳ್ತಿದ್ದೀರ ?"

"ನಾನು ಸರಿಯಾಗೇ ಹೇಳ್ತಿದ್ದೀನಿ. ಸಾವೇ ಅವರಿಗೆ ಶುಭ !

(ಮುಂದುವರಿಯುವುದು)

ಪುಸ್ತಕ ಪರಿಚಯ

ವೆನಿಸಿನ ವರ್ತಕ—ಲೇ: ಷೇಕ್ಸ್‌ಪಿಯರ್ ; ಅನು: ಕೆ. ಎಸ್. ಭಗವಾನ್;
ಪ್ರಕಾಶಕರು: ಮಹಿಮ ಪ್ರಕಾಶನ, ಹುಡ್ಕೊ ಮನೆ, ಸಂ. ೧೦, ಉದಯರವಿ ರಸ್ತೆ, ೧ನೇ ಹಂತ, ಕುವೆಂಪುನಗರ, ಮೈಸೂರು–೫೭೦೦೨೩. ಪುಟ: ೧೨೮ ; ಬೆಲೆ: ರೂ. ೩೦

ಷೇಕ್ಸ್‌ಪಿಯರನ ಕೃತಿ ಭಾಷಾಂತರಿಸುವದು ಕ್ಲಿಷ್ಟಕಾರ್ಯ. ಸಾಲುಗಳೆಲ್ಲ ಕಾವ್ಯಾತ್ಮಕವಾಗಿದ್ದು ಆಡುನುಡಿಗೆ ಸಮೀಪವಾಗಿವೆ; ಅಲ್ಲದೆ ಸಮಕಾಲೀನ ಆಂಗ್ಲ ಭಾಷೆಯ ವಾಕ್‌ಸರಣಿ–ಸಂಪ್ರದಾಯಗಳ ಅಲಂಕಾರಗಳ ಬಳಕೆಯೂ ಇದೆ. ಪುರಾಣ ಪ್ರತಿಮೆಗಳೂ ಇವೆ. ಇವೆಲ್ಲವುಗಳನ್ನು ಅರ್ಥೈಸಿ ಭಾಷಾಂತರ ಆಗಬೇಕಾಗಿದೆ. ಕ್ಲಿಷ್ಟತೆ ಬರುವದು ಇಲ್ಲಿ. ಮೂಲವನ್ನು ವಿಸ್ತಾರವಾಗಿ ಅಭ್ಯಸಿಸದೇ ಭಾಷಾಂತರ ಅಸಾಧ್ಯ. ಇಂಥ ಆಳವಾದ ಅಧ್ಯಯನದ ಬಲ ಇರುವದರಿಂದಲೇ ಭಗವಾನ್‌ರಿಗೆ ಈ ಭಾಷಾಂತರ ಸಾಧ್ಯವಾಗಿದೆ; ಅಲ್ಲದೆ ಇದನ್ನು ಸ್ವಯಂಸ್ಫೂರ್ತಿ ಆನಂದದಿಂದಲೇ ಮಾಡಿದ್ದಾರೆ ಎನಿಸುವದು. ಉದಾಹರಣೆಗೆ—ಅಂಕ ೧ ದೃಶ್ಯ ಒಂದರಲ್ಲಿ ಆಂಟೊನಿಯೊ ಹೇಳುತ್ತಾನೆ: "My ventures are not in one bottom trusted, nor to one place." ಭಾಷಾಂತರ: "ನನ್ನೆಲ್ಲ ಬಂಡವಾಳ ಒಂದೇ ಹಡಗಲ್ಲಿ ಅಥವಾ ಒಂದೇ ಸ್ಥಳದಲ್ಲಿ....ಮಾತ್ರ ಸಿಲುಕಿಲ್ಲ". ಇಲ್ಲಿ bottom ಶಬ್ದಕ್ಕೆ ಸರಿಯಾಗಿ "ಹಡಗಲ್ಲಿ" ಎಂದಿದೆ. ಇಲ್ಲಿ synecdoche ಅಲಂಕಾರದ ಬಳಕೆ ಕವಿ ಮಾಡಿದ್ದಾನಲ್ಲವೇ? ಭಾಷಾಂತರ ಕೃತಕ ಆಗದಂತೆ ದೇಸಿಯ ವಾಕ್ಸರಣಿಯ ಬಳಕೆಯಿದೆ. ಇದರಿಂದ ವಿಶೇಷ ಮೆರುಗು ಬರುವಂತಿದೆ. ಅಂಕ ೧ ದೃಶ್ಯ ೧ ರಲ್ಲಿ ಸೆಲೆರಿಯೊ ಹೇಳುತ್ತಾನೆ: "My wind cooling my broth, would blow me to an ague....". ಭಾಷಾಂತರ—"ಬಿಸಿ ಸಾರನ್ನು ರುಬಿ ನಾ ತಣ್ಣಗಾಗಿಸುವಾಗ, ಚಳಿಜ್ವರವೇ ಬಂದಂತಾಗುತ್ತದೆ." ಇಡೀ ವಾಕ್ಯ ಭಾಷಾಂತರವೆನಿಸದೆ ಮೂಲವೆ ಎಂಬ ಅನುಮಾನ ಬರುವಂತಿದೆ. ಇನ್ನೊಂದು ಕ್ಲಿಷ್ಟತೆ ಎಂದರೆ ಕನ್ನಡದಲ್ಲೇ ಕಾವ್ಯಾತ್ಮಕವಾಗಿ ಸಂವಾದ ಬರೆಯೋದು. ಮಾತ್ರಾಗಣಗಳ ಕೃತಕತೆಯ ಬಂಧದಿಂದ ಮುಕ್ತವಾಗಿ, ಕಾವ್ಯಾತ್ಮಕತೆಯನ್ನು ಉಳಿಸಿಕೊಂಡು, ಆಡುನುಡಿಯ ಸಮೀಪವಾಗುವ ಭಾಷೆಯನ್ನು ಬಳಸಿಕೊಂಡು ಸಂವಾದ ಬರೆಯುವ ಸಾಹಸ ಮಾಡಿದ್ದಾರೆ. ಹಿಂದಿ

ನವರು ಮಾತ್ರಾಗಣದಲ್ಲಿ ಕಾವ್ಯನಾಟಕ ಬರೆದರು. ಈ ಬಂಧನ ತೊಡೆದು ಸರಳ ಆಡುನುಡಿಯಲ್ಲಿ ಭಗವಾನ್ ಬರೆದು ಮೊದಲಿಗರಾಗಿದ್ದಾರೆ ಈ ಸಾಹಸದಲ್ಲಿ ಈಗ ಭಗವಾನರದು ಸಿದ್ಧಹಸ್ತ. ಮೂಲ ಕಲ್ಪನೆಯನ್ನಾಗಲಿ ಭಾವನೆಯನ್ನಾಗಲೀ ಅಲ್ಪವೂ ಊನವಾಗದೇ ಪರಿಣಾಮಕಾರಿಯಾಗಿ ರೂಪಾಂತರಿಸುವಲ್ಲಿ ಭಗವಾನರು ತುಂಬ ಯಶಸ್ವಿ ಆಗಿದ್ದಾರೆ. ತುಂಬ ಪ್ರಸಿದ್ಧವಾದ ಈ ಸಾಲುಗಳನ್ನು ನೋಡಬಹುದು: "The quality of mercy is not strained; it droppeth as the gentle rain from heaven upon the place beneath; it is twice blessed: It blesseth him that gives and him that takes: "Tis mightiest in the mightiest." ಭಾಷಾಂತರ—"ಕರುಣೆ ಬಲವಂತದಿಂದ ಬರುವ ರಸವಲ್ಲ, ಅದು ನಭದಿಂದ ಸುರಿವ ಸೌಮ್ಯ ಮಳೆಯಂತೆ ಈ ನೆಲದ ಮೇಲಿಳಿಯುತ್ತದೆ; ಅದು ಉಭಯ ಶುಭಕಾರಿ. ಅದು ಕೊಡುವಾತನನ್ನ ಮತ್ತೆ ಪಡೆವಾತನನ್ನ ಹರಸುತ್ತದೆ. ಪ್ರಬಲತಮನಲ್ಲಿ ಅದು ಪ್ರಬಲತಮ...."

ನಾಂದಿಯಾಗಿ ನಾಟಕಕ್ಕೆ ಬರೆದ ವಿಮರ್ಶೆ ನಾಟಕದ ಅರ್ಥಗ್ರಹಣಕ್ಕೆ ತುಂಬಾ ಸಹಾಯಕಾರಿ. ಮೇಲ್ನೋಟದಲ್ಲಿ ರೊಮ್ಯಾಂಟಿಕ್ ಕಾಮಿಡಿ ಎಂದು ಕಂಡರೂ ತಳದಲ್ಲಿರುವ ಜಾಗ್ರತ ಜ್ವಾಲಾಮುಖಿ. ಸಾಮಾಜಿಕ ಜನಾಂಗಿಕ ವಾಂಶಿಕ ಧಾರ್ಮಿಕ ಆರ್ಥಿಕ ಸಂಘರ್ಷಗಳ ಕಿಡಿ ಎಂದು ಭುಗಿಲ್ಲೆಂದು ಏಳುವದೋ ಎಂಬ ಭೀತಿ ಉಂಟಾಗಿಸುವ ಕ್ರಿಯಾಶೀಲತೆ ಇದೆ. ಇವೆಲ್ಲವುಗಳನ್ನು ಈ ಭಾಷಾಂತರದಲ್ಲಿ ಕಾಣಬಹುದು. ಒಂದು ಮಹತ್ವವಾದ ಷೇಕ್ಸ್‌ಪಿಯರನ 'ಕಾಮಿಡಿ' ನಾಟಕವನ್ನು ರೂಪಾಂತರಿಸಿ ಕನ್ನಡ ನುಡಿಗೆ ದೊಡ್ಡ ಸೇವೆ ಮಾಡಿದ್ದಾರೆ. ಈ ರೂಪಾಂತರ ಅರ್ಥಪೂರ್ಣ ಹಾಗೂ ಸುಂದರವಾಗಿದೆ.

ಅರವಿಂದ ನಾಡಕರ್ಣಿ

*   *   *   *   *

ಬ್ರುಸೆಲ್ಲಾ ರೋಗ—ಲೇಖಕರು: ಡಾ|| ಸ. ಜಿ. ನಾಗಲೋಟಿಮಠ; ಪ್ರಕಾಶಕರು: ನವಕರ್ನಾಟಕ ಪ್ರಕಾಶನ; ಪ್ರಥಮ ಮುದ್ರಣ: ಮೇ ೧೯೯೫; ಪುಟಗಳು: ೫೬; ಬೆಲೆ: ೧೨-೦೦.

ಬ್ರುಸೆಲ್ಲಾ ರೋಗ ಲಕ್ಷಣಗಳು ಏನು? ತಲೆ ನೋವೇ? ಕಾಲು ನೋವೇ? ಕಣ್ಣು ಕುರವೇ? ಮಗುವಿಗೆ ಜ್ವರವೇ? ದನಕರುಗಳಿಗೆ ಜ್ವರವೇ? ಹೆಂಗಸರ ಖಾಯಿಲೆಯೇ? ಗಂಡಸರ ನಿರ್ವೀರ್ಯತೆಯೇ? ಚರ್ಮದ ಗಂಟೇ? ಮನೆಮಂದಿಗೆಲ್ಲಾ ಒಟ್ಟಾಗಿ ವಿಚಿತ್ರ ಜ್ವರವೇ? ಬಂಜೆತನವೇ? ಲೈಂಗಿಕ ರೋಗವೇ? ಭುಜ ನೋವೇ? ಬೆನ್ನು ನೋವೇ? ಕಿವಿ ನೋವೇ? ಇವೆಲ್ಲವೂ ಬ್ರುಸೆಲ್ಲಾ ರೋಗ ಲಕ್ಷಣಗಳೂ ಹೌದು. ಈ ಪುಸ್ತಕದ ಅಧ್ಯಾಯಗಳೂ ಹೌದು. ಅಧ್ಯಾಯದಿಂದ ಅಧ್ಯಾಯಕ್ಕೆ ಪುಸ್ತಕ

ಬೆಳೆಯುತ್ತಾ ಬ್ರುಸೆಲ್ಲಾ ರೋಗದ ವಿರಾಟ್ ದರ್ಶನವನ್ನು ನಮ್ಮ ಮುಂದಿಟ್ಟು ನಮ್ಮನ್ನು ಬೆಳಗಿಸುತ್ತದೆ.

ಹೀಗೊಂದು ರೋಗ ಇದೆ ಎಂಬ ಬಗ್ಗೆ ರೋಗಿಗಳೂ, ವೈದ್ಯರೂ ಸಮವಾಗಿ ಅಜ್ಞರಾಗಿದ್ದ ಕಾಲದಲ್ಲಿ ಹಿರಿ ವೈದ್ಯರುಗಳ ವಿರುದ್ಧ ತತ್ವ ಸಂಘರ್ಷವನ್ನು ನಡೆಸುತ್ತಾ, ನಡೆಸುತ್ತಾ ಲೇಖಕರು ನಡೆದ ಬಗೆ ಅಪ್ರತಿಮವಾದದ್ದು. ಇವರು ರೋಗದ ವಿವಿಧ ಮಗ್ಗುಲುಗಳನ್ನು ಸಂಶೋಧಿಸಿದರು. ನೂರಾರು ರೋಗಿಗಳನ್ನು ಸ್ವಯಂ ಚಿಕಿತ್ಸಿಸಿದರು. ಹಲವಾರು ವೈದ್ಯರನ್ನು ಸಜ್ಜುಗೊಳಿಸುವ ಮೂಲಕ ಸಾವಿರಾರು ರೋಗಿಗಳ ನೋವು ನಿವಾರಿಸಲು ಕಾರಣರಾದರು. ಇದೀಗ ಈ ಬಗ್ಗೆ ಅತ್ಯಂತ ಸರಳವಾಗಿ, ಸ್ಫುಟವಾಗಿ, ಮನನೀಯವಾಗಿ ಪುಸ್ತಕ ಬರೆದು ಲಕ್ಷಾಂತರ ಜನರಿಗೆ ದಾರಿ ದೀಪವಾಗಿದ್ದಾರೆ. ಎಲ್ಲ ರೀತಿಯಿಂದಲೂ ಜನಪರ ಕೆಲಸ ಮಾಡುತ್ತಿರುವ ಡಾ|| ನಾಗಲೋಟಿಮಠ ಅವರು ಅನಂತ ಅಭಿನಂದನಾರ್ಹರು.

ರಾತ್ರಿಯ ಹೊತ್ತು ಈ ಪುಸ್ತಕವನ್ನು ಓದುತ್ತಾ ಹೋದಂತೆ ನನ್ನ ಕಣ್ಣುಗಳು ನೋಯತೊಡಗಿದುವು. ಕೈಗಳಿಂದ ಕಣ್ಣುಜ್ಜುತ್ತಾ ಮನ ಮಿಡಿಯತೊಡಗಿತು. "ನನ್ನ ಕಣ್ಣು ನೋವಿಗೂ ಬ್ರುಸೆಲ್ಲಾ ಕಾರಣವಿರಬಹುದೇ?" ಅದೇ ಕಾಲಕ್ಕೆ ನಮ್ಮ ಮನೆಯ ಪ್ರತಿಯೊಬ್ಬರಿಗೂ ಒಂದೊಂದು ಕಾಯಿಲೆ ಇತ್ತು. ಇದಕ್ಕೆಲ್ಲಾ ಕಾರಣ ಬ್ರುಸೆಲ್ಲಾವೇ ಆಗಿದ್ದರೆ? ಎಂಬ ಆತಂಕವೂ ಮೂಡಿತ್ತು. ಈ ರೀತಿ ಮನಸ್ಸಿನ ಮೇಲೆ ಪರಿಣಾಮ ಮಾಡುವುದು ಪುಸ್ತಕದ ಹೆಚ್ಚುಗಾರಿಕೆಯೂ ಹೌದು. ಜೊತೆಗೆ ಓದುಗರು ಗೊಂದಲಕ್ಕೂ ಆತಂಕಕ್ಕೂ ಎಡೆಯಾಗುವಂತಾಗುವುದು. ಹಾಗಾಗಿ ಮಾಮೂಲಿ ಖಾಯಿಲೆಯನ್ನೂ, ಬ್ರುಶೆಲ್ಲಾವನ್ನೂ ಪ್ರತ್ಯೇಕಿಸುವ ಬಗ್ಗೆ ಯಾವುದೇ ಸರಳ ಸೂಕ್ಷ್ಮಗಳಿಲ್ಲವೇ? ಸಾಧ್ಯವಿಲ್ಲವೇ? ಶೇಕಡಾವಾರು ಬ್ರುಸೆಲ್ಲಾ ರೋಗದ ಪ್ರಮಾಣ ಎಷ್ಟು? (ಯಾಕೆಂದರೆ ಪುಸ್ತಕ ಓದುತ್ತಾ ಹೋದಂತೆ ನಮ್ಮ ಸುತ್ತಮುತ್ತ ಇರುವ ಎಲ್ಲಾ ರೋಗಿಗಳೂ ಬ್ರುಸೆಲ್ಲಾ ರೋಗಿಗಳೆಂದೆನಿಸಿ ಬಿಡುವುದು.) ಈ ಬಗ್ಗೆ ಪುಸ್ತಕದಲ್ಲಿ ಚರ್ಚಿಸಿದ್ದರೆ ಚೆನ್ನಾಗಿತ್ತು. ಹಾಗೂ ರೋಗಿಗಳಿಗೆ, ಅದಕ್ಕಿಂತ ಹೆಚ್ಚಾಗಿ ವೈದ್ಯರಿಗೆ ಪ್ರಯೋಜನವಾಗುವ ರೀತಿಯಲ್ಲಿ ಔಷಧಿಗಳ ಬಗೆಗೂ ಸ್ವಲ್ಪ ಹೇಳಬಹುದಿತ್ತೇನೋ?

ಸಹಸ್ರ ನಾಮಾಂಕಿತವಾಗಿರುವ ಈ ಬ್ರುಸೆಲ್ಲಾ ರೋಗದ ಮೂಲ ನಮ್ಮ ಸಾಕು ಪ್ರಾಣಿಗಳಾದ ಆಡು, ಕುರಿ, ಎಮ್ಮೆ, ದನಗಳು ಎಂಬುದನ್ನು ಸಾಕಷ್ಟು ವಿಸ್ತೃತವಾಗಿ ಪುಸ್ತಕದಲ್ಲಿ ವಿವರಿಸಿದ್ದಾರೆ. ಆಕಳ ಹಾಲಿನಿಂದ, ಮಂಗಳಕರವೆಂದು ಭಾವಿಸಿ ನಾವೆಲ್ಲ ಸ್ವೀಕರಿಸುವ ಪಂಚಗವ್ಯದಿಂದ, ಬ್ರುಸೆಲ್ಲಾ ಹಬ್ಬುವ ಬಗೆಯನ್ನು ಬಹಳ ಮನೋಜ್ಞವಾಗಿ ತಿಳಿಸಿದ್ದಾರೆ. ಆದರೆ ಈ ಸಾಕು ಪ್ರಾಣಿಗಳಲ್ಲಿ ಬ್ರುಸೆಲ್ಲಾವನ್ನು ಗುರುತಿಸುವ ಬಗೆ ಹೇಗೆ? ಗೋವಳರು ಈ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಏನು? ಎಂಬುದನ್ನು ಚರ್ಚಿಸದೆ ಬಹಳಷ್ಟು ಗೊಂದಲ ಉಂಟಾಗುತ್ತದೆ- ಯಾಕೆಂದರೆ ನಮ್ಮ ಅನೇಕ ಪಶುವೈದ್ಯರುಗಳಿಂದ ನಾವೆಲ್ಲ ಇದು ತನಕ ತಿಳಿದಂತೆ "ದನಗಳಲ್ಲಿ ಪುನರಾವರ್ತಿತ ಕಂದು

ಹಾಕುವುದು (Reprated Abortion) ಬ್ರುಸೆಲ್ಲಾ ರೋಗ ಲಕ್ಷಣ. ಅಂಥಾ ಹಸುಗಳನ್ನು ವಿದೇಶಗಳಲ್ಲಾದರೆ ಸಾಯಿಸುತ್ತಾರೆ. ಈ ದೇಶದ ಅರ್ಥ ವ್ಯವಸ್ಥೆಯೊಳಗೆ ಮಾರಾಟ ಮಾಡುವುದು ಬುದ್ಧಿವಂತಿಕೆ. ಚಿಕಿತ್ಸೆ ಇಲ್ಲ. ಈ ರೋಗ ಮನುಷ್ಯನಿಗೂ ಹಬ್ಬುವುದು." ಹೀಗೆ ತಿಳಿದಿದ್ದ ನನಗೆ ಬ್ರುಸೆಲ್ಲಾ ರೋಗವೂ ಚಿಕಿತ್ಸಿಸಲ್ಪಡುತ್ತದೆ ಎಂದು ತಿಳಿದು ಅತ್ಯಂತ ಸಂತೋಷವಾಯಿತು. ಜೊತೆಗೆ ದನಗಳಲ್ಲಿ ಈ ಖಾಯಿಲೆಗೆ ಚಿಕಿತ್ಸೆ ಇದೆಯೇ? ಆರ್ಥಿಕವಾಗಿ ಕಾರ್ಯ ಸಾಧ್ಯವೇ? ಎಂಬ ಬಗ್ಗೆ ತಿಳಿಯದೆ ಪರದಾಡುವಂತಾಯಿತು.

ಕೆಲವು ವರ್ಷಗಳ ಹಿಂದೆ ನನ್ನಲ್ಲಿ ನಾಲ್ಕೈದು ದನಗಳು ಕಂದು ಹಾಕಿದವು. ಗಾಬರಿಗೊಂಡ ನಾನು ಬೆಂಗಳೂರು ಪಶುವೈದ್ಯ ವಿಶ್ವವಿದ್ಯಾಲಯದಲ್ಲಿ ಎಲ್ಲಾ ದನಗಳ ರಕ್ತವನ್ನೂ ಬ್ರುಸೆಲ್ಲಾಕ್ಕಾಗಿ ಪರೀಕ್ಷೆ ಮಾಡಿಸಿದೆ. ಅದೃಷ್ಟವಶಾತ್ ದನಗಳ ಕ್ಷಿಪ್ರ ಪ್ರಸವಕ್ಕೆ ಬ್ರುಸೆಲ್ಲಾ ಕಾರಣವಾಗಿರಲಿಲ್ಲ. ನನ್ನ ದನಗಳನ್ನೂ ಮಾರಬೇಕಾಗಿರಲಿಲ್ಲ. ಬಹುಶಃ ಆಹಾರ ದೋಷ ಇದ್ದಿರಬಹುದು. ಮುಂದೆ ಅವು ಸರಿಯಾಗಿ ಕರು ಹಾಕಿದುವು. ಡಾ॥ ನಾಗಲೋಟಿಮಠರ ಪ್ರಕಾರ ಕಂದು ಹಾಕುವುದೊಂದೇ ಬ್ರುಸೆಲ್ಲಾ ರೋಗ ಲಕ್ಷಣವಲ್ಲ. ಹಾಲಿನಲ್ಲಿ ಕೀವು, ರಕ್ತ ಬರುವುದೂ ಬ್ರುಸೆಲ್ಲಾ ಲಕ್ಷಣವೇ ಆಗಿರುತ್ತದೆ. ಕೆಚ್ಚಲಲ್ಲಿ ಹಾಲು ಕೆಡುವುದು ಇಷ್ಟರವರೆಗೆ ನಾವೆಲ್ಲಾ ತಿಳಿದಿರುವಂತೆ ದನಗಳಲ್ಲಿ (ಕೆಟ್ಟ ಖಾಯಿಲೆ ಏನೋ ನಿಜ) ಅತ್ಯಂತ ಸಾಮಾನ್ಯ ಖಾಯಿಲೆ. ಬ್ರುಸೆಲ್ಲಾ ಇಲ್ಲವೆಂದು ಪರೀಕ್ಷೆಯಿಂದ ದೃಢಪಟ್ಟ ದನಗಳಿಗೂ ಕೂಡ ಹಾಲು ಹಾಳಾಗುವ ರೋಗ ಮೊದಲೂ, ಆಮೇಲೂ ಬಂದೇ ಇದೆ. ಹಾಗಾದರೆ ಈ ಹಾಲು ಹಾಳಾಗುವಿಕೆಗೆ ಕಾರಣವೇನು? ಬ್ರುಸೆಲ್ಲಾ ಕಾರಣವಾಗಿ ಹಾಲು ಹಾಳಾಗುವುದಕ್ಕೂ, ಬೇರೆ ಕಾರಣದಿಂದ ಹಾಳಾಗುವುದಕ್ಕೂ ವ್ಯತ್ಯಾಸವೇನು? ವ್ಯತ್ಯಾಸವಿದೆಯೇ? ಪಶುವೈದ್ಯ ಪರಿಭಾಷೆಯಲ್ಲಿ ಇದನ್ನೂ Mastities ಎಂದು ಕರೆಯುತ್ತಾರೆ. ಇಷ್ಟು ಹೇಳಿದ ಮೇಲೆ ನಿಮಗೆಲ್ಲರಿಗೂ ಇಲ್ಲಿರುವ ಸಂದಿಗ್ಧದ ಅರಿವಾಗಿರಬಹುದೆಂದು ಭಾವಿಸುತ್ತೇನೆ.

ದನಗಳಿಗೂ, ನಮಗೂ ಆಗಾಗ ಬರುವ ಶೀತ, ಜ್ವರ, ಅಜೀರ್ಣಗಳಂತೆ ಬ್ರುಸೆಲ್ಲಾ ಒಂದು ಸಾಮಾನ್ಯ ಖಾಯಿಲೆಯೇ? ಇಲ್ಲಾ ಕ್ಯಾನ್ಸರ್, ಏಡ್ಸ್ ಮಟ್ಟದ ಅಸಾಮಾನ್ಯ ಖಾಯಿಲೆಯೇ? ಬ್ರೂಸೆಲ್ಲಾ ಬಗ್ಗೆ ನಾವೆಷ್ಟು ಹೆದರಬೇಕು? ಅಥವಾ ಎಚ್ಚರ ವಹಿಸಬೇಕು? ಈ ಖಾಯಿಲೆಯ ಮೂಲ ದನಗಳೇ ಆದ್ದರಿಂದ ಮೂಲದಲ್ಲಿ ದೂರ ಮಾಡುವುದೇ ನಿಜವಾದ ಚಿಕಿತ್ಸೆಯಾಗಿರುವುದರಿಂದ, ದನಕರುಗಳ ಜೊತೆ ನಮ್ಮ ವ್ಯವಹಾರ, ಎಚ್ಚರ ಚಿಕಿತ್ಸೆ ಇತ್ಯಾದಿಗಳು ಹೇಗಿರಬೇಕು? ಎಂಬ ಅಂಶಗಳನ್ನು ಸಮರ್ಥರೂ, ಸಾಧಕರೂ, ಲೇಖಕರೂ ಆದ ಡಾ॥ ನಾಗಲೋಟಿಮಠ ಅವರು ಎರಡನೇ ಮುದ್ರಣದಲ್ಲಿ ಚರ್ಚಿಸಬೇಕೆಂಬುದು ನನ್ನ ಪ್ರಾರ್ಥನೆ. ಇಂಥ ದ್ವಿತಿಯ ಮುದ್ರಣ ಆದಷ್ಟು ಬೇಗ ಮೈತುಂಬಿ ಬರುವಂತಾಗಲೆಂಬುದು ನನ್ನ ಹರಕೆ.

ಎ. ಪಿ. ಚಂದ್ರಶೇಖರ

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಜಿ. ಎಸ್. ಭಟ್ಟ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೨. ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ, ಮೈಸೂರು-೯

೩. ಟಿ. ಎಸ್. ಲಲಿತ, ನಂ. ೭೦೨, ಮೊದಲನೆ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು–೫೭೦ ೦೦೯

೪. ಡಾ|| ಕೋಡಿರ ಅ. ಕುಶಾಲಪ್ಪ, ನಿರ್ದೇಶಕರು
ಇಂಡಿಯನ್ ಪ್ಲೈವುಡ್ ಇಂಡ್ರಸ್ಟ್ರೀಸ್
ರೀಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಪಿ. ಬಿ. ನಂ. ೨೨೭೩
ತುಮಕೂರು ರಸ್ತೆ, ಬೆಂಗಳೂರು–೫೬೦ ೦೨೨

೫. ಎಂ. ಶಂಕರನಾರಾಯಣ ಭಟ್, ನಂ. ೭೪೩, ೧೩ನೇ ಮುಖ್ಯರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೦೯

೬. ಡಾ|| ಕೆ. ವಿ. ರಾಘವೇಂದ್ರರಾವ್, ನಂ. ೨೮೭೭/೧೩,
ಚಾಮುಂಡೀಪುರಂ ಬಸ್ ನಿಲ್ದಾಣ ಎದುರು, ಮೈಸೂರು–೫೭೦೦೦೪

೭. ಡಾ|| ಕರವೀರಪ್ರಭು ಕ್ಯಾಲಕೊಂಡ, ವೈದ್ಯಾಧಿಕಾರಿ
೨೦೩, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ–೫೮೦೦೨೨

೮. ಗ. ನಾ. ಭಟ್ಟ, ಶ್ರೀ ಕಾವೇರಿ ಶಾಲೆ, ಆದಿಚುಂಚನಗಿರಿ ರಸ್ತೆ
ಕೆ. ಬ್ಲಾಕ್, ಕುವೆಂಪುನಗರ, ಮೈಸೂರು–೫೭೦ ೦೨೩

೯. ಕೆ. ಶಾಂತಾಮಣಿ, ನಂ. ೧೦೦೯, ಕಲ್ಪದ್ರುಮ, ಇ ಮತ್ತು ಎಫ್ ಬ್ಲಾಕ್
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು–೫೭೦ ೦೨೩

೧೦. ಶಂಸ ಐತಾಳ, ನಂ. ೬೧೧, ಚಂದನ, ೭ನೇ ಕ್ರಾಸ್, ಅನಿಕೇತನ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೧೧. ಡಾ|| ಎ. ಪಿ. ರಾಧಾಕೃಷ್ಣ
ಚೇತನ, ಆರ್ಯಾಪು ಅಂಚೆ, ಪುತ್ತೂರು (ದಕ್ಷಿಣ ಕನ್ನಡ)–೫೭೪ ೨೧೦

೧೨. ಡಿ. ಎನ್. ಶ್ರೀನಾಥ್, ಅಧ್ಯಾಪಕ
ಕಸ್ತೂರ್‌ಬಾ ವಿದ್ಯಾರ್ಥಿನಿಯರ ಪದವಿಪೂರ್ವ ಕಾಲೇಜು (ಹೈಸ್ಕೂಲ್ ವಿಭಾಗ)
ಅಂಚೆ ಪೆಟ್ಟಿಗೆ ನಂ. ೧೫, ಶಿವಮೊಗ್ಗ–೫೭೭ ೨೦೧

೧೩. ಎ. ಎಸ್. ನಾಡಕರ್ಣಿ, ನಂ. ೧೦೧, ಕೇತಾಯುನ್ ಮಾನ್ಶನ್
೩, ಶಹಾಜೀರಾಜೀ ಮಾರ್ಗ, ವೈಲ್‌ಪಾರ್ಲೆ (ಪೂರ್ವ) ಮುಂಬಯಿ-೪೦೦ ೦೫೭

೧೪. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯವ ಪಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ, ಮೈಸೂರು–೫೭೦ ೦೦೭

Reg. No. KRNN.29 / WPP 6

LICENCE No. 21
LICENCED TO POST WITH PAYMENT

ತಲಾ ರೂ. ೨-೫೦ ದರದಲ್ಲಿ ಸಮಿತಿಯ ಕೆಳಕಂಡ ಪ್ರಕಟಣೆಗಳು ದೊರೆಯುತ್ತವೆ.

ಪ್ರತಿ ಪುಸ್ತಕಗಳು ಅಷ್ಟದಳದಲ್ಲಿ ಗರಿಷ್ಠ ೩೨ ಪುಟಗಳನ್ನು ಹೊಂದಿರುತ್ತವೆ. ಅಂಚೆ ಮೂಲಕ ಪುಸ್ತಕಗಳನ್ನು ಅಪೇಕ್ಷಿಸುವವರು, ಅಂಚೆ ವೆಚ್ಚ ಪ್ರತ್ಯೇಕವಾಗಿ ಕಳುಹಿಸಬೇಕು.

ಪುಟ್ಟಾಚಾರಿಯ ಕಾಡುಕೋಳಿ—ಕುವೆಂಪು
ಗೋಪಾಲಕೃಷ್ಣ ಗೋಖಲೆ—ಡಾ॥ ದೇ. ಜವರೇಗೌಡ
ಗುರುದೇವ ರವೀಂದ್ರರು—ಡಾ॥ ಹಾ. ಮಾ. ನಾಯಕ
ಮಾನ್ವಿ ಪದಗಳು—ಕೆ. ಆರ್. ಲಿಂಗಪ್ಪ
ಡಾ॥ ಜಾಕೀರ್ ಹುಸೇನ್—ಭಾರತೀಸುತ
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರ ಭಟ್ಟ
ಪುರಾಣಗಳ ರಾಜ್ಯ—ಎಸ್. ಅನಂತನಾರಾಯಣ
ನಂಬಿಕೆಯ ನಂಟ—ದೇವನೂರು ಮಹಾದೇವ
ನಾಗಮಹಾಶಯ—ಉ. ಕಾ. ಸುಬ್ಬರಾಯಾಚಾರ್
ತಿರುವಲ್ಲವರ್—ಸಿಂಪಿ ಲಿಂಗಣ್ಣ
ಸೀತಾ ವನವಾಸ—ತ. ಸು. ಶಾಮರಾವ್
ದ್ರೌಪದಿಯ ಭಂಗ—ಕೂಡಲಿ ಚಿದಂಬರಂ
ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ
ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ
ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ
ಜಪಾನ್—ಸಿಸು ಸಂಗಮೇಶ
ನನ್ನ ಮಗುವಿನ ಶಾಲೆ—ವಿರ್ಜಿ ಅಣ್ಣಾರಾಯ
ನಾಗರಮರಿ—ತ.ರಾ.ಸು
ಅಲ್ಲಮ ಪ್ರಭು—ಡಾ॥ ಪ್ರಭುಶಂಕರ್
ಸಾಕ್ರೆಟೀಸ್—ಡಾ॥ ಸಿ. ಪಿ. ಕೃಷ್ಣಕುಮಾರ್
ಶಕುಂತಲೆ—ವಿ. ಸೀತಾರಾಮಯ್ಯ
ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ
ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್
ನಳಚರಿತ್ರೆಯ ಸಂಗ್ರಹ—ಎಚ್. ಎಂ. ಶಂಕರನಾರಾಯಣರಾವ್
ಮಕ್ಕಳ ಬೆಳವಣಿಗೆ—ಡಾ॥ ಬಿ. ಕುಪ್ಪುಸ್ವಾಮಿ

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone : 512485